ಐಕ್ಯರಂಗ

ಸಂಪುಟ ೧೧
ಸಂಚಿಕೆ ೩೩-೩೪

ಸೆಪ್ಟೆಂಬರ್
೧೭, ೧೯೮೯

ಭಾರತ ಕಮ್ಯೂನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಬೆಲೆ:ರೂ.೧-೨೫

ದೇಶವನ್ನೆಲ್ಲಾ ಆವರಿಸಿದ ಅಭೂತಪೂರ್ವ ಬಂದ್

ಎಡಪಕ್ಷಗಳ ಮತ್ತು ಇತರ ವಿರೋಧಪಕ್ಷಗಳ ಕರೆಗೆ ಓಗೊಟ್ಟು ಭಾರತದ ಜನತೆ ಆಗಸ್ಟ್ 30ರಂದು ರಾಜೀವ ಸರ್ಕಾರದ ವಿರುದ್ಧ ತಮ್ಮ ಅವಿಶ್ವಾಸವನ್ನು ನಿರ್ಣಾಯಕವಾಗಿ ಸಾರಿದ್ದಾರೆ. ಸರಕಾರ ಬಂದ್‌ನ್ನು ವಿಫಲಗೊಳಿಸಲು ತನ್ನ ಕೈಲಾದ್ದನ್ನೆಲ್ಲಾ ಮಾಡಿದರೂ 'ಭಾರತ್ ಬಂದ್' ಅತ್ಯಂತ ಯಶಸ್ವಿಯಾಗುವುದನ್ನು ತಡೆಯುವುದು ಅದರಿಂದಾಗಿಲ್ಲ. ಪೊಲೀಸ್ ಮತ್ತು ಅರೆಸೈನಿಕ ಪಡೆಗಳ ಭಾರೀ ಬಂದೋಬಸ್ತ್, ಪುಂಡ-ಪೋಕರಿಗಳ ಕ್ರಿಮಿನಲ್‌ಗಳ, ಮಾಫಿಯಾ ತಂಡಗಳ ಭಾರೀ ಬಳಕೆ, ಹಿಟ್ಲರನನ್ನು ನಾಚಿಸುವ ಅಪಪ್ರಚಾರ, ನೌಕರರಿಗೆ ಆಗಸ್ಟ್ 29ರಂದು ಕಚೇರಿ ಬಿಡದಂತೆ ಬೆದರಿಕೆ, ವಿರೋಧ ಪಕ್ಷಗಳ ನೇತೃತ್ವದ ರಾಜ್ಯ ಸರಕಾರಗಳಿಗೆ 'ಶಾಂತಿ ಮತ್ತು ಸಾಮಾನ್ಯ ಸ್ಥಿತಿ' ಕಾಪಾಡಬೇಕೆಂದು ನೆನಪಿಸುವ ಮೂಲಕ ಪರೋಕ್ಷ ಬೆದರಿಕೆ - ಜನ ಇವು ಯಾವುದಕ್ಕೂ ಜಗ್ಗಲಿಲ್ಲ. ಹಿಂದಿನ ಪ್ರತಿಭಟನಾ ಕಾರ್ಯಾಚರಣೆಗಳಿಂದ ದೂರವಿದ್ದ ಜನ ಕೂಡಾ ಈ ಬಾರಿ ಬಂದ್‌ನಲ್ಲಿ ಭಾಗವಹಿಸಿದ್ದರು. ಭಾರತ್ ಬಂದ್‌ನ ಅಭೂತಪೂರ್ವ ವ್ಯಾಪಕತೆಗೆ ತಮ್ಮ ಕೊಡುಗೆ ನೀಡಿದರು.

'ಬಂದ್ ಯಾರ ಹಿತರಕ್ಷಣೆಗಾಗಿ?' ಎಂದು ಆಕಾಶವಾಣಿ, ದೂರದರ್ಶನಗಳಲ್ಲಿ ಕಿವುಡಾಗುವಂತೆ ಮತ್ತೆ-ಮತ್ತೆ ವಿವಿಧ ರೀತಿಯಲ್ಲಿ ಕೇಳಿದ ಪ್ರಶ್ನೆಗೆ ಭಾರತದ ಜನತೆ ಆಗಸ್ಟ್ 30ರಂದು ಉತ್ತರ ನೀಡಿ ಬಾಯಿ ಮುಚ್ಚಿಸಿದರು.

'ಬಂದ್ ನಡೆದರೆ ರಾತ್ರಿ ಉಪವಾಸವೇ ಗತಿ' ಎಂದು ಯಾರ ಬಗ್ಗೆ ಈ ಸರಕಾರೀ ಪ್ರಚಾರವ್ಯವಸ್ಥೆ ಹತ್ತು ದಿನಗಳ ಕಾಲ ಮೊಸಳೆ ಕಣ್ಣೀರು ಸುರಿಸಿತೋ ಆ ಬಡಜನರು ತಮ್ಮ ಇಂತಹ ಸ್ಥಿತಿಗೆ ಕಾಂಗ್ರೆಸ್ ಸರಕಾರಗಳೇ ಹೊಣೆ ಎಂದು ಬಂದ್ ಯಶಸ್ವಿಗೊಳಿಸಿ ಸಾರಿ ಹೇಳಿದರು.

'ಬಸ್ ರೈಲು ನಿಲ್ಲಿಸಬೇಡಿ, ಕೋಮುವಾದ ನಿಲ್ಲಿಸಿ' ಎಂಬ ಕಾಂಗ್ರೆಸ್ ಸರ್ಕಾರಿ ಹಿತೋಪದೇಶ ಕಾಂಗ್ರೆಸ್‌ನ ಶುದ್ಧ ಗೋಸುಂಬೆತನ ಎಂದು ಸ್ವತಃ ಕಾಂಗ್ರೆಸ್ ಕಾರ್ಯಕರ್ತರೇ ಆಗಸ್ಟ್ 30ರಂದು ತ್ರಿಪುರಾ, ಕೇರಳ, ಪಶ್ಚಿಮ ಬಂಗಾಳ, ಮುಂಬೈ ಮತ್ತಿತರ ಕಡೆ ಬೀದಿಗಳಲ್ಲಿ ಸಾಬೀತು ಗೊಳಿಸಿದರು. ತ್ರಿಪುರಾದ ಮೇಲಾಘರ್‌ನಲ್ಲಿ ಒಂದು ಬಸ್ ನಿಲ್ಲಿಸಿ ಒಬ್ಬ ಪ್ರಯಾಣಿಕನ ಸಾವಿಗೆ ಕಾರಣರಾಗಿ ಮತ್ತು ಕೇರಳದಲ್ಲಿ ಮುಸ್ಲಿಂ ಲೀಗ್‌ನೊಂದಿಗೆ, ಮುಂಬೈಯಲ್ಲಿ ಶಿವಸೇನೆಯೊಂದಿಗೆ ಬಂದ್ ಮುರಿಯಲು ಕೈಮಿಲಾಯಿಸಿ ಸಾಬೀತುಗೊಳಿಸಿದರು.

ಬಂದ್‌ನ ಮೊದಲ ಅಪಪ್ರಚಾರಗಳ ಅಬ್ಬರ, ಬಂದ್ ದಿನದ ವಿಶೇಷ ಸುದ್ದಿ ಬುಲೆಟಿನ್‌ಗಳು ಇವುಗಳಿಂದಲೂ ತಮಗೇ ನಂಬಿಕೆ ಬರದ ಕಾಂಗ್ರೆಸ್ ಪ್ರಚಾರ ವ್ಯವಸ್ಥೆಯ ಕಾರಣರಾದರು. ಬಂದ್ ಮರುದಿನ ಕೂಡಾ ಒಬ್ಬ "ಪ್ರಸಿದ್ಧ ಪ್ರಗತಿಪರ" ಹಿಂದೀ ಲೇಖಕನಿಂದ ಟಿ.ವಿ.ಯಲ್ಲಿ ಬಂದ್‌ನ 'ವಸ್ತುನಿಷ್ಠ' ಪರಿಶೀಲನೆ ನಡೆಸಿದರು. ಅದರಲ್ಲಿ ಆತ 'ಮಕ್ಕಳು, ಕನ್ನಡಿ ಮತ್ತು ಕ್ಯಾಮರಾ ಸುಳ್ಳು ಹೇಳುವುದಿಲ್ಲ' ಎಂದ. ಅದೇ ಹೊತ್ತಿಗೆ ಆ ದಿನದ ಪೇಪರುಗಳಲ್ಲಿ ಬಂದ್ ಆರಂಭವಾಗುವ ಮೊದಲೇ ಫೋಟೋ ಹೊಡೆಯುತ್ತಿದ್ದ ಕಲ್ಕತ್ತಾ ದೂರದರ್ಶನ ಕ್ಯಾಮರಾ ಟೀಮುಗಳು ಜನರ ಕೈಯಲ್ಲಿ ಸಿಕ್ಕಿಬಿದ್ದವು ಎಂಬ ಸುದ್ದಿಯನ್ನು ಜನ ಓದುತ್ತಿದ್ದರು. ಬಂದ್ ಹೇಗೆ ವಿಫಲವಾಯಿತು ಎಂದು "ಪ್ರತ್ಯಕ್ಷ" ತೋರಿಸುವ ಚಪಲ ಇದಾಗಿತ್ತೆಂಬುದು ಸ್ಪಷ್ಟ.

ಕ್ಯಾಮರಾದಿಂದ ಸುಳ್ಳು ಹೇಳಿಸುವುದನ್ನು ಜನತೆಯ ಇಚ್ಛೆಯ ವಿರುದ್ಧ ಅಧಿಕಾರಕ್ಕೆ ಅಂಟಿಕೊಂಡಿರುವ ಭ್ರಷ್ಟ ರಾಜೀವ ಸರ್ಕಾರ ಕರಗತ ಮಾಡಿಕೊಂಡಿದೆ ಎಂಬುದನ್ನೂ ಆಗಸ್ಟ್ 30ರಂದು ತಮಗೆ ಮನದಟ್ಟಾಗಿದೆ ಎಂದು ಜನ ಸಾಮಾನ್ಯರು ತೋರಿಸಿಕೊಟ್ಟರು.

(ವಿವಿಧ ರಾಜ್ಯಗಳಿಂದ ಬಂದಿರುವ ಮೊದಲ ವರದಿಗಳು ಪುಟ 4ರಲ್ಲಿ)

ಮೊದಲ ಸುತ್ತಿನಲ್ಲಿ ಸುಲಭ ಗೆಲುವು

('ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯ)

ಹಲವು ವಿರೋಧ ಪಕ್ಷಗಳು ನಾಚಿಕೆಗೇಡಿ ರಾಜೀವ ಗಾಂಧಿ ಸರ್ಕಾರದ ರಾಜೀನಾಮೆ ಒತ್ತಾಯಿಸಿ ನೀಡಿದ್ದ ಭಾರತ್ ಬಂದ್ ಕರೆಗೆ ಉತ್ಸಾಹಪೂರ್ಣ, ಅಭೂತಪೂರ್ವ ಮತ್ತು ನಿಜವಾದ ದೇಶವ್ಯಾಪಿ ಸ್ಪಂದನ ದೊರೆತಿದೆ. ಪತ್ರಿಕಾ ವರದಿಗಳ ಪ್ರಕಾರ ಹರ್ಯಾಣ, ಅಸ್ಸಾಂ, ಪಶ್ಚಿಮಬಂಗಾಳ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳ ಈ ಎಲ್ಲಾ ಕಾಂಗ್ರೆಸ್ಸೇತರ ರಾಜ್ಯಗಳಲ್ಲಿ ಸಂಪೂರ್ಣ ಬಂದ್ ನಡೆಯಿತು. ಕಾಂಗ್ರೆಸ್(ಐ)ನ ಗುಂಪುಗಾರಿಕೆ ಪೀಡಿತ ರಾಜ್ಯ ಬಿಹಾರದಲ್ಲೂ ಅದು ಸಂಪೂರ್ಣವಾಗಿತ್ತು. ಹಿಂದೆಂದೂ ಇಂತಹ ವ್ಯಾಪಕ ಬಂದ್ ಕಂಡುಬಂದಿರಲಿಲ್ಲ. ಈ ರಾಜ್ಯಗಳಲ್ಲಿ ಕಾಂಗ್ರೆಸ್(ಐ) ಆಗಲೇ ಚುನಾವಣಾ ಸಮರ ಸೋತಿದೆ ಎಂಬ ತೀರ್ಮಾನಕ್ಕೇ ಬರಬೇಕಾಗಿದೆ. ಈ ರಾಜ್ಯಗಳಲ್ಲಿನ ಬಂದ್‌ನ್ನು ಉಪೇಕ್ಷಿಸುತ್ತಾ ಉಳಿದ ರಾಜ್ಯಗಳಲ್ಲಿ ಬಂದ್ ನಡೆದೇ ಇಲ್ಲವೆಂಬಂತೆ ಮಾತನಾಡುತ್ತಾರೆ. ಬಂದ್ ವಿಫಲವಾಗಿದೆ, ಸಂಪೂರ್ಣ ವಿಫಲವಾಗಿದೆ ಸೂಪರ್-ಸೋಲು ಕಂಡಿದೆ ಎಂದು ವರ್ಣಿಸುವಲ್ಲಿ ಅವರು ಪರಸ್ಪರ ಸ್ಪರ್ಧೆಗೇ ಇಳಿದಿದ್ದಾರೆ. ಕಾಂಗ್ರೆಸ್(ಐ) ಆಳ್ವಿಕೆಯ ರಾಜ್ಯಗಳಲ್ಲಿ ರಾಜೀವ ಸರ್ಕಾರಕ್ಕೆ ಜನತೆ ವಿಧೇಯರಾಗಿಯೇ ಉಳಿದಿದ್ದು ಬಂದ್‌ನ್ನು ವಿರೋಧಿಸಿದ್ದಾರೆಂದು ಹೇಳಿಕೊಳ್ಳುತ್ತಿದ್ದಾರೆ. ಅದಕ್ಕಿಂತ ದೊಡ್ಡ ಸುಳ್ಳು ಬೇರಿಲ್ಲ.

ಎಲ್ಲಾ ಕಾಂಗ್ರೆಸ್(ಐ) ಆಳ್ವಿಕೆಯ ರಾಜ್ಯಗಳಲ್ಲೂ ಬಂದ್ ವ್ಯಾಪಕವಾಗಿತ್ತು. ಅಂಗಡಿ, ವ್ಯಾಪಾರ, ವಾಣಿಜ್ಯ, ಕೈಗಾರಿಕೆ ಹಲವಾರು ಪಟ್ಟಣಗಳು, ನಗರಗಳಲ್ಲಿ ಸ್ತಬ್ಧಗೊಂಡಿತು. ಗೃಹಮಂತ್ರಿ ಬೂಟಾಸಿಂಗ್‌ರವರು ಈ ರಾಜ್ಯಗಳಲ್ಲಿ ಕೇಂದ್ರ ಸರ್ಕಾರದ ಕಚೇರಿಗಳು ಸಾಮಾನ್ಯ ರೀತಿಯಲ್ಲಿ ನಡೆದವೆಂದು ಹೇಳಿಕೊಳ್ಳುವಷ್ಟಕ್ಕೆ ತೃಪ್ತರಾಗಬೇಕಾಯಿತು. ನೌಕರರು ಕಚೇರಿಗಳಲ್ಲೇ ರಾತ್ರಿಯಲ್ಲಿ . ಆಶ್ರಯ ಪಡೆಯುವಂತೆ ಹೆದರಿಸಲಾಯಿತು. ಬಂದ್ ದಿನ ಯಾವ ಕೆಲಸವೂ ನಡೆಯಲಿಲ್ಲ, ಯಾವ ಫೈಲ್ ಕೂಡ ಸರಿಯಲಿಲ್ಲ ಎಂದು ಮಾತ್ರ ಅವರು ಹೇಳಲಿಲ್ಲ.

ಇಂಟಕ್, ಬಿ.ಎಮ್.ಎಸ್. ಬಿಟ್ಟು ಬೇರೆಲ್ಲಾ ಪ್ರಮುಖ ಕೇಂದ್ರ ಕಾರ್ಮಿಕ ಸಂಘಟನೆಗಳು ಬೆಂಬಲಿಸಿದ ಈ ಬಂದ್ ದೇಶದ ಕೈಗಾರಿಕಾ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಬಹುಪಾಲು ಸ್ತಬ್ಧಗೊಳಿಸಿತು. ಕಾಂಗ್ರೆಸ್ (ಐ) ದುರಾಡಳಿತದ ವಿರುದ್ಧ ಇಂತಹ ಸರ್ವವ್ಯಾಪಕ ಪ್ರತಿಭಟನೆ ಇತ್ತೀಚಿನ ದಿನಗಳಲ್ಲಿ ಕಂಡು-ಕೇಳರಿಯದ್ದು. ಆಳುವ ಪಕ್ಷದ ವಿರುದ್ಧ ಇಂತಹದೊಂದು ಸಾಮೂಹಿಕ ಪ್ರತಿಭಟನೆಯಲ್ಲಿ ಎಲ್ಲಾ ರಾಜ್ಯಗಳು ಹಿಂದೆಂದೂ ಇಷ್ಟೊಂದು ಆಳವಾಗಿ ತಮ್ಮನ್ನು ತೊಡಗಿಸಿಕೊಂಡಿರಲಿಲ್ಲ.

5 ನೇ ಪುಟಕ್ಕೆ

ಜಗತ್ತನ್ನು ಬದಲಾಯಿಸುವುದಕ್ಕಾಗಿ.....
ವಿಶ್ವವನ್ನು ಅಣುವಿನಾಶದಿಂದ ಸಂರಕ್ಷಿಸಿ

ಜಗತ್ತನ್ನು ಬದಲಾಯಿಸಬೇಕಾದರೆ ಮೊದಲು ಜಗತ್ತನ್ನು ಕಾಪಾಡಬೇಕು: ಜಗತ್ತನ್ನು ಕಾಪಾಡಬೇಕಾದರೆ ಜಗತ್ತನ್ನು ಬದಲಾಯಿಸಬೇಕು. ಆದ್ದರಿಂದ ಎಲ್ಲಾ ಭೇದ ಭಾವಗಳನ್ನು ಮೀರಿ ಶಾಂತಿ ಚಳುವಳಿಯನ್ನು ಬಲಪಡಿಸಲು ಮುಂದಾಗಬೇಕೆಂದು ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದತಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಹಾಗೂ ಸಿ.ಪಿ.ಐ.(ಎಂ) ಕೇಂದ್ರ ಸೆಕ್ರಟಾರಿಯೇಟ್ ಸದಸ್ಯರಾದ ಕಾಂ॥ ಸೀತಾರಾಮ್ ಯೆಚೂರಿಯವರು ಜನತೆಗೆ ಕರೆ ನೀಡಿದರು.

ಎ.ಐ.ಪಿ.ಎಸ್.ಓ. ರಾಷ್ಟ್ರೀಯ ಮಂಡಳಿಯ ವಿಸ್ತೃತ ಸಭೆಯ ಬಳಿಕ ಸೆಪ್ಟೆಂಬರ್ ೩ರಂದು ಸಂಜೆ ಹೈದರಾಬಾದಿನ "ಗಗನ್ ಮಹಲ್"ನಲ್ಲಿ ಏರ್ಪಡಿಸಲಾಗಿದ್ದ ಬಹಿರಂಗ ಸಭೆಯು ನ್ನುದ್ದೇಶಿಸಿ ಮಾತನಾಡುತ್ತಾ ಯೆಚೂರಿಯವರು ಶಾಂತಿ ಚಳುವಳಿಯ ಸಾಮ್ರಾಜ್ಯಶಾಹಿ ವಿರೋಧಿ ಅಂಶವನ್ನು ಒತ್ತಿ ಹೇಳಿದರು. ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ರಾಜಿಯಿಲ್ಲದ ಹೋರಾಟವನ್ನು ಮುಂದುವರಿಸಬೇಕೆಂದು ಮತ್ತು ಇದೇ ಸಂದರ್ಭದಲ್ಲಿ ಭಾರತ ದೇಶದ ಸಮಗ್ರತೆ ಮತ್ತು ಸಾರ್ವಭೌಮತ್ವವನ್ನು ಕಾಪಾಡಲು ಜನತೆಯನ್ನು ಅಣಿನೆರೆಸಬೇಕೆಂದು ಯೆಚೂರಿಯವರು ಕರೆ ನೀಡಿದರು.

ಸಾಮಾಜಿಕ-ಆರ್ಥಿಕ ಪರಿವರ್ತನೆಗೆ ಕರೆ:- ಎ.ಐ.ಪಿ.ಎಸ್.ಓ. ಅಧ್ಯಕ್ಷರಾದ ಶ್ರೀ ರಹೀಮುದ್ದೀನ್‌ಖಾನ್‌ರವರು ಮಾತನಾಡುತ್ತಾ ಸಾಮ್ರಾಜ್ಯಶಾಹಿಯ ಅಪಾಯವು ಸಂಪೂರ್ಣವಾಗಿ ತೊಲಗಿಲ್ಲ, ಬದಲಾಗಿ ಸಮಾಜವಾದಿ ದೇಶಗಳಲ್ಲಿ ಹಾಗೂ ಮೂರನೆಯ ಜಗತ್ತಿನ ದೇಶಗಳಲ್ಲಿ ಹೊಸ ರೂಪದಲ್ಲಿ ಚಟುವಟಿಕೆಯಲ್ಲಿ ತೊಡಗಿದೆ ಎಂದು ಅಭಿಪ್ರಾಯಪಟ್ಟರು. ಮೂರನೆಯ ಜಗತ್ತಿನ ದೇಶಗಳ ವಿದೇಶಿ ಸಾಲ ಸಾವಿರ ಬಿಲಿಯನ್ ಡಾಲರ್‌ಗಳಿಗೆ

8ನೇ ಪುಟಕ್ಕೆ

ಕರ್ನಾಟಕ: ರಾಜ್ಯಾದ್ಯಂತ ಯಶಸ್ವಿ ಬಂದ್

ಪ್ರಧಾನಿಯೊಬ್ಬರ ರಾಜೀನಾಮೆಗಾಗಿ ಸರ್ಕಾರವೊಂದರ ವಿಫಲತೆಯ ವಿರುದ್ಧ ಯಶಸ್ವಿಯಾದ "ಭಾರತ ಬಂದ್" ದೇಶದ ಇತಿಹಾಸದಲ್ಲಿಯೇ ಪ್ರಥಮ ಬಂದ್. ಇಡೀ ರಾಜಕೀಯಕ್ಕೆ ನೀಡಿದ ಮಹತ್ವದ ತಿರುವು. "ನಮ್ಮಿಂದ ಚುನಾಯಿತರಾದ ನೀವು ಏನು ಮಾಡಿದರೂ ನಡೆದೀತು" ಎಂಬುದನ್ನು ಸುಳ್ಳು ಮಾಡುತ್ತೇವೆ ಎಂದು ಭಾರತದ ಜನತೆ ಒಕ್ಕೊರಲಿನಿಂದ ಘೋಷಿಸಿದ ದಿನ. ಜನತೆ ಕ್ರಿಯಾಶೀಲವಾಗಿ ರಾಜಕೀಯವನ್ನು ನಿಯಂತ್ರಿಸಲು ಪ್ರಯತ್ನಿಸಿದ ಮಹತ್ವದ ಕ್ಷಣ. ಈ ಅಭೂತಪೂರ್ವ ಘಟನೆಯಲ್ಲಿ ನಾವೂ ನಿಮ್ಮೊಡನಿದ್ದೇವೆ ಎಂದು ಕರ್ನಾಟಕದ ಜನತೆ ಸಾರಿದೆ.

ಬಂಡವಾಳಶಾಹಿ ವಾರ್ತಾ ಮಾಧ್ಯಮಗಳು ಏನೇ ಬಿತ್ತರಿಸಿದರೂ, ಬರೆದರೂ ಕರ್ನಾಟಕದ ಜನ ಸಾಮಾನ್ಯರಿಗೆ ಬಂದ್ ಯಶಸ್ವಿಯಾಗಿದೆ ಎಂದು ತಿಳಿದಿದೆ. ವಿವಿಧ ಜಿಲ್ಲೆಗಳಿಂದ ಬಂದ ಸುದ್ದಿಗಳು ರಾಜ್ಯಾದ್ಯಂತ ಜನತೆ-ಕಾರ್ಮಿಕರು, ರೈತರು, ಯುವಕರು ವಿದ್ಯಾರ್ಥಿಗಳು, ಮಹಿಳೆಯರು ಸ್ವಯಂಸ್ಫೂರ್ತಿಯಿಂದ ಸಂಘಟಿತರಾಗಿ ಬಂದ್ ಆಚರಿಸಿದ್ದಾರೆ. "ರಾಜೀವ್ ಹಟಾವ್" ಎಂಬ ಅವರ ಮನದಾಳದ ಬಯಕೆ ಗೊತ್ತಾಗುವಂತೆ ಮಾಡಿದ್ದಾರೆ.

ಕೇಂದ್ರ ಸರ್ಕಾರದ, ಹಾಗೂ ಕಾಂಗ್ರೆಸ್‌ನ ಅಬ್ಬರದ ಪ್ರಚಾರ ಬೆದರಿಕೆಗಳನ್ನು ಎದುರಿಸಿ ಬಂದ್‌ಗೆ ಜನತೆ ಓಗೊಟ್ಟಿದ್ದಾರೆ. ಬಂದ್ ಅನ್ನು ಯಶಸ್ವಿ ಮಾಡುವಲ್ಲಿ ಸಿ.ಪಿ.ಐ.(ಎಂ) ಕಾರ್ಯಕರ್ತರು ದೇಶದಲ್ಲಿ ಎಲ್ಲೆಲ್ಲಿಯೂ ಮುಂಚೂಣಿಯಲ್ಲಿ ನಿಂತಿದ್ದಾರೆ. ಕಾಂಗ್ರೆಸ್ ಗೂಂಡಾಗಳಿಂದ ಮಾರಾ ಹೊಂದಿದವರಲ್ಲಿ, ಪೆಟ್ಟು ತಿಂದವರಲ್ಲಿ, ಬಂಧನಕ್ಕೊಳಗಾದವರಲ್ಲಿ ಸಿ.ಪಿ.ಐ(ಎಂ) ನಾಯಕರು, ಕಾರ್ಯಕರ್ತರ ಬಗ್ಗೆ ಬರುತ್ತಿರುವ ಸುದ್ದಿಗಳೇ ಇದಕ್ಕೆ ಸಾಕ್ಷಿಯಾಗಿದೆ. ದೇಶದ ಎಲ್ಲಾ ಪತ್ರಿಕೆಗಳು ಇದನ್ನು ಒಪ್ಪಬೇಕಾಗಿದೆ.

ಅದೇ ರೀತಿಯಲ್ಲಿ ಕರ್ನಾಟಕದಲ್ಲಿಯೂ ಪಕ್ಷದ ನಾಯಕರು, ಕಾರ್ಯಕರ್ತರು ಬೀದಿಗಿಳಿದು [illegible] [illegible] [illegible] [illegible] 1 [illegible] [illegible]

[illegible]ನೇ ಪುಟಕ್ಕೆ

ನಮ್ಮೀಯುಗದಲ್ಲಿ ಘಟನಾಚಕ್ರ ಚಲಿಸಲಾರಂಭಿಸಿದಾಗ ಎಷ್ಟೊಂದು ವೇಗದಿಂದ ತ್ವರಿತವಾಗಿ ಚಲಿಸುತ್ತದೆಂದರೆ ಅದರೊಡನೆ ಹೆಜ್ಜೆ ಹಾಕುವುದೇ ಕಷ್ಟವಾಗುತ್ತದೆ.

ಚೀಣಾದಲ್ಲಿ ಎರಡು ತಿಂಗಳ ಕ್ರಾಂತಿ-ವಿರೋಧಿ ಕ್ಷೋಭೆಯಿಂದಾಗಿ ಅದೇ ಸಮಯದಲ್ಲಿ ನಡೆದ ಚೀಣಾ- ಸೋವಿಯತ್ ಶೃಂಗ ಸಭೆಯ ಅಂತರಾಷ್ಟ್ರೀಯ ಪ್ರಾಮುಖ್ಯತೆಗಳ ಬಗ್ಗೆ ಪ್ರಗತಿಪರ ಶಕ್ತಿಗಳು ಆಳವಾದ ಅಧ್ಯಯನ ನಡೆಸಿಲ್ಲ ಎನ್ನುವ ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯ ಕಾಂ॥ ಎಂ. ಬಸವಪುನ್ನಯ್ಯ ಇಲ್ಲಿ ಈ ಘಟನೆಯ ಚಾರಿತ್ರಿಕ ಮಹತ್ವವನ್ನು ಪರಿಶೀಲಿಸಿದ್ದಾರೆ.

ಅಂಧಕಾರದ ಅಧ್ಯಾಯ ಕಳೆದು ಹೊಸ ಅಧ್ಯಾಯ ಆರಂಭಿಸಿದೆ

ಚೀಣಾ ಜನತಾ ಗಣರಾಜ್ಯದ ರಾಜಧಾನಿ ಬೀಜಿಂಗ್‌ನಲ್ಲಿ ಮೇ 15 ರಿಂದ 18 ರ ವರೆಗೆ ನಡೆದ ಚೀಣಾ ಸೋವಿಯತ್ ಶೃಂಗಸಭೆ ಒಂದು ದೊಡ್ಡ ಚಾರಿತ್ರಿಕ ಮಹತ್ವದಘಟನೆ. ಸೋವಿಯೆತ್ ಒಕ್ಕೂಟದಿಂದ ಮಿಖೈಲ್ ಗೋರ್ಬಚೆವ್ ಹಾಗೂ ಸಮಾಜವಾದಿ ಚೀಣಾದಿಂದ ಡಿಂಗ್ ಕ್ಸಿಯಾವೋಪಿಂಗ್ ನೇತೃತ್ವದ ಎರಡು ಪ್ರತಿನಿಧಿ ಮಂಡಳಿಗಳ ನಡುವಿನ ಈ ಸಭೆಯ ಯಶಸ್ವೀ ಫಲಿತಾಂಶವನ್ನು ಮೇ 18ರಂದು ಹೊರಡಿಸಿದ ಜಂಟಿ ಹೇಳಿಕೆಯಲ್ಲಿ ಅಳವಡಿಸಲಾಗಿದೆ. ಈ ಹೇಳಿಕೆಯಲ್ಲಿ ಮೂರು ದಿನಗಳಲ್ಲಿ ನಡೆದ ಮಾತುಕತೆಗಳ ವಿವಿಧ ಆಯಾಮಗಳನ್ನು ಪ್ರತಿಬಿಂಬಿಸುವ 18 ಪರಿಚ್ಛೇದಗಳಿವೆ.

ಅವುಗಳಲ್ಲಿ ಈ ಎರಡು ಬೃಹತ್ ಸಮಾಜವಾದಿ ದೇಶಗಳ ನಡುವೆ ಮತ್ತೆ ಸಾಮಾನ್ಯ ಸಂಬಂಧಗಳನ್ನು ಸ್ಥಾಪಿಸುವುದನ್ನು ಘೋಷಿಸುವ ಪರಿಚ್ಛೇದ ಹಾಗೂ ಸೋವಿಯತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ ಮತ್ತು ಚೀಣಾ ಕಮ್ಯುನಿಸ್ಟ್ ಪಕ್ಷದ ನಡುವೆ ಸೋದರ ಸಂಬಂಧಗಳನ್ನು ಬೆಸೆಯುವ ನಿರ್ಧಾರ ಕುರಿತಾದ ಪರಿಚ್ಛೇದ- ಈ ಶೃಂಗಸಭೆಯ ಚಾರಿತ್ರಿಕ ಸಾಧನೆಯನ್ನು ಎತ್ತಿ ತೋರಿಸುವ ಎರಡು ಅಂಶಗಳು. ಪೂರ್ಣ ಮೂವತ್ತು ವರ್ಷಗಳ ವೈಷಮ್ಯಪೂರ್ಣ ಸಂಬಂಧಗಳ ಅವಧಿಯ ನಂತರ, 7500 ಕಿ.ಮೀ. ಉದ್ದದ ಎರಡು ದೇಶಗಳ ನಡುವಿನ ಗಡಿಯುದ್ದಕ್ಕೂ ಅಗಾಧ ಮಿಲಿಟರಿ ತಿಕ್ಕಾಟಕ್ಕೆ ದಾರಿ ಮಾಡಿದ ವೈಷಮ್ಯದ ಅವಧಿಯ ನಂತರ ಜರುಗಿರುವ ಸಾಧನೆಯಿದು.

ಈ ಎರಡು ದೇಶಗಳು ಮತ್ತು ಪಕ್ಷಗಳ ನಡುವಿನ ಸಂಬಂಧಗಳು ಹೀಗೆ ಸಾಮಾನ್ಯಗೊಂಡಿರುವುದು ಶಾಂತಿ, ಪ್ರಜಾ ಪ್ರಭುತ್ವ, ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಸಮಾಜವಾದದ ವಿಶ್ವ ಶಕ್ತಿಗಳ ಬೆಳವಣಿಗೆ ತೀವ್ರಗೊಳಿಸುವ ಅಪಾರ ಹೊಸ ಸಾಧ್ಯತೆಗಳನ್ನು ತೆರೆದಿಟ್ಟಿದೆ. ಇದರಿಂದ ವಿಶ್ವ ಬಂಡವಾಳಶಾಹಿ ಪ್ರಭುತ್ವಗಳು ಎಷ್ಟೊಂದು ಆತಂಕಗೊಂಡವೆಂದರೆ ಚೀಣಾ ಕಮ್ಯುನಿಸ್ಟ್ ಪಕ್ಷದ ಮುಂದಾಳುತ್ವದ ವಿರುದ್ಧ ಬುಡಮೇಲು ಕೃತ್ಯ ನಡೆದಾಗ ಅವರು ನಾಚಿಕೆಯಿಲ್ಲದೆ ಬಹಿರಂಗವಾಗಿ ಚೀಣಾ ಜನತಾ ಗಣ ತಂತ್ರದ ವಿರುದ್ಧ ನಿಲುವು ತಳೆದರು. ಎರಡು ತಿಂಗಳ ಈ ಕ್ಷೋಭೆಯಿಂದಾಗಿ ಚೀಣಾ-ಸೋವಿಯತ್ ಶೃಂಗ ಸಭೆ ಪ್ರಸ್ತುತ ಅಂತರಾಷ್ಟ್ರೀಯ ಸನ್ನಿವೇಶದ ಮೇಲೆ, ಮುಂಬರುವ ದಿನಗಳ ಬೆಳವಣಿಗೆಗಳ ಮೇಲೆ ಬೀರಿರುವ ಅಪಾರ ಪ್ರಭಾವದ ಬಗ್ಗೆ ವಿಶ್ವ ಪ್ರಗತಿಪರ ಶಕ್ತಿಗಳು ಆಳವಾದ ಅಧ್ಯಯನ ನಡೆಸದಿರುವುದು ಖೇದದ ಸಂಗತಿ.

ಮೂರು ದಶಕಗಳ ಚೀಣಾ ಸೋವಿಯತ್ ಜಗಳದ ಅಂಧಕಾರ ಮಯ, ಬೇಸರದ ಅಧ್ಯಾಯ ಈಗ ಮುಗಿದಿದೆ. ಬಹಳ ನಿರೀಕ್ಷೆಯ, ಆಶಾ ಭಾವನೆಯ ಸಂಪೂರ್ಣ ಹೊಸ ಅಧ್ಯಾಯವೊಂದು ಆರಂಭವಾಗಿದೆ.

"ನಮ್ಮ ಕೆಲಸ ಈಗ ಭೂತಕಾಲವನ್ನು ದೂರತಳ್ಳಿ ಭವಿಷ್ಯವನ್ನು ಹುಡುಕುವುದು. ಇದೊಂದು ಕ್ಲಿಷ್ಟವಾದ ಕೆಲಸ. ಯಾಕೆಂದರೆ ಕೆಲವು ಕಷ್ಟದ ಪ್ರಶ್ನೆಗಳನ್ನು ನಾವಿಲ್ಲಿ ಉತ್ತರಿಸಬೇಕಾಗುತ್ತದೆ. ಇವುಗಳಲ್ಲಿ ಕೆಲವು ಭೂತಕಾಲದಲ್ಲಿ ಬೇರು ಬಿಟ್ಟ ಪ್ರಶ್ನೆಗಳು. ಭೂತಕಾಲವನ್ನು ತಿಳಿಯದೆ ಇವುಗಳ ಪರಿಹಾರ ಸಾಧ್ಯವಿಲ್ಲ. ಅದರರ್ಥ ಭೂತಕಾಲವನ್ನು ಕೆದಕಬೇಕೆಂದಲ್ಲ. ಮುನ್ನಡೆಯಲು ನಾವು ಭೂತಕಾಲವನ್ನು ತಿಳಿದಿರಬೇಕು, ನೆನಪಿಸಬೇಕು, ಅದರಿಂದ ಕಲಿಯಬೇಕು. ನಮ್ಮ ಮುಖ್ಯ ಕೆಲಸ ಭವಿಷ್ಯವನ್ನು ಹುಡುಕುವುದು".

ಈ ಶೃಂಗ ಸಭೆಯ ಮೊದಲು ಚೀಣೀ ಮುಂದಾಳು ಡೆಂಗ್ ಕ್ಸಿಯಾವೋಪಿಂಗ್ ಹೇಳಿರುವ ಈ ಮಾತು ಪೂರ್ಣ ಸರಿ. ಮೂರು ದಶಕಗಳ ಅಂಧಿಕಾರದಲ್ಲಿ ಈ ಎರಡು ಪಕ್ಷಗಳ ಪಾತ್ರವೇನೆಂದು ಪರಿಶೀಲಿಸುವುದು ಈ ಘಟ್ಟದಲ್ಲಿ ತಪ್ಪಾಗುತ್ತದೆ. ಅಂದರೆ ಈ ಬಗ್ಗೆ ಚರ್ಚೆಯನ್ನು "ನಿರ್ಬಂಧಿಸಬೇಕು" ಎಂದೇನೂ ನಾವು ಒತ್ತಾಯಿಸುವುದಿಲ್ಲ. ಆದರೆ ಇಂತಹ ಚರ್ಚೆ ಶಾಂತಿ, ಪ್ರಜಾಪ್ರಭುತ್ವ, ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಸಮಾಜವಾದದ ಧ್ಯೇಯಸಾಧನೆಗೆ ಸಹಾಯಕವಾಗುವುದಕ್ಕಿಂತ ಹಾನಿಕಾರಕವಾಗುವ ಸಂಭವವೇ ಹೆಚ್ಚು ಎಂಬುದು ನಮ್ಮ ಖಂಡಿತ ಅಭಿಪ್ರಾಯ.

ನಮ್ಮೀ ಯುಗದಲ್ಲಿ ಘಟನಾಚಕ್ರ ಚಲಿಸಲಾರಂಭಿಸಿದಾಗ ಎಷ್ಟೊಂದು ವೇಗದಿಂದ, ತ್ವರಿತವಾಗಿ ಚಲಿಸುತ್ತದೆಂದರೆ ಅದರೊಡನೆ ಹೆಜ್ಜೆ ಹಾಕುವುದೇ ಕಷ್ಟವಾಗುತ್ತದೆ. ಇಲ್ಲಿ ಗೋರ್ಬಚೇವ್ ಚೀಣಾದ 'ರಾಷ್ಟ್ರೀಯ ಜನತಾ ಅಧಿವೇಶನದಲ್ಲಿ ಮಾಡಿದ ಭಾಷಣದ ಕೆಲವು ಅಂಶಗಳನ್ನು ನೆನಪಿಸಿಕೊಳ್ಳುವುದು ಸೂಕ್ತ.

"ಮಾನವಕುಲ ಈಗ ಸಂಕ್ರಮಣ ಕಾಲದಲ್ಲಿದೆ" ಎಂದು ಹೇಳುತ್ತಾ ಗೋರ್ಬಚೇವ್ "ಚೀಣಾದ ರಾಜಧಾನಿ ಈಗ ಯಾವುದೇ ರೀತಿಯಲ್ಲಿ ನೋಡಿದರೂ ಗಮನಾರ್ಹವಾದ ಒಂದು ಘಟನೆಗೆ ಸಾಕ್ಷಿಯಾಗುತ್ತಿದೆ. 7500 ಕಿ.ಮೀ. ದ ಉದ್ದದ ಗಡಿ ಹೊಂದಿರುವ ವಿಶ್ವದ ಎರಡು ಪ್ರಮುಖ ದೇಶಗಳ ಸಂಬಂಧಗಳು ಈಗ ಒಂದು ಗಟ್ಟಿ ನೆಲದ ಮೇಲೆ ನಿಲ್ಲುತ್ತಿವೆ. ಅಲ್ಲದೆ ಮೂರು ದಶಕಗಳಲ್ಲಿ ಇದು ನಮ್ಮೆರಡು ಸಮಾಜವಾದಿ ದೇಶಗಳ ಮುಂದಾಳುಗಳ ನಡುವಿನ ಮೊದಲ ಸಭೆ" ಎಂದರು.

ಮುಂದುವರೆಸುತ್ತಾ "ಕೈಗಾರಿಕೀಕರಣದತ್ತ ದಾಪುಗಾಲು, ಕಷ್ಟಕರ ಸಂಬಂಧಗಳ ಪರಿವರ್ತನೆ. ಜನತೆಯ ಪ್ರಜ್ಞೆ ಹಾಗೂ ಉತ್ಸುಕತೆಗೆ ಪ್ರೋತ್ಸಾಹ. ಚೀಣೀ ಸಮಾಜದ ಆಧ್ಯಾತ್ಮಿಕ ಸಂಸ್ಕೃತಿ ಶ್ರೀಮಂತಗೊಳ್ಳುತ್ತಿರುವುದು- ಇವೆಲ್ಲಾ ಧೀರ ಹಾಗೂ ಆಳ ಸುಧಾರಣೆಗಳ ಮೂಲಕ ಸಾಧ್ಯಗೊಳ್ಳುತ್ತಿದೆ. ವಿಶ್ವಾದ್ಯಂತ ಇದನ್ನು ಆಸಕ್ತಿಯಿಂದ ಗಮನಿಸಲಾಗುತ್ತಿದೆ" ಎಂದರು.

ಈ ಶೃಂಗಸಭೆಯ ಎರಡು ವಾರಗಳ ನಂತರ ಒಂದು ಗಂಭೀರ, ಸಾಮಾಜಿಕ "ಧೂಳು ತುಂಬಿದ ಬಿರುಗಾಳಿ" ಚೀಣೀ ಮುಖ್ಯ ಭೂ ಭಾಗದಲ್ಲಿ ಬೀಸಿ ಹೋಯಿತು. ರಾಜಧಾನಿ ಬೀಜಿಂಗ್ ಇದರ ಕೇಂದ್ರವಾಗಿತ್ತು. ನಿಸ್ಸಂಶಯವಾಗಿಯೂ ಇದು ಅಪಾರ ಜೀವಹಾನಿ, ಆಸ್ತಿಹಾನಿ ಮಾಡಿತಷ್ಟೇ ಅಲ್ಲ, ಸಮಾಜವಾದಿ ಚೀಣಾದ ಹೆಚ್ಚುತ್ತಿದ್ದ ಖ್ಯಾತಿಯನ್ನು ಮುಸುಕಿತು.

ಆದರೆ ಅದೇ ಕಾಲಕ್ಕೆ ಅಮೆರಿಕನ್ ಸಾಮ್ರಾಜ್ಯಶಾಹಿ ಹರಿಯಬಿಟ್ಟ ಶೀತಲ ಯುದ್ಧಕ್ಕಿಂತಲೂ ಸಮಾಜವಾದಕ್ಕೆ ಹೆಚ್ಚು ಘಾತಕವಾದ ಈ ಎರಡು ದೇಶಗಳ ಸಾಮಾಜಿಕ-ಆರ್ಥಿಕ ಬೆಳವಣಿಗೆಯ ಮೇಲೆ ಘಾತಕ ಪ್ರಭಾವ ಬೀರಿದ ಮೂವತ್ತು ವರ್ಷಗಳ ಮಿಲಿಟರಿ ತಿಕ್ಕಾಟದ ನಂತರ ಹೊಸ ಅಧ್ಯಾಯವೊಂದು ಕೂಡ ಆರಂಭಗೊಂಡಿತು. ಈ ಎರಡು ದೇಶಗಳು ವಾಣಿಜ್ಯ, ಉದ್ದಿಮೆ, ವಿಜ್ಞಾನ, ತಂತ್ರಜ್ಞಾನದ ರಂಗಗಳಲ್ಲಿ ಸಹಿ ಹಾಕಿದ ಹಲವಾರು ಒಪ್ಪಂದಗಳು ಮುಂದಿನ ದಿನಗಳಲ್ಲಿ ಅಪಾರ ಬೆಳವಣಿಗೆಯ ಸಾಧ್ಯತೆ ಹೊಂದಿವೆ.

ಈ ಮಿತ್ರತ್ವ ಕೂಡಿ ಬಂದಿರುವುದು ಕಳೆದ ನಾಲ್ಕು ವರ್ಷಗಳಿಗಿಂತಲೂ ಹೆಚ್ಚಿನ ಸಿದ್ಧತೆಯ ನಂತರವೇ ಎಂಬುದೂ ಗಮನಾರ್ಹ. "ಭವಿಷ್ಯದ ಬಗ್ಗೆ ಯೋಚಿಸುವಾಗ, ಈ ಎರಡು ದೇಶಗಳ ನಡುವಿನ ಸಹಕಾರದ ಸಾಧ್ಯತೆ ಅಪಾರ. ಯಾಕೆಂದರೆ ಇದು ಎರಡೂ ದೇಶಗಳ ಹಿತಾಸಕ್ತಿಗಳಿಗೆ ಅನುಗುಣವಾದದ್ದು. ಯಾಕೆಂದರೆ ನಮ್ಮ ಜನತೆಗೆ ಅತ್ಯಂತ ಪ್ರಿಯವಾದ ಸಮಾಜವಾದ ಮತ್ತು ಶಾಂತಿ ಅವಿಭಾಜ್ಯ" ಎಂದಿತ್ತು. 1986ರಲ್ಲಿ ನಡೆದ ಸಿ.ಪಿ.ಎಸ್.ಯು.ನ 27ನೇ ಮಹಾಧಿವೇಶನದ ರಾಜಕೀಯ ವರದಿ.

ವಿಶ್ವ ಸಮಾಜವಾದೀ ಬೆಳವಣಿಗೆಯ ಸದ್ಯದ ಘಟ್ಟದಲ್ಲಿ ಚೀಣಾ ಸೋವಿಯತ್ ಉತ್ತಮ ಸಂಬಂಧಗಳ ಮಹತ್ವವನ್ನು ಇದು ಸಾಕಷ್ಟು ಎತ್ತಿ ತೋರಿಸುತ್ತದೆ.

ಇಲ್ಲಿ ಲೆನಿನ್‌ರ ಒಂದು ಚಾರಿತ್ರಿಕ ಉದ್ಗಾರವನ್ನು ನೆನಪಿಸುವುದು ಸೂಕ್ತ. ಆರೂವರೆ ದಶಕಗಳ ಹಿಂದೆ ಮಾರ್ಚ್ 2, 1923 ರಂದು ಅವರು "ಹೋರಾಟದ ಫಲಿತಾಂಶವನ್ನು ಅಂತಿಮವಾಗಿ ರಷ್ಯಾ, ಭಾರತ, ಚೀಣಾ ಮತ್ತಿತರ ದೇಶಗಳಲ್ಲಿ ವಿಶ್ವದ ಬಹುಪಾಲು ಜನತೆ ಇದ್ದಾರೆ ಎಂಬ ಅಂಶ ನಿರ್ಧರಿಸುತ್ತದೆ. ಕಳೆದ ಕೆಲವು ವರ್ಷಗಳಿಂದ ವಿಮೋಚನಾ ಹೋರಾಟಕ್ಕೆ ಅತ್ಯಂತ ತ್ವರಿತ ಗತಿಯಲ್ಲಿ ಸೆಳೆಯಲ್ಪಟ್ಟಿರುವುದು, ಈ ಬಹುಪಾಲು ಜನಗಳೇ. ಆದ್ದರಿಂದ ವಿಶ್ವ ಹೋರಾಟದ ಅಂತಿಮ ಫಲಿತಾಂಶವೇನು ಎಂಬ ಬಗ್ಗೆ ಸ್ವಲ್ಪವೂ ಶಂಕೆ ಬೇಡ. ಒಂದರ್ಥದಲ್ಲಿ ಸಮಾಜವಾದದ ಪೂರ್ಣ ವಿಜಯ ಖಂಡಿತ" ಎಂದಿದ್ದರು.

ಲೆನಿನ್ ಭವಿಷ್ಯವಾಣಿಯಂತೆ ಸೋವಿಯತ್ ಒಕ್ಕೂಟ ಮತ್ತು ಚೀಣಾದಲ್ಲಿ ಸಮಾಜವಾದೀ ಕ್ರಾಂತಿ ಈಗಾಗಲೇ ಗೆದ್ದು ಸಮಾಜವನ್ನು ಕ್ರೋಢೀಕರಿಸುವ ಕಟ್ಟುವ ಕಷ್ಟಕರವಾದ, ತೀವ್ರ ಹೋರಾಟ ಸಾಗುತ್ತಿದೆ. ಇನ್ನು ಭಾರತದ ಬಗ್ಗೆ ಹೇಳುವುದಾದರೆ, ಲೆನಿನ್‌ರ ದೃಷ್ಟಿಯಲ್ಲಿದ್ದುದು . ಈಗಿನ ಭಾರತವಲ್ಲ, ಆಗ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಆಳ್ವಿಕೆಯಲ್ಲಿದ್ದ ಸಮಸ್ತ ಭಾರತೀಯ ಉಪಖಂಡ. ಸಾಮ್ರಾಜ್ಯಶಾಹಿಗಳ "ಬೀಳ್ಕೊಡುಗೆಯ ಉಡುಗೊರೆ"ಯಾದ ವಿಭಜನೆಯ ನಂತರ ಕೂಡ ಜನಸಂಖ್ಯೆಯಲ್ಲಿ ಭಾರತಕ್ಕಿಂತ ದೊಡ್ಡ ದೇಶ ಚೀಣಾ ಮಾತ್ರ. ಇದು ಬಂಡವಾಳಶಾಹಿ ಮಾರ್ಗ ಅನುಸರಿಸಿತು. ಕಳೆದ ನಲ್ವತ್ತು ವರ್ಷಗಳಲ್ಲಿ ಎಷ್ಟು ಬಂಡವಾಳಶಾಹಿ ಬೆಳವಣಿಗೆಯಾಯಿತು, ಅದರ ಪರಿಣಾಮಗಳು ಏನು ಎಂಬುದು ಪ್ರತ್ಯೇಕ ಪ್ರಶ್ನೆ.

ಲೆನಿನ್ ನಿರೀಕ್ಷಿಸಿದಂತೆ ಇತರ ವಿಶ್ವ ಇತಿಹಾಸದ ಬೆಳವಣಿಗೆಗಳು ಮಧ್ಯದ ಅಂತರವನ್ನು ತುಂಬಿವೆ. ಪಶ್ಚಿಮ ಗೋಳಾರ್ಧದ ಪೂರ್ವ ಯುರೋಪ್ ಭಾಗದಲ್ಲಿ, ಏಷ್ಯದ ವಿಯೆಟ್ನಾಂ ಕೊರಿಯಾದಲ್ಲಿ, ಕ್ಯೂಬಾದಲ್ಲಿ, ಸಮಾಜವಾದಿ ಕ್ರಾಂತಿಗಳ ವಿಜಯ ವಿಶ್ವ ಸಮಾಜವಾದದ ಸ್ಥಾಪನೆಯ ಧ್ಯೇಯೋದ್ದೇಶಕ್ಕೆ ತಮ್ಮ ಕಾಣಿಕೆ ನೀಡಿವೆ.

ನಮ್ಮ ಪಕ್ಷ 1976ರ ಡಿಸೆಂಬರ್‌ನಿಂದಲೇ ವಿಶ್ವ ವರ್ಗ ಶಕ್ತಿಗಳ ಸಹ-ಸಂಬಂಧಗಳ ಬಗ್ಗೆ ತನ್ನದೇ ತೀರ್ಮಾನಗಳಿಗೆ ಬಂದಿದೆ. "ವಿಶ್ವ ಸನ್ನಿವೇಶ ಸ್ವಾತಂತ್ರ್ಯ,ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಶಕ್ತಿಗಳಿಗೆ ಅನುಕೂಲಕರವಾಗುತ್ತಿದೆ. ಚಾರಿತ್ರಿಕ ಬೆಳವಣಿಗೆಯ ಮಾರ್ಗ ರೂಪಿಸುವಲ್ಲಿ ಸಮಾಜವಾದೀ ಜಗತ್ತು ನಿರ್ಣಾಯಕ ಅಂಶವಾಗುತ್ತಿದೆ. ವಸಾಹತುಶಾಹೀ ವ್ಯವಸ್ಥೆ ಅಂತಿಮನಾಶ ಈಗ ಅಜೆಂಡಾದಲ್ಲಿದೆ. ಇದು ಬಂಡವಾಳಶಾಹಿಯ ಅಂತಿಮ ಕುಸಿತದ ಯುಗ. ಅಮೆರಿಕನ್ ಸಾಮ್ರಾಜ್ಯಶಾಹಿಯ ವಿಶ್ವ ಪ್ರತಿಗಾಮಿತ್ವದ ಕಾವಲುಭಟ. ಸ್ವಾತಂತ್ರ್ಯದ ನಂತರ, ಸಾಮಾಜಿಕ ವೈರುಧ್ಯಗಳು ಬೆಳೆದಂತೆ ಹಿರಿ ಭೂರ್ಜ್ವಾ ವರ್ಗ ಆಂತರಿಕ ಪ್ರತಿಗಾಮಿಗಳೊಂದಿಗೆ ಸಂದರ್ಭಕ್ಕೆ, ಸಾಮ್ರಾಜ್ಯಶಾಹಿಯೊಂದಿಗೆ ಶಾಮೀಲಾಗುವುದಕ್ಕೆ ಹೆಚ್ಚೆಚ್ಚು ಮುಂದಾಗುತ್ತದೆ" ಎಂಬ ಆಗಿನ ಪರಿಶೀಲನೆಯನ್ನು ನಂತರ ಪಾಲಿಟ್ ಬ್ಯೂರೊ, ಕೇಂದ್ರ ಸಮಿತಿಯ ಹೇಳಿಕೆಗಳು ಮತ್ತು ಮಹಾಧಿವೇಶನಗಳಲ್ಲಿ ಸಿ.ಪಿ.ಐ.(ಎಂ) ಪುನರುಚ್ಚರಿಸುತ್ತಾ ಬಂದಿದೆ. ಈ. ಹಿನ್ನೆಲೆಯಲ್ಲಿ ಚೀಣಾ-ಸೋವಿಯತ್ ಶೃಂಗಸಭೆಯ ಅಪಾರ ಸಾಧ್ಯತೆಗಳನ್ನು ಅದರ ನಿರ್ಣಾಯಕ ಮಹತ್ವವನ್ನು ಕಾಣಬಹುದು.

ವಿಶ್ವ ಸಮಾಜವಾದಿ ಸಮುದಾಯದಲ್ಲಿ ಒಂದಿಲ್ಲೊಂದು ದೇಶ ದೌರ್ಬಲ್ಯಗಳನ್ನು ತೋರ್ಪಡಿಸಿದರೂ, ತಪ್ಪುಗಳನ್ನು ಮಾಡಿದರೂ, ಕೆಲವೊಮ್ಮೆ ಗಂಭೀರ ತಪ್ಪುಗಳನ್ನು ಮಾಡಿದ್ದರೂ ವಿಶ್ವ ಸಮಾಜವಾದದ ದಾರಿಯನ್ನು, ಅದರ ವಿಜಯ ಯಾತ್ರೆಯನ್ನು ತಿರುಗು-ಮುರುಗುಗೊಳಿಸುವುದು ಸಾಧ್ಯವಿಲ್ಲ. ತಥಾಕಥಿತ ಮುಕ್ತ ಬಂಡವಾಳಶಾಹೀ ಪತ್ರಿಕಾ ರಂಗ ವಿಶ್ವ ಸಮಾಜವಾದದ ಕುಸಿತದ ಭವಿಷ್ಯ ನುಡಿಯುವಲ್ಲಿ ವಿಶೇಷವಾಗಿ ಈಗ ಸಕ್ರಿಯವಾಗಿದೆ. ಆದರೆ ಜೀವನದ ವಾಸ್ತವಿಕತೆ "ಮುಕ್ತ ಪತ್ರಿಕಾರಂಗ"ದ ಈ ನಿರೀಕ್ಷೆಗಳು ಹಾಗೂ ಶಾಪಗಳನ್ನು ದೃಢವಾಗಿ ನಿರಾಕರಿಸುತ್ತದೆ.

ಸಮಾಜವಾದಿ ಸೋವಿಯತ್ ಒಕ್ಕೂಟ ಯುದ್ಧಕೋರ ಅಮೆರಿಕನ್ ಸಾಮ್ರಾಜ್ಯ ಶಾಹಿಯ ವಿರುದ್ಧ ಸ್ಥಾಪಿಸಿದ ಮಿಲಿಟರಿ ಸಮಾನ ಪ್ರಾಬಲ್ಯ ಅಮೆರಿಕಾ ಸರಕಾರ ಐ.ಎನ್.ಎಫ್. ಸಂಧಿಗೆ ಸಹಿ ಹಾಕುವಂತೆ ಮಾಡುವಲ್ಲಿ, ಆ ಮೂಲಕ ವಿಶ್ವವನ್ನು ನ್ಯೂಕ್ಲಿಯರ್ ಮೂಲಕ ಬೆದರಿಕೆಯಿಂದ ಉಳಿಸುವಲ್ಲಿ ವಹಿಸಿದ ಪಾತ್ರ ಸಣ್ಣದೇನಲ್ಲ.

ಆದರೂ ಗೋರ್ಬಚೆವ್ ಹೇಳಿರುವಂತೆ "ಮಿಲಿಟರಿ ಶಸ್ತ್ರಾಗಾರಗಳು ಇನ್ನೂ ಇವೆ. ಕೆಲವಂಶಗಳಲ್ಲಿ ಬೆಳೆಯುತ್ತಲೂ ಇವೆ. ಶಸ್ತ್ರಾಸ್ತ್ರಗಳ ಆಧುನೀಕರಣ ಇನ್ನೂ ನಿಂತಿಲ್ಲ. ಆದ್ದರಿಂದ ಹೊಸ, ಇನ್ನೂ ಹೆಚ್ಚು ವಿನಾಶಕಾರಿ ಅಸ್ತ್ರಗಳು ಮೂಡಿಬರುವುದು ಸಾಧ್ಯ".

ವಿಶ್ವದ ಎರಡು ದೊಡ್ಡ ಸಮಾಜ ದೇಶಗಳ ನಡುವೆ ಗೆಳೆತನದ, ಸೋದರತ್ವದ ಉತ್ತಮ ಸಂಬಂಧಗಳ ಮರುಸ್ಥಾಪನೆ ವಿಶ್ವ ಪ್ರತಿಗಾಮಿತ್ವ ಹಾಗೂ ಕ್ರಾಂತಿ-ವಿರೋಧಗಳನ್ನು ಅಂತಿಮವಾಗಿ ಹೂತು ಬಿಡುವಲ್ಲಿ ಒಂದು ನಿರ್ಣಾಯಕ ಅಂಶವಾಗುತ್ತದೆ ಎಂಬ ಭರವಸೆ ನಮ್ಮದು. ಹೀಗಿದೆ ಚೀಣಾ- ಸೋವಿಯತ್ ಶೃಂಗಸಭೆ ಮತ್ತು ಅದರ ಯಶಸ್ವೀ ಮುಕ್ತಾಯದ ಚಾರಿತ್ರಿಕ ಮಹತ್ವ.

ಅನಕ್ಷರತೆ, ನಿರುದ್ಯೋಗ ಮತ್ತು ಕೋಮುವಾದ ವಿರೋಧಿಸಿ ರಾಜ್ಯ ಸಮಾವೇಶ ಸೆ. 19 ರಂದು ಟೌನ್‌ಹಾಲ್ ಬೆಂಗಳೂರು

ಮೇ 11, 1989ರಂದು ನವದೆಹಲಿಯಲ್ಲಿ ಯಶಸ್ವಿಗೊಂಡ ರಾಷ್ಟ್ರೀಯ ಸಮಾವೇಶದ ಕರೆಯಂತೆ ರಾಜ್ಯಮಟ್ಟದ ಸಮಾವೇಶವನ್ನು ಸಂಘಟಿಸಲು ತೀರ್ಮಾನಿಸಲಾಗಿದೆ. ಮೇಲಿನ ಅಂಶಗಳ ಜೊತೆಗೆ ರಾಜೀವ್ ಸರ್ಕಾರದ ನೀತಿಗಳೆದುರು ಪ್ರಬಲ ಹೋರಾಟ ರೂಪಿಸುವುದು ಈ ಸಮಾವೇಶದ ಇನ್ನೊಂದು ಪ್ರಮುಖ ಅಂಶ. ಆಗಸ್ಟ್ 25 ರಿಂದ 29 ರ ವರೆಗೆ ಅಖಿಲ ಭಾರತ ಚಳುವಳಿ ನಡೆಯಲಿದೆ.

ಈ ಸಮಾವೇಶಗಳನ್ನು ಎಸ್.ಎಫ್.ಐ. ಡಿ.ವೈ.ಎಫ್.ಐ. ವಿದ್ಯಾರ್ಥಿ-ಯುವಜನತಾದಳ, ಎ.ಐಎಸ್.ಎಫ್. ಮತ್ತು ಎ.ಐ.ವೈ.ಎಫ್. ಸಂಘಟನೆಗಳು ಸಂಘಟಿಸಲಿದೆ. ಜಂಟಿ ಸುತ್ತೋಲೆ ರೂಪಿಸಲಾಗಿದ್ದು ಆಯ್ಕೆಗೊಂಡ ಪ್ರತಿನಿಧಿಗಳು ಸೆಪ್ಟಂಬರ್ 19ರ ಮುಂಜಾನೆ ಬೆಂಗಳೂರು ತಲುಪತಕ್ಕದ್ದು.

ಎಸ್.ಶಿವರಾಂ
ಕಾರ್ಯದರ್ಶಿ, ಡಿ.ವೈ.ಎಫ್.ಐ.

ಎಸ್.ವೈ.ಗುರುಶಾಂತ್
ಕಾರ್ಯದರ್ಶಿ, ಎಸ್.ಎಫ್.ಐ.

ನಿಕರಾಗುವ! ನಿಕರಾಗುವ!

ಬದುಕಿನ ಕಾಲಿಗೆ
ಹೋರಾಟದ ಬೂಟು ತೊಡೆಸಿದ
ನಿನ್ನ ಮಣ್ಣು
ಕಷ್ಟದ ಕರವಸ್ತ್ರದಿಂದ
ಕಾಲದ ಬೆವರು ತೊಡೆದ ಧೈರ್ಯ
ಮರುಗದೇ ಮುನ್ನಡೆದ
ನಿನ್ನ ಯುವಕ-ಯುವತಿಯರು
ಕಬಳಿಸಿದ ಸಾಮ್ರಾಜ್ಯ ಶಾಹಿಯ
ಗಂಟಲಲ್ಲಿ
ಎಲುಬಾಗಿ ಸಿಕ್ಕಿಕೊಂಡು ಕಕ್ಕಾಬಿಕ್ಕಿ
ಮಾಡಿದ
ನಿನ್ನ ಮೊಂಡು ಧೈರ್ಯ
ಎಲ್ಲವೂ ನಮ್ಮದೇ
ನಿಕರಾಗುವ-
ನೀನು ಹೋರಾಟದ ಅವಿಶ್ರಾಂತ
ಗೆಣೆಕಾರ

\- ಕೆ.ಫಣಿರಾಜ್

(ನಿಕರಾಗುವಾ ಕ್ರಾಂತಿಗೆ ಹತ್ತು ವರ್ಷ ತುಂಬಿದ ನೆನಪಿಗೆ)

ರಾಜ್ಯಾದ್ಯಂತ ಯಶಸ್ವಿ ಬಂದ್ ಸಹಸ್ರಾರು ಬಂಧನ

ಇತ್ಯಾದಿಗಳನ್ನು ಮರಿದು ಮುನ್ನುಗ್ಗಿದ್ದಾರೆ. ಬಂದ್ ಯಶಸ್ವಿ ಮಾಡಿದ್ದಾರೆ. ದೇಶದ ಹಾಗೂ ರಾಜ್ಯದ ಜನತೆ ಸಂಕಟದಲ್ಲಿರುವಾಗ, ದಿನ ದಿನ ಕಷ್ಟನಷ್ಟಗಳನ್ನು ಎದುರಿಸುತ್ತಿರುವಾಗ ನಾವು ನಿಮ್ಮೊಡನೆ ಎಂಬುದನ್ನು ಸಾಬೀತು ಮಾಡಿದ್ದಾರೆ. ರಾಜ್ಯದಲ್ಲಿ ವಿವಿಧೆಡೆಗಳಲ್ಲಿ ಬಂಧನಕ್ಕೊಳಗಾದ ಜನರಲ್ಲಿ ಸಿ.ಪಿ.ಐ(ಎಂ) ಕಾರ್ಯಕರ್ತರು ನಾಯಕರು ಮುಂಚೂಣಿಯಲ್ಲಿದ್ದಾರೆ.

28, 29 ಹಾಗೂ 30ರಂದು ಅಸಂಘಟಿತ ಕಾರ್ಮಿಕರು ನಡೆಸಿದ ಮುಷ್ಕರವೂ ಹಾಗೂ ಅನೇಕ ಸಿ.ಐ.ಟಿ.ಯು. ಕಾರ್ಮಿಕ ಸಂಘಟನೆಗಳು ಮುಷ್ಕರಕ್ಕೆ ನೋಟೀಸ್ ನೀಡಿ, ಕೈಗಾರಿಕೆಗಳು ನಡೆಯದಂತೆ ಮಾಡಿದ ಮುಷ್ಕರವು ಬಂದ್ ಅನ್ನು ಯಶಸ್ವಿ ಮಾಡುವಲ್ಲಿ ಗಣನೀಯ ಪಾತ್ರ ವಹಿಸಿದೆ.

ಬೆಂಗಳೂರು

ಕಿಕ್ಕಿರಿದು ತುಂಬಿರುತ್ತಿದ್ದ ಬೆಂಗಳೂರು ನಗರ ಬಸ್ ನಿಲ್ದಾಣ, ವ್ಯಾಪಾರ ವಾಣಿಜ್ಯ ಕೇಂದ್ರಗಳು ಮುಚ್ಚಿದ್ದವು. ಚಲನ ಚಿತ್ರಮಂದಿರಗಳು, ಅಂಗಡಿಗಳು ಬಂದ್ ಆಚರಿಸಿದವು. ಮೈಸೂರು ಕಡೆಗೆ ಹೊರಡುವ ಶಡೆರಹಿತ ಬಸ್ಸುಗಳು ಪ್ರಯಾಣಿಕರಿಲ್ಲದೆ ಬಿಕೋ ಎನ್ನುತ್ತಿತ್ತು. ಆಂಧ್ರ, ತಮಿಳುನಾಡು ಬಸ್ಸುಗಳು ಹೊರಗೆ ಬರಲೇ ಇಲ್ಲ. ಮೈಕೋ, ಮೈಸೂರು ಬ್ಯಾಂಕ್, ಐಟಿಸಿ, ಕೃಷ್ಣರಾಜಪುರ, ಪೀಣ್ಯ ಮೈಸೂರು ರಸ್ತೆ ಕೈಗಾರಿಕಾ ಪ್ರದೇಶಗಳಲ್ಲಿ ಕಾರ್ಮಿಕರು ಸಂಪೂರ್ಣ ಮುಷ್ಕರ ನಡೆಸಿದರು. ಎಚ್.ಎ.ಎಲ್., ಮಾರುತ್‌ಹಳ್ಳಿ, ದೊಡ್ಡ ಬಳ್ಳಾಪುರಗಳಲ್ಲಿ ಬಸ್ ತಡೆಮಾಡಿದ ನೂರಾರು ಜನರನ್ನು ಬಂಧಿಸಲಾಯಿತು. ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಇರಲಿಲ್ಲ. ಅಲ್ಲಿ ಇಲ್ಲಿ ಬಸ್ಸು, ಆಟೋಗಳು ವಿರಳವಾಗಿ ಓಡಾಡಿದರೂ ಪ್ರಯಾಣಿಕರಿರಲಿಲ್ಲ. ದೇಶದೆಲ್ಲೆಡೆ

ರೈಲ್ ರೋಕೋ ಚಳವಳಿ ಪರಿಣಾಮವಾಗಿ ಸಂಚಾರ ಅಸ್ತವ್ಯಸ್ತಗೊಂಡಿತು. ಸಿ.ಪಿ.ಐ(ಎಂ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ಬೆಂಗಳೂರು ನಗರ ರೈಲ್ವೆ ನಿಲ್ದಾಣದಲ್ಲಿ ನಂದಿ ಎಕ್ಸ್‌ಪ್ರೆಸ್ ರೈಲು ತಡೆಹಿಡಿದ 44 ಜನರನ್ನು ಬಂಧಿಸಲಾಯಿತು. ಕಾ॥ ಚಂದ್ರಶೇಖರ ಬಾಳೆ, ಎಸ್.ಆರ್. ಆರಾಧ್ಯ, ಶಿವರಾಂ, ಬಯ್ಯಾರೆಡ್ಡಿ, ಗುರುಶಾಂತ್‌ರವರು ಬಂಧಿತರಲ್ಲಿ ಪ್ರಮುಖರು. ಆಗಸ್ಟ್ 24 ರಿಂದ 29ರ ವರೆವಿಗೂ ಜೀಪ್ ಜಾಥ ಹಾಡಿನ ತಂಡದೊಡನೆ ಬೀದಿ ಬದಿ ಪ್ರಚಾರ ಸಭೆಗಳನ್ನು ನಡೆಸಲಾಯಿತು. ತಂಡೋಪತಂಡವಾಗಿ ಮನೆ ಮನೆಗೆ ಕಾರ್ಖಾನೆಗೆ ತೆರಳಿ ಪ್ರಚಾರ ಕೈಗೊಳ್ಳಲಾಯಿತು. 27ರಂದು ವಿವಿದೆಡೆ ಸೈಕಲ್ ರ್‍ಯಾಲಿ 28ರಂದು ನಗರ ಕೇಂದ್ರದಲ್ಲಿ ಪ್ರತ್ಯೇಕ ಸಿ.ಐ.ಟಿ.ಯು. ನೇತೃತ್ವದಲ್ಲಿ ಹೋಟೆಲ್ ಕಾರ್ಮಿಕರು ಒಳಗೊಂಡ ಮೆರವಣಿಗೆ, 29ರಂದು 2 ಸಹಸ್ರ ಅಸಂಘಟಿತ ಕಾರ್ಮಿಕರ ರ್‍ಯಾಲಿಗಳು ಬಂದ್‌ನ ಪೂರಕವಾಗಿ ಸಂಘಟಿಸಲ್ಪಟ್ಟವು.

ಆಕಾಶವಾಣಿ-ದೂರದರ್ಶನಗಳಲ್ಲಿ, ಬಂದ್ ವಿರೋಧಿ ಅಪಪ್ರಚಾರಗಳು, ಸರ್ಕಾರಿ ನೌಕರರಿಗೆ ಕಛೇರಿಯಲ್ಲೇ ಮಲಗಲು ಹಾಸಿಗೆ, ವಿಡಿಯೋ ಚಲನ ಚಿತ್ರ, ಊಟ ತಿಂಡಿಗಳನ್ನು ವ್ಯವಸ್ಥೆ ಮಾಡುವ ಮೂಲಕ ಸರ್ಕಾರಿ ಯಂತ್ರವನ್ನು ದುರುಪಯೋಗ ಪಡಿಸಿಕೊಳ್ಳಲಾಯಿತು. ಇಷ್ಟೆಲ್ಲಾ ಬಂದ್ ವಿರೋಧಿ ಚಟುವಟಿಕೆಯ ಮಧ್ಯೆಯೂ ಬಂದ್ ಯಶಸ್ವಿಗೊಳಿಸುವ ಜನತೆಯನ್ನು ಪಕ್ಷ ಅಭಿನಂದಿಸಿ, ಮುಂದಿನ ಹೋರಾಟಕ್ಕೆ ಸಿದ್ಧಗೊಳ್ಳಲು ಕರೆ ನೀಡಿದೆ. ಬಂದ್ ದಿನದಂದು ನಗರದಲ್ಲಿ 495 ಜನರನ್ನು ಬಂಧಿಸಲಾಗಿತ್ತು.

ದ.ಕ. ಜಿಲ್ಲೆ

ಆಗಸ್ಟ್ 29ರಂದು ಅಸಂಘಟಿತ ಕಾರ್ಮಿಕರು ಕನಿಷ್ಠ ವೇತನ ಮುಂತಾದ ಬೇಡಿಕೆ ಒತ್ತಾಯಿಸಿ ಮಂಗಳೂರಿನಲ್ಲಿ ಬೃಹತ್ ಮೆರವಣಿಗೆಯೊಂದನ್ನು ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದರು. ಇಡೀ ನಗರದಲ್ಲಿ ಸುತ್ತಾಡಿ ಬಂದ್ ಯಶಸ್ವಿಗೊಳಿಸಲು ಜನತೆಯಲ್ಲಿ ಮನವಿ ಮಾಡಿ ಪುರಭವನದಲ್ಲಿ ನಾಗರೀಕರು ಒಳಗೊಂಡು ಕಿಕ್ಕಿರಿದು ತುಂಬಿದ ಬಹಿರಂಗಸಭೆಯಾಗಿ ಮಾರ್ಪಾಟಾಯಿತು. ಸಭೆಯನ್ನುದ್ದೇಶಿಸಿ ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ ಕಾ॥ ಪಿ. ರಾಮಚಂದ್ರ ರಾವ್‌ರವರು ಮಾತನಾಡಿ ರಾಜೀವ್‌ಗಾಂಧಿ ಸರ್ಕಾರ ಜನತೆಯ ಎಲ್ಲಾ ವಿಭಾಗದ ವಿಶ್ವಾಸ ಕಳೆದು ಕೊಂಡಿರುವುದು ಮಾತ್ರವಲ್ಲ ದೇಶದ ಸಮಗ್ರತೆ, ಐಕ್ಯತೆಗೆ ಗಂಡಾಂತರಕಾರಿ ಪರಿಸ್ಥಿತಿ ನಿರ್ಮಾಣವಾಗುವಂತೆ ಮಾಡಲಾಗಿದೆ ಎಂದು ಹೇಳಿ ಈ ಭ್ರಷ್ಟ ಸರ್ಕಾರ ರಾಜೀನಾಮೆ ನೀಡುವುದೊಂದೆ ಇದಕ್ಕೆ ಪರಿಹಾರವೆಂದರು. ಜಿಲ್ಲೆಯ ಪ್ರಮುಖ ನಾಯಕರು ಸಭೆಯಲ್ಲಿ ಮಾತನಾಡಿದರು.

• ಕುಂದಾಪುರ, ಬಂಟ್ವಾಳಗಳಲ್ಲಿ 29ರಂದು ಇದೇ ರೀತಿಯ ಕಾರ್ಮಿಕರ ಮೆರವಣಿಗೆಗಳು ನಡೆದವು. ಆಗಸ್ಟ್ 30ರಂದು ಜಿಲ್ಲೆಯಲ್ಲಿ ಅಭೂತಪೂರ್ವ ಬಂದ್ ಆಚರಿಸಲಾಯಿತು. ಕೆ.ಎಸ್. ಆರ್.ಟಿ.ಸಿ. ಸಿಬ್ಬಂದಿ ಮುಷ್ಕರ ಯಶಸ್ವಿಗೊಂಡು ಸಾರಿಗೆ ಸಂಚಾರ ಸ್ಥಗಿತಗೊಂಡಿತು. ಕೆಲ ಕಾಂಗ್ರೆ ನಾಯಕರ 12 ಖಾಸಗಿ ಬಸ್ ಸಂಚಾರ ಮಾಡಿದರೂ ಅದರಲ್ಲೂ ಜನರಿರಲಿಲ್ಲ. ಶಾಲೆ ಕಾಲೇಜುಗಳು ಸರ್ಕಾರಿ ಕಛೇರಿಗಳು ನೌಕರರಿಲ್ಲದೆ ಬಿಕೋ ಎನ್ನುತ್ತಿದ್ದವು. ಕೆಲಸ ಕಾರ್ಯ ಸ್ಥಗಿತಗೊಂಡಿತು. ಎಲ್ಲಾ ವಾಣಿಜ್ಯ ವ್ಯಾಪಾರ ಕೇಂದ್ರಗಳು ಅಂಗಡಿಗಳು ಹೋಟೆಲ್‌ಗಳು ಮುಚ್ಚಿ ಶಾಂತಿಯುತ ಯಶಸ್ವಿ ಬಂದ್ ಆಚರಿಸಲಾಯಿತು. ಸಿ.ಪಿ.ಐ.(ಎಂ) ಕಾರ್ಯಕರ್ತರು ತಂಡತಂಡವಾಗಿ ನಗರದಲ್ಲಿ ಸಂಚರಿಸಿ ಬಂದ್‌ಗೆ ಬೆಂಬಲ ಕೋರಿದರು. ಕುಂದಾಪುರ, ಕಾರ್ಕಳ, ಬೆಳ್ತಂಗಡಿ, ಪುತ್ತೂರುಗಳಲ್ಲಿ ಬಂದ್ ಯಶಸ್ವಿಯಾಯಿತು.

ರಾಯಚೂರು

ಜನತಾದಳ ಬಿ.ಜೆ.ಪಿ. ಎಸ್.ಯು.ಸಿ.ಐ. ಜೊತೆ ಜಂಟಿ ಮೆರವಣಿಗೆ ಹೋರಾಟ ಕಾರಣ. ಸಿ.ಪಿ.ಐ(ಎಂ) ಹಾಗೂ ಕಾರ್ಮಿಕ, ರೈತ ವಿದ್ಯಾರ್ಥಿ ಯುವ ಜನ ಸಂಘಟನೆಗಳು ಪ್ರಭಾವಯುತ ಮೆರವಣಿಗೆ ನಡೆಸಿ ಜನತಾದಳ ಬಿ.ಜೆ.ಪಿ. ಜೊತೆ ಕೈ ಜೋಡಿಸಿದ್ದನ್ನು ಹಾಗೂ ಬಿ.ಜೆ.ಪಿ.ಯ ಕೋಮು ಧೋರಣೆ, ಭಿನ್ನ ನಿಲುವುಗಳನ್ನು ಜನತೆಗೆ ವಿವರಿಸಿ, ಎಡ ಪಕ್ಷಗಳು ದೇಶದ ಮುಂದಿಟ್ಟ 7 ಪ್ರಮುಖ ಬೇಡಿಕೆಗಳ ಕುರಿತು ಜನರಿಗೆ ತಿಳಿಸಲಾಯಿತು. ಕೈಗಾರಿಕೆ ಮುಷ್ಕರ ನಡೆಸಿ ಸಿ.ಐ.ಟಿ.ಯು. ಕಾರ್ಮಿಕರು ಈ ರ್‍ಯಾಲಿಯಲ್ಲಿ ಪಾಲ್ಗೊಂಡರು. ರಸ್ತೆ ಸಾರಿಗೆ ಮುಷ್ಕರದಿಂದಾಗಿ ಬಸ್ ಸಂಚಾರ ಸ್ಥಗಿತಗೊಂಡಿತ್ತು. ಬಜಾರಿನ ಎಲ್ಲಾ ಅಂಗಡಿ ಮುಗ್ಗಟ್ಟುಗಳು ಮುಚ್ಚಿದ್ದವು. ಎಲ್.ಐ.ಸಿ. ಕಚೇರಿ, ಪಾಠ ಶಾಲೆಗಳು ಬಂದಾಗಿದ್ದವು.

ಕಾಂಗ್ರೆಸ್‌ನ ಎಲ್ಲಾ ಮುಖಂಡರು ಬೀದಿಗಿಳಿದು ಬಂದ್ ವಿಫಲಗೊಳಿಸಲು ಮಾಡಿದ ಮನವಿಯನ್ನು ಜನತೆ ತಿರಸ್ಕರಿಸಿದರು. ಅವರು ಬೇಡಿಕೊಂಡರೂ ಯಾರೂ ಅಂಗಡಿ ತೆರೆಯಲು ಮುಂದೆ ಬರಲಿಲ್ಲ. ಸಂಜೆ ನಡೆದ ಬಹಿರಂಗ ಸಭೆಯಲ್ಲಿ . ಕಾ॥ ತಾಯಣ್ಣಾಯರಗೇರಾ, ಬಸವರಾಜ್ ಹಾಗೂ ರಾಮನ ಗೌಡ ಮಾತನಾಡಿದರು. ಬಂದ್ ವಿಫಲವಾಯಿತೆಂದು ಸುದ್ದಿ ಬಿತ್ತರಿಸಿದ ಆಕಾಶವಾಣಿಯನ್ನು ಸಭೆ ಖಂಡಿಸಿತು.

ಯಲಬುರ್ಗಾ, ಮಾನ್ವಿ ಕೊಪ್ಪಳ, ಸಿಂಧನೂರುಗಳಲ್ಲಿ ಬಂದ್ ಯಶಸ್ವಿಯಾಯಿತು. ಗಂಗಾವತಿ, ಪಟ್ಟಣಗಳಲ್ಲಿ ಭಾಗಶಃ ಯಶಸ್ವಿಯಾದ ವರದಿಯಾಗಿದೆ.

ಧಾರವಾಡ

ಜಿಲ್ಲೆಯಾದ್ಯಂತ 1126 ಮಂದಿಯನ್ನು ಬಂಧಿಸಲಾಯಿತು. ಹುಬ್ಬಳ್ಳಿ-ಧಾರವಾಡಗಳ ಕೈಗಾರಿಕೆಗಳ ಕಾರ್ಮಿಕರು ಎಲ್.ಐ.ಸಿ. ನೌಕರರು ಮುಷ್ಕರದಲ್ಲಿ ಪಾಲ್ಗೊಂಡರು. ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿಬಂದ್‌ನಲ್ಲಿ ಭಾಗವಹಿಸಿದ್ದರು. ಹಲವೆಡೆ ರೈಲುತಡೆ ನಿಷೇದಾಜ್ಞೆ ಉಲ್ಲಂಘಿಸಿ ರಸ್ತೆ ತಡೆ ಮಾಡಿದ ಚಳುವಳಿಗಾರರನ್ನು ಬಂಧಿಸಲಾಯಿತು. ರೋಣದಲ್ಲಿ ಲಾರಿ ಪ್ರಹಾರ ಹುಬ್ಬಳ್ಳಿ ಧಾರವಾಡದಲ್ಲಿ ಮಹಿಳೆಯರು ಎಂ.ಪಿ. ಶಾಸಕರೂ, ಸೇರಿದಂತೆ 421 ಬಂಧನ ರಾಣಿಬೆನ್ನೂರಿನಲ್ಲಿ 614 ಮಂದಿ ಬಂಧಿತರಾದರು. ಕಾ॥ ಎಂ.ಎಚ್. ಮುಲ್ಲಾ ನೇತೃತ್ವದಲ್ಲಿ ಮೆರವಣಿಗೆ ನಡೆಸಿದ ಪಕ್ಷದ ಐವತ್ತು ಕಾರ್ಯಕರ್ತರನ್ನು ಹುಬ್ಬಳ್ಳಿ ನಗರದಲ್ಲಿ ಬಂಧಿಸಲಾಯಿತು. ವಿವಿಧ ಕಾರ್ಖಾನೆಗಳ ಕಾರ್ಮಿಕರು ಸಿ.ಐ.ಟಿ.ಯು ನೇತೃತ್ವದಲ್ಲಿ ಮುಷ್ಕರ ನಡೆಸಿ ಕಿರ್ಲೋಸ್ಕರ್ ಕಂಪನಿ ಎದುರು ನಡೆದ ಸಭೆಯಲ್ಲಿ ಸಾವಿರ ಮಂದಿ ಪಾಲ್ಗೊಂಡಿದ್ದರು. ಕಾ॥ ಸುರಪೂರ ಕೆ.ಪಿ. ಜೋಶಿ, ಪೂಜಾರರವರು ಮಾತನಾಡಿದರು. ಎಸ್.ಎಫ್.ಐ. ಡಿ.ವೈ.ಎಫ್.ಐ. ಎ.ಐ. ಎಸ್.ಎಫ್. ವಿದ್ಯಾರ್ಥಿ ಯುವ ಜನತಾದಳ, ಜಂಟಿಯಾಗಿ ಬಂದ್ ಬೆಂಬಲಿಸಿ ಗದಗ್, ರೋಣ, ಹಾನಗಲ್, ರಾಣಿ ಬೆನ್ನೂರು, ಹಾವೇರಿಗಳಲ್ಲಿ ತರಗತಿ ಬಹಿಷ್ಕರಿಸಿ ಪಾಲ್ಗೊಂಡಿತು. ಜಿಲ್ಲಾ ಕಾರ್ಯದರ್ಶಿ ಕಾ॥ಬಸವರಾಜ ಬಂಜಂತ್ರಿಯವರನ್ನು ಬಂಧಿಸಲಾಗಿತ್ತು. ಹಾವೇರಿಯಲ್ಲಿ ಜನತಾ ದಳ ಸಿ.ಪಿ.ಐ.(ಎಂ)ಗಳು ಜಂಟಿ ರ್‍ಯಾಲಿ ತಡೆದು ಬಂಧಿಸಲಾಯಿತು. ಸಂಜೆ ಬಹಿರಂಗ ಸಭೆಯಲ್ಲಿ ಶಾಸಕ ಕಲಕೋಟಿ, ಬಿ.ಎಂ. ಮೆಣಸಿನ ಕಾಯಿ ಸಿ.ಪಿ.ಐ.(ಎಂ)ನ ಕಾ॥ ರುದ್ರಪ್ಪ ಜಾವಿನ ಚನ್ನಬಸಪ್ಪ ಸಾಲವಾಡಗಿ ಮಾತನಾಡಿದರು.

ಧಾರವಾಡ ನಗರದಲ್ಲಿ ರಸ್ತೆ ತಡೆ ಮಾಡಿ 430 ಜನ ಬಂಧಿತರು. ಇದರಲ್ಲಿ 300 ಸಿ.ಪಿ.ಐ (ಎಂ) ಕಾರ್ಯಕರ್ತರು, ಕಾ॥ವಿ.ಎನ್. ಹಳಕಟ್ಟಿ ನೇತೃತ್ವವಹಿಸಿದ್ದರು. ಜನತಾದಳ, ಸಿ.ಪಿ.ಐ. ಜಂಟಿಯಾಗಿ ಬಂದ್‌ನಲ್ಲಿ ಭಾಗವಹಿಸಿದ್ದವು.

ಬಳ್ಳಾರಿ ಜಿಲ್ಲೆ

ಬಳ್ಳಾರಿ ಜಿಲ್ಲೆಯಾದ್ಯಂತ ಸಿ.ಪಿ.ಐ.(ಎಂ)ನ ಸುಮಾರು 300 ಕಾರ್ಯಕರ್ತರನ್ನು ಹಾಗೂ ಜಿಲ್ಲಾ ನಾಯಕರನ್ನು ಬಂಧಿಸಲಾಯಿತು. ಜಿಲ್ಲೆಯಲ್ಲಿ 144 ನೇ ಸೆಕ್ಷನ್ ಜಾರಿಗೊಳಿಸಲಾಗಿತು.

ಬಳ್ಳಾರಿ

ಸಿ.ಪಿ.ಐ.(ಎಂ) ಜನತಾದಳ, ಸಿ.ಪಿ.ಐ. ಜಂಟಿ ರ್‍ಯಾಲಿ ನಡೆಸಿ 5 3 ಮಂದಿ ಸಿ.ಪಿ.ಐ.(ಎಂ) ಕಾರ್ಯಕರ್ತರನ್ನು ಬಂಧನಕ್ಕೊಳಗಾದರು. ಜಿಲ್ಲಾ ಕಾರ್ಯದರ್ಶಿ ಕಾ॥ ಪ್ರಸನ್ನಕುಮಾರ್, ಬಸವರಾಜರವರು ನಾಯಕತ್ವ ವಹಿಸಿದ್ದರು. ಎಸ್.ಯು.ಸಿ.ಐ. ಭಾಗವಹಿಸುವುದನ್ನು ಸಿ.ಪಿ.ಐ. (ಎಂ) ವಿರೋಧಿಸಿ ತಡೆಯಲಾಯಿತು.

ಹೊಸಪೇಟೆ

ಬಂದ್‌ಯಶಸ್ವಿಗೊಂಡು 5 5 ಮಂದಿ ಸಿ.ಪಿ.ಐ.(ಎಂ) ಕಾರ್ಯಕರ್ತರು ಬಂಧನಕ್ಕೊಳಗಾದರು. ಸಿ.ಪಿ.ಐ. ಮತ್ತು ಜನತಾದಳ ಭಾಗವಹಿಸಿದ್ದವು. ಕಾ॥ಎಲ್. ಮಂಜುನಾಥ, ಜಂಬಯ್ಯ ನಾಯಕ್ ನೇತೃತ್ವ ವಹಿಸಿದ್ದರು.

ಶಿರುಗುಪ್ಪ

ಸಿ.ಪಿ.ಐ.(ಎಂ) ಜನತಾದಳ ಜಂಟಿ ರ್‍ಯಾಲಿ ನಡೆಸಲಾಯಿತು. ಕಾ॥ ಬಸವನಗೌಡ ರಾಮಾಂಜನೇಯ ನಾಯಕತ್ವ ವಹಿಸಿದ್ದರು. ಹರಿಹರ ಬೊಮ್ಮನಹಳ್ಳಿ ಬಂದ್ ಯಶಸ್ವಿಯಾಯಿತು. ಸಿ.ಪಿ.ಐ.(ಎಂ) ಜನತಾದಳ ಐಕ್ಯರ್‍ಯಾಲಿ ನಡೆಸಿ 40 ಮಂದಿ ಸಿ.ಪಿ.ಐ(ಎಂ) ಕಾರ್ಯಕರ್ತರು ಬಂಧಿತರಾದರು. ಕಾ॥ವೀರಸಂಗಯ್ಯ ನಾಯಕತ್ವ ವಹಿಸಿದ್ದರು.

ಕೋರಣಗಲು

ರೈಲು ತಡೆ ಚಳುವಳಿ ಮಾಡಿದ ಸಿ.ಪಿ.ಐ(ಎಂ)ನ 21 ಜನರನ್ನು ಬಂಧಿಸಲಾಯಿತು ಕಾ॥ ತಿಪ್ಪೇಸ್ವಾಮಿ, ಸಂಕಣ್ಣ ನಾಯಕತ್ವ ವಹಿಸಿದ್ದರು.

ಹೂವಿನಹಡಗಲಿ

ಶೇ. 90% ಬಂದ್ ಆಗಿತ್ತು. ಎಲ್ಲಾ ಅಂಗಡಿ-ಸಿನಿಮಾ ಮುಚ್ಚಿತ್ತು. ಶಾಲಾ-ಕಾಲೇಜು ರಜೆ ಘೋಷಿಸಲಾಗಿತ್ತು ಜನತಾದಳ ಮತ್ತು ಸಿ.ಪಿ.ಐ.(ಎಂ), ನಾಯಕತ್ವ ವಹಿಸಿದ್ದವು. ಕಾ॥ಚಂದ್ರಶೇಖರ, ಪೀರ್ ಭಾಷಾ, ಶ್ರೀಕಾಂತ್ ಮುಖಂಡತ್ವ ವಹಿಸಿದ್ದರು.

ಹರಪ್ಪನಹಳ್ಳಿ

ಮುಂಜಾಗ್ರತೆ ಕ್ರಮವಾಗಿ ಸಿ.ಪಿ.ಐ. (ಎಂ) ನಾಯಕರನ್ನು ಬಂಧಿಸಲಾಗಿತ್ತು. ನಿಯೋಗ ತೆರಳಿ ಮನವಿಯನ್ನು ಅರ್ಪಿಸಲಾಗಿದೆ. 6ನೇ ಪುಟಕ್ಕೆ

ಬೀದರ್‌ಗೆ ರೈಲ್ವೆ ಸೌಲಭ್ಯ ಒತ್ತಾಯಿಸಿ ಚಳುವಳಿ

ಬೀದರ್ ಜಿಲ್ಲೆಗೆ ಹೆಚ್ಚಿನ ರೈಲ್ವೆ ಸೌಲಭ್ಯ ಒದಗಿಸಬೆಕೆಂದು ಒತ್ತಾಯ ಹಲವು ವರ್ಷಗಳಿಂದ ಬಗೆಯರಿಯದೆ ಇಲ್ಲಿನ ಜನತೆ ಸತತವಾಗಿ ಹೋರಾಡುತ್ತಾ ಬರುತ್ತಿದೆ. ಈ ಕುರಿತು ಸಿ.ಪಿ.ಐ.(ಎಂ), ಸಿ.ಪಿ.ಐ. ಜನತಾದಳ ರಿಪಬ್ಲಿಕನ್ ಪಕ್ಷ, ಜನತಾಪಕ್ಷಗಳು ಜಂಟಿಯಾಗಿ ಚಳುವಳಿ ರೂಪಿಸಿವೆ.

ಸೆಪ್ಟೆಂಬರ್ 2 ರಂದು ಬೀದರನ ಅಂಬೇಡ್ಕರ್ ವೃತ್ತದಿಂದ ಹೊರಟನೂರಾರು ಮಂದಿ ಕಾರ್ಯಕರ್ತರು ರೈಲ್ವೆ ಹಳಿಗಳ ಮೇಲೆ ಕೂತು ಧರಣಿ ನಡೆಸಿದರು. ಬೀದರಿನಿಂದ ಹೊರಟ ರೈಲನ್ನು ಮುತ್ತಿಗೆ ಹಾಕಿ ತಮ್ಮ ಬೇಡಿಕೆಗಳ ಕುರಿತು ರೈಲ್ವೆ ಅಧಿಕಾರಿಗಳು ಮಾತುಕತೆ ನಡೆಸಲು ಒತ್ತಾಯಿಸಲಾಯಿತು.

ಪೊಲೀಸರು ಚಳುವಳಿಕಾರರನ್ನು ಚದುರಲು ಮಾಡಿದ ಮನವಿ ತಿರಸ್ಕರಿಸಿ ಘೇರಾವೋ ಮುಂದುವರಿಸಿದ್ದರಿಂದ 300 ಜನರನ್ನು ಬಂಧಿಸಿ ಪೊಲೀಸ್ ಠಾಣೆಗೆ ಒಯ್ದು ಬಿಡುಗಡೆ ಮಾಡಿದರು.

ಬೀದರ್‌ನಲ್ಲಿನ ಗಾಂಧಿ ಗಂಜ್‌ಲೆವೆಲ್ ಕ್ರಾಸಿಂಗ್ ಗೇಟ್ ತೆರೆಯುವುದು, ಬೀದರಿನಿಂದ ಹೈದ್ರಾಬಾದ್‌ಗೆ ಎಕ್ಸ್‌ಪ್ರೆಸ್ ರೈಲು ಸೌಲಭ್ಯ ಮತ್ತು ಬೀದರಿನಿಂದ ಬೆಂಗಳೂರಿಗೆ ತೆರಳುವ ಪ್ರಯಾಣಿಕರಿಗೆ ವಿಶೇಷ ಬೋಗಿ ಒದಗಿಸಬೇಕೆಂಬ ಬೇಡಿಕೆ ಈಡೇರಿಸಬೇಕೆಂದು ಈ ಚಳುವಳಿ ಕುರಿತು ನಾಯಕತ್ವ ವಹಿಸಿರುವ ಸಿ.ಪಿ.ಐ.(ಎಂ) ಮುಖಂಡ ಸಂಗ್ರಾಮ್‌ರವರು ರೈಲ್ವೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ಕಳೆದ ಜುಲೈ 16ರಂದು ಇಂತಹದೆ ಚಳುವಳಿ ನಡೆದಾಗ ಹೈದರಾಬಾದ್‌ನಿಂದ ಬಂದ ರೈಲ್ವೆ ಅಧಿಕಾರಿಯೊಬ್ಬರು ಆಗಸ್ಟ್ 15 ರೊಳಗೆ ಬೇಡಿಕೆ ಈಡೇರಿಸುವ ಭರವಸೆ ನೀಡಿದರಾದರೂ ಇದುವರೆವಿಗೂ ಆ ಕುರಿತು ಯಾವುದೇ ಕ್ರಮ ಜರುಗಿಸದೆ ವಿಳಂಬ, ತೋರಿರುವುದನ್ನು ಖಂಡಿಸಿದ್ದಾರೆ. ಈ ಚಳುವಳಿಯ ಚಿತ್ರವನ್ನು ಪ್ರಸ್ತಿಸುವ ಮೂಲಕ ಕಾಂಗ್ರೆಸ್(ಐ) ಪಕ್ಷ ಬೀದರ್ ಜನತೆಗೆ ರೈಲ್ವೆ ಸೌಲಭ್ಯದಿಂದ ವಂಚಿಸುವ ಸಂಚು ಹೂಡಿದೆ ಎಂದು ಆರೋಪಿಸಿದರು. ಅವರು ಈ ಚಳುವಳಿ ಇಲ್ಲಿಗೆ ನಿಲ್ಲದೆ ಇದು ಸಾಂಕೇತಿಕವಾಗಿದ್ದು ಮುಂದೆ ತೀವ್ರ ಹಾಗೂ ವ್ಯಾಪಕ ಚಳುವಳಿ ರೂಪಿಸುವುದಾಗಿ ತಿಳಿಸಿದ್ದಾರೆ.

ಬಂದಿತರಲ್ಲಿ ಪ್ರಮುಖರು ಸಿ.ಪಿ.ಐ. (ಎಂ) ಜಿಲ್ಲಾ ಕಾರ್ಯದರ್ಶಿ ಸಂಗ್ರಾಮ್, ಜನತಾದಳದ ಗುರುಪಾದಪ್ಪ, ಜನತಾದ ಅಧ್ಯಕ್ಷ ಕೆ. ಪುಡಲೀಕರಾವ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕಲ್ಯಾಣರಾವ್ ಮೊಳಕೇರಿ ರಿಪಬ್ಲಿಕನ್ ಪಕ್ಷದ ಜಯಾನಂದರಾವ್ ಮುಂತಾದವರು.

ರಾಯಚೂರು

ಕೋಮುವಾದ ವಿರುದ್ಧ ಸಮಾವೇಶ

ಕೋಮುವಾದ ವಿರೋಧಿ ರಾಷ್ಟ್ರೀಯ ಸಮಗ್ರತೆ-ಐಕ್ಯತೆಗಾಗಿ ರಾಜ್ಯದ ಎಲ್ಲೆಡೆ ಸಮಾವೇಶ ನಡೆಸಲು ಸಿ.ಪಿ.ಐ(ಎಂ) ಮತ್ತು ಸಿ.ಪಿ.ಐ.ಗಳು ಜಂಟಿಯಾಗಿ ನೀಡಿದ ಕರೆಯಂತೆ ರಾಯಚೂರಿನ ಸಿಂಧನೂರಿನಲ್ಲಿ ಜಿಲ್ಲಾ ಮಟ್ಟದ ಸಮಾವೇಶ ಆಗಸ್ಟ್ 20ರಂದು ಜರುಗಿತು. ಜಿಲ್ಲೆ ಪ್ರತಿನಿಧಿ, ತಾಲೋಕುಗಳ ನೂರಾರು ಪ್ರತಿನಿಧಿಗಳು ಭಾಗವಹಿಸಿದ್ದರು.

ಮಿಸ್ಟರ್ ಕ್ಲೀನ್

ಸುಭದ್ರ ಸ್ವಚ್ಛದ ಸರಕಾರ
ಕೊಡುತೇನೆಂದ ಸರದಾರ
ಬಲ್ಲಿರಾ ನೀವು ಯಾರಿವನು?
ನೆಹರೂ ತಾತನ ಮೊಮ್ಮಗನು
ಇಂದಿರಮ್ಮನ ಹಿರಿಮಗನು ॥೧॥

ಬೋಫೋರ್ಸ್ ಫಿರಂಗಿ ವ್ಯವಹಾರ
ಬಯಲಾಯ್ತು ನೋಡಿ ಭ್ರಷ್ಟಾಚಾರ
ಕೋಟಿ ಕೋಟಿಗಳ ನುಂಗಿದರು
ದೇಶಕೆ ದ್ರೋಹವ ಬಗೆದಿಹರು ॥೨॥

ಇಪ್ಪತ್ತೊಂದನೇ ಶತಮಾನಕ್ಕೆ
ಹೊರಟನು ನೋಡಿ ರಾಜೀವಣ್ಣ
ಮುರುಕು ಎತ್ತಿನ ಗಾಡಿಯಲಿ
ವಿದೇಶಿ ಸಾಲದ ಹೊರೆಯೇರಿ
ಪಶ್ಚಿಮ ದಿಕ್ಕಿನ ದಾರಿಯಲಿ ॥೩॥

ಯಂತ್ರ ಮಾನವರ ಹೊತ್ತು ತಂದು
ಕಾರ್ಖಾನೆಗಳ ಬಾಗಿಲ ಮುಚ್ಚಿ
ಕೂಲಿಜನರ ಬೀದಿಗೆ ತಳ್ಳಿ
ಬೇಕಾರಿ ಹಟಾವೋ ಘೋಷಣೆ ನೀಡಿ
ರೋಜ್‌ಗಾರ್ ಯೋಜನೆ ತಂದನು
ನೋಡಿ ॥೪॥

ರೂಪಾ ಕನ್ವಾರಳ ಸತಿಯನು ಮಾಡಿ
ಶಹಾಬಾನುವಿಗೆ ಅನ್ಯಾಯ ಮಾಡಿ
ಪಂಜಾಬನು ಮಸಣವ ಮಾಡಿ
ಬಾಬ್ರಿಮಸೀದಿ ಹಗರಣ ಮಾಡಿ
ಓಟಿನ ಬೇಟೆಗೆ ಹೊರಟನು ನೋಡಿ
॥೫॥

ಆಕಾಶವಾಣಿಯ ತುತ್ತೂರಿ ಮಾಡಿ
ದೂರದರ್ಶನದಲಿ ದಿನವೂ ನಟಿಸಿ
ಎಲ್ಲ ನಟರನು ಹಿಂದಕೆ ಹಾಕಿ
ಆದನು ಇವನು ಸೂಪರ್‌ಸ್ಟಾರ್ ॥೬॥

(ಭಾರತಾಬಂದ್ ಸಂದರ್ಭದಲ್ಲಿ ಪ್ರಚಾರ ...)

ಜನತೆಯ ನಿರ್ಣಾಯಕ
ಸಾರಿದ ಬೃಹತ್ 'ಭಾರತ

ವಿರೋಧ ಪಕ್ಷಗಳ ಆಳ್ವಿಕೆಯಿರುವ ರಾಜ್ಯಗಳಲ್ಲಿ ಬಂದ್ ಅತ್ಯಂತ ಯಶಸ್ವಿಯಾಯಿತೆಂದು ನಿರಾಕರಿಸುವುದು ರಾಜೀವ್ ಸರ್ಕಾರದ ಅಪ ಪ್ರಚಾರ-ವ್ಯವಸ್ಥೆಗೂ ಸಾಧ್ಯವಾಗಲಿಲ್ಲ. ಕಾಂಗ್ರೆಸ್(ಐ) ಆಳ್ವಿಕೆಯ ರಾಜ್ಯಗಳಲ್ಲಿ ಅದು ವಿಫಲಗೊಂಡಿತು ಎಂಬುದು ಕೂಡ ಅದರ ಗಾಳಿಗೋಪುರ ಎಂಬುದು ವಿವಿಧ ರಾಜ್ಯಗಳಿಂದ ಬಂದಿರುವ ಮೊದಲ ವರದಿಗಳಿಂದಲೇ ಕಂಡುಬರುತ್ತದೆ. ಮುಂದೆ ಕೆಲವು ರಾಜ್ಯಗಳ ವರದಿಗಳನ್ನು ಕೊಡಲಾಗಿದೆ.

ಆಂಧ್ರಪ್ರದೇಶ

ವಿಶಾಖಪಟ್ಟಣ, ವಿಜಯವಾಡಾ, ನೆಲ್ಲೂರು, ಗುಂಟೂರು ಮತ್ತು ಹೈದರಾಬಾದ್‌ಗಳಲ್ಲಿ ಬಂದ್ ಸಂಪೂರ್ಣವಾಗಿರುವ ವರದಿ ಬಂದಿವೆ. ರಾಜ್ಯಾದ್ಯಂತ ಸಾರಿಗೆ ಸ್ತಬ್ಧಗೊಂಡಿತು. ರೈಲುಗಳನ್ನು ಹಲವೆಡೆ ತಡೆಯಲಾಯಿತು. ಎಲ್ಲಾ ಕೇಂದ್ರ ಸರ್ಕಾರೀ ಕಚೇರಿಗಳು, ಬ್ಯಾಂಕುಗಳು ಇತ್ಯಾದಿ ನಿರ್ಜನವಾಗಿದ್ದವು.ಖಾಸಗೀ ಕಾರ್ಖಾನೆಗಳೂ ಕೆಲಸ ಮಾಡಲಿಲ್ಲ.

ಕೆಲವೆಡೆ ಕಾಂಗೈ ಪುಂಡರು ರಸ್ತೆಗಳಲ್ಲಿ ಹಿಂಸಾಚಾರ ನಡೆಸಿದರು. ವಿಜಯವಾಡಾದಲ್ಲಿ ಸಿ.ಪಿ.ಐ.(ಎಂ) ಕಾರ್ಯಕರ್ತರ ಮೇಲೆ ಅವರು ಹಲ್ಲೆ ಮಾಡಿದರು.

ತಮಿಳುನಾಡು

ಕಾಂಗೈ- ಎ.ಐ.ಎ.ಡಿ.ಎಂ.ಕೆ ನೇತೃತ್ವದ ತಥಾಕಥಿತ ಆರು ಪಕ್ಷಗಳ ಕೂಟ ಎಷ್ಟೇ ಪ್ರಯತ್ನ ಪಟ್ಟರೂ ರಾಜ್ಯಾದ್ಯಂತ ಸಾರಿಗೆ ಸಂಪೂರ್ಣ ಸ್ತಬ್ಧಗೊಂಡಿತು. ಬಹುಪಾಲು ರೈಲುಗಳೂ ನಿಂತವು. ರೈಲ್ವೇ ಹಳಿಗಳ ಮೇಲೆ ಧರಣಿ ಕೂತ 5000 ಕ್ಕೂ ಹೆಚ್ಚು ಸಿ.ಪಿ.ಐ.(ಎಂ), ಡಿ.ಎಂ.ಕೆ., ಸಿ.ಪಿ.ಐ. ಕಾರ್ಯಕರ್ತರನ್ನು ಬಂಧಿಸಲಾಯಿತು. ಎಲ್ಲಾ ಶಿಕ್ಷಣ ಸಂಸ್ಥೆಗಳು, 90% ಅಂಗಡಿಗಳು ಮುಚ್ಚಿದ್ದವು.

ಸಾರ್ವಜನಿಕ ಉದ್ದಿಮೆ ಹಿಂದೂಸ್ತಾನ್ ಟೆಲಿಪ್ರಿಂಟರ್ಸ್ ಸಂಪೂರ್ಣ ಮುಚ್ಚಿತ್ತು. ಬಿ.ಹೆಚ್.ಇ.ಎಲ್.ನಲ್ಲಿ 80% ಕಾರ್ಮಿಕರು ಬಂದ್‌ನಲ್ಲಿ ಭಾಗವಹಿಸಿದ್ದರು. 90% ಕ್ಕೂ ಹೆಚ್ಚು ಖಾಸಗಿ ವಲಯದ ಕಾರ್ಮಿಕರು ಮುಷ್ಕರ ನಡೆಸಿದರು. ಕೊಯಮತ್ತೂರಿನಲ್ಲಿ ಎಲ್ಲಾ ಬಟ್ಟೆ ಗಿರಣಿಗಳು, ಇಂಜಿನಿಯರಿಂಗ್ ಘಟಕಗಳು ಮುಚ್ಚಿದ್ದವು.

ಬಿಹಾರ

ಸಂಜೆಯೊಳಗೆ ಬಂಧಿಸಲ್ಪಟ್ಟವರ ಸಂಖ್ಯೆ ಒಂದು ಲಕ್ಷವನ್ನೂ ಮೀರಿದರೆ ಬಂದ್ ರಾಜ್ಯಾದ್ಯಂತ ಪೂರ್ಣವಾಗಿತ್ತು. ಬಂಧಿತರಲ್ಲಿ ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ಸದಸ್ಯರಾದ ಗಣೇಶ ಶಂಕರ ವಿದ್ಯಾರ್ಥಿ ಮತ್ತು ಸುಭೋದ ರಾಯ್ ಸೇರಿದಂತೆ ಬಹು ಸಂಖ್ಯೆಯ ಸಿ.ಪಿ.ಐ. (ಎಂ) ಕಾರ್ಯಕರ್ತರಿದ್ದರು.

ಕಾಂಗೈ ಗೂಂಡಾಗಳ ದೊಡ್ಡ ಪಡೆಗಳೇ ಇದ್ದರೂ ಅವುಗಳ ಬೆದರಿಕೆಯಿದ್ದರೂ ಅಂಗಡಿಗಳು ಮುಚ್ಚಿದ್ದವು. 80% ಹೆಚ್ಚು ಗಣಿಗಳು ಮುಚ್ಚಿದ್ದವು. ಡಿ.ವೈ.ಎಫ್.ಐ. ಮುಖಂಡ ಪ್ರಕಾಶ್ ಬಿಪ್ಲವಿ ಕಾಂಗೈ ಗೂಂಡಾಗಳ ಹಲ್ಲೆಯಿಂದ ತೀವ್ರವಾಗಿ ಗಾಯಗೊಂಡರು.

ಒರಿಸ್ಸಾ

ರಾಜ್ಯಾದ್ಯಂತ ಕೈಗಾರಿಕೆಗಳಲ್ಲಿ ಪೂರ್ಣ ಮುಷ್ಕರ ನಡೆಯಿತು. ರಸ್ತೆಗಳಲ್ಲಿ ಸಾರ್ವಜನಿಕ ವಾಹನಗಳಿರಲಿಲ್ಲ. ಭುವನೇಶ್ವರದಲ್ಲಿ ರೈಲನ್ನು ತಡೆಯಲಾಯಿತು. ಎಲ್ಲಾ ಮಾರುಕಟ್ಟೆಗಳು ಮುಚ್ಚಿದ್ದವು.

ರಾಜ್ಯದಲ್ಲಿ 250ಕ್ಕೂ ಹೆಚ್ಚು ಬಂಧನಗಳಾದವು. ಇವರಲ್ಲಿ ಕಾರ್ಯದರ್ಶಿ ಶಿವಾಜಿ ಪಟ್ನಾಯಕ್ ಹಾಗೂ ಅನೇಕ ಸಿ.ಪಿ.ಐ. (ಎಂ) ಸದಸ್ಯರೂ ಸೇರಿದ್ದಾರೆ.

ಪಂಜಾಬ್

ಕೈಗಾರಿಕಾ ಕಾರ್ಮಿಕರು ಮತ್ತು ರಸ್ತೆ ಸಾರಿಗೆ ಕಾರ್ಮಿಕರು ಈ ಎರಡು ವಲಯಗಳ ಚಟುವಟಿಕೆಗಳನ್ನು ಪೂರ್ಣ ಸ್ತಬ್ಧಗೊಳಿಸಿದರು. ದೊಡ್ಡ ನಗರಗಳ ಮಾರುಕಟ್ಟೆಗಳೆಲ್ಲಾ ಮುಚ್ಚಿದ್ದವು. ರಾಜ್ಯಾದ್ಯಂತ ಎಲ್ಲಾ ಶಿಕ್ಷಣ ಸಂಸ್ಥೆಗಳು ಮುಚ್ಚಿದ್ದವು. ಸಂಗ್ರೂರ್, ಜಾಲಂಧರ್, ಹೋಶಿಯಾರ್‌ಪುರ್‌ಗಳಲ್ಲಿ . ಮಾಜಿ ಸಿ.ಪಿ.ಐ.(ಎಂ) ಎಂ.ಪಿ ಮಾಸ್ಟರ್ ಭಗತ್ ರಾಮ್ ಕೂಡಾ ಸೇರಿದಂತೆ ಹಲವು ಸಿ.ಪಿ.ಐ.(ಎಂ) ಮುಖಂಡರನ್ನು ಬಂಧಿಸಲಾಯಿತು.

> ಕಾಂಗ್ರೆಸ್(ಐ) ರಾಜ್ಯಗಳಲ್ಲಿ ಕೇಂದ್ರ ಸರ್ಕಾರದ ಕಚೇರಿಗಳು ಸಾಮಾನ್ಯವಾಗಿ ನಡೆದವೆಂದು ಹೇಳಿಕೊಳ್ಳುವಷ್ಟಕ್ಕೆ ಬೂಟಾಸಿಂಗ್ ತೃಪ್ತರಾಗಬೇಕಾಯಿತು. ಆ ದಿನ ಈ ಕಚೇರಿಗಳಲ್ಲೂ ಒಂದು ಫೈಲ್ ಕೂಡಾ ಸರಿಯಲಿಲ್ಲ ಎಂದು ಮಾತ್ರ ಅವರು ಹೇಳಲಿಲ್ಲ.

ಮಹಾರಾಷ್ಟ್ರ

ಮುಂಬೈ ನಗರದಲ್ಲಿ ಬಹುಪಾಲು ಅಂಗಡಿಗಳು, ಕೈಗಾರಿಕಾ ಘಟಕಗಳು ಮತ್ತು ವಾಹನಗಳನ್ನು ಬಂದ್ ತಟ್ಟಿತ್ತು. ಉಪನಗರಗಳಲ್ಲಿ ಎಲ್ಲಾ ಅಂಗಡಿಗಳೂ ಮುಚ್ಚಿದ್ದವು. ನೌಕರರು ಹಿಂದಿನ ದಿನ ದಿಂದಲೇ ಕಚೇರಿಗಳಲ್ಲೇ ಉಳಿಯುವ ಸಕಲ ವ್ಯವಸ್ಥೆ ಮಾಡಿದ್ದರೂ ಕೇಂದ್ರ-ರಾಜ್ಯ ಸರ್ಕಾರೀ ಕಚೇರಿಗಳಲ್ಲಿ ಹಾಜರಾತಿ ಬೇರೆ ದಿನಗಳಿಗಿಂತ ಕಡಿಮೆಯಿತ್ತು. ಶಿವಸೇನೆ ಪೊಲೀಸರೊಂದಿಗೆ ಸೇರಿಕೊಂಡು ನಗರ ಬಸ್ಸುಗಳು ಸಂಚರಿಸುವಂತೆ ನೋಡಿಕೊಂಡರು.

ಕಾಂಗೈ ಕಾರ್ಯಕರ್ತರೊಂದಿಗೆ ಸಣ್ಣ-ಪುಟ್ಟ ತಿಕ್ಕಾಟಗಳು, ಹಲವೆಡೆ ಬಂದ್ ಸ್ವಯಂ ಸೇವಕರ ಬಂಧನಗಳ ವರದಿಗಳೂ ಬಂದಿವೆ.

ಪುಣೆಯಲ್ಲಿ ಎರಡು ದೊಡ್ಡ ಉದ್ದಿಮೆ ಬಿಟ್ಟರೆ ಬೇರೆಲ್ಲಾ ಕಾರ್ಖಾನೆಗಳೂ ಮುಚ್ಚಿದ್ದವು.

ಮಹಾರಾಷ್ಟ್ರದಲ್ಲಿ ಬಿ.ಜೆ.ಪಿ. ಬಂದನ್ನು ಬೆಂಬಲಿಸಲಿಲ್ಲ. ಅಷ್ಟೇ ಅಲ್ಲ ಅದು ಇನ್ನೂ ಒಂದು ಹೆಜ್ಜೆ ಮುಂದೆ ಹೋಯಿತು. . ಬಂದ್ ವಿಫಲಗೊಳಿಸಲು ಶಿವಸೇನೆ ಮತ್ತು ಕಾಂಗೈನೊಂದಿಗೆ ಶಾಮೀಲಾಯಿತು. ಬಿ.ಜೆ.ಪಿ.ಯ ಜಗ್ಗೆ ಕಾಂಗೈ-ವಿರೋಧದ ಬಗ್ಗೆ ಅಪಾರ ನಂಬಿಕೆಯಿರುವ ಮುಗ್ಧ ಜನರು ಈ ವಿಶ್ವಾಸಘಾತವನ್ನು ಗಮನಿಸಬೇಕು.

ಉತ್ತರ ಪ್ರದೇಶ

ರೂ.1050/- ಕನಿಷ್ಠ ಕೂಲಿ ಮತ್ತಿತರ ಬೇಡಿಕೆಗಳಿಗಾಗಿ ಮೂರು ದಿನದ ಮುಷ್ಕರ ಆಗಸ್ಟ್ 30ರಂದು ಅತ್ಯಂತ ಯಶಸ್ವಿಯಾಗಿ ಕೊನೆಗೊಂಡಿತು. ಕಾನ್ಪುರದಲ್ಲಿ ಉದ್ದಿಮೆಗಳು, ಅಂಗಡಿಗಳು, ವಾಣಿಜ್ಯ ಸಂಸ್ಥೆಗಳು, ಎಲ್ಲಾ ಶಿಕ್ಷಣ ಸಂಸ್ಥೆಗಳು ಮುಚ್ಚಿದ್ದವು. ಕಾಂಗೈ ಏನೇ ಪ್ರಯತ್ನಿಸಿದರೂ, ಜನ ಜೀವನ ಸ್ತಬ್ಧಗೊಳ್ಳುವಂತೆ ತಡೆಯುವುದು ಅದರಿಂದಾಗಲಿಲ್ಲ. ಒಟ್ಟು 600 ಮಂದಿಯನ್ನು ಬಂಧಿಸಲಾಯಿತು. ಇದರಲ್ಲಿ 500 ಮಂದಿ ಸಿ.ಪಿ.ಐ.(ಎಂ) ಕಾರ್ಯಕರ್ತರು. ಆಝಾದ್‌ಹಿಂದ್ ಸೇನೆಯ ಸುಪ್ರಸಿದ್ಧ ಮುಂದಾಳು ಹಾಗೂ ಈಗ ಒಬ್ಬ ಪ್ರಮುಖ ಮಹಿಳಾ ಮುಂದಾಳು ಕ್ಯಾಪ್ಟನ್ ಲಕ್ಷ್ಮಿ ಸೆಹಗಲ್ ಇವರಲ್ಲಿ ಪ್ರಮುಖರು.

ರಾಜಧಾನಿ ಲಕ್ನೋ ಸಂಪೂರ್ಣ ಅಸ್ತವ್ಯಸ್ತಗೊಂಡಿತ್ತು. ಸಹರಾಣಾಪುರದಲ್ಲಿ 300 ಸಣ್ಣ ಉದ್ದಿಮೆಗಳು ಮುಚ್ಚಿದ್ದವು. ಮೂರು ಪ್ರತ್ಯೇಕ ದೊಡ್ಡ ಮೆರವಣಿಗೆಗಳನ್ನು ನಗರದಲ್ಲಿ ನಡೆಸಲಾಯಿತು. ಇವುಗಳಲ್ಲಿ ಕೋಮುವಾದಕ್ಕೆ ವಿರೋಧ ಒಂದು ಮುಖ್ಯ ಘೋಷಣೆಯಾಗಿತ್ತು. ಇದರಲ್ಲಿ ಸಾವಿರಾರು ಮುಸ್ಲಿಮರು ಭಾಗವಹಿಸಿದ್ದುದು ಒಂದು ಗಮನಾರ್ಹ ಸಂಗತಿ. ಬಹುಮಂದಿ ಕೃಷಿ ಕೂಲಿಗಾರರು ಬಂದ್ ಯಶಸ್ವಿಗೊಳಿಸಲು ಶ್ರಮಿಸಿದರು.

ದೆಹಲಿ

ದೇಶದ ರಾಜಧಾನಿಯ ಎಲ್ಲಾ ಪ್ರಮುಖ ಮಾರುಕಟ್ಟೆಗಳು ಸುಮಾರಾಗಿ ಪೂರ್ಣ ಮುಚ್ಚಿದ್ದವು. ಹೆಚ್ಚಿನ ಕೈಗಾರಿಕಾ ಘಟಕಗಳು ಮುಚ್ಚಿದ್ದವು. ಟ್ಯಾಕ್ಸಿಗಳು, ಸ್ಕೂಟರ್‌ಗಳು ರಸ್ತೆಗಿಳಿಯಲಿಲ್ಲ. ಡಿ.ಟಿ.ಸಿ. ಧಣಾಡಂಗುದಿಂದ ಓಡಿಸಿದ ಬಸ್ಸುಗಳೆಲ್ಲಾ ಖಾಲಿ-ಖಾಲಿಯಾಗಿದ್ದವು. ಕಾಂಗೈ ಗೂಂಡಾ ಪಡೆ, ಪೊಲೀಸ್, ಸಿ.ಆರ್.ಪಿ.ಎಫ್. ಸಿದ್ಧತೆಗಳೆಲ್ಲಾ ವ್ಯರ್ಥವಾದವು.

ದೆಹಲಿಯ ಮೂರೂ ವಿಶ್ವವಿದ್ಯಾಲಯಗಳು ಮುಚ್ಚಿದ್ದವು. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಪೊಲೀಸರು ಲಾಠಿ ಪ್ರಹಾರ ನಡೆಸಿದರು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಗಾಯಗೊಂಡರು. 80 ವಿದ್ಯಾರ್ಥಿಗಳನ್ನು ಬಂಧಿಸಲಾಯಿತು.

ಯಶಸ್ವಿ ಬಂದ್

3ನೇ ಪುಟದಿಂದ

ಕಾಲೇಜುಗಳು ಬಂದಾಗಿದ್ದವು. ಬಂದ್ ಯಶಸ್ವಿಗೊಂಡಿದೆ. ಆಗಸ್ಟ್ 28ರಿಂದ ಜಿಲ್ಲೆಯಲ್ಲಿ ಜೀಪ್ ಜಾಥಾ ಬಂದ್ ಕುರಿತು ಪ್ರಚಾರ ಸಭೆ ನಡೆಸಿತು. ಜನತಾ ದಳವು ಬಿ.ಜೆ.ಪಿ. ಜೊತೆ ಸೇರಿದ್ದರಿಂದ ಸಿ.ಪಿ.ಐ.(ಎಂ) ಸಿ.ಪಿ.ಐ. ಜಂಟಿಯಾಗಿ ಬಂದ್ ಯಶಸ್ವಿಗೆ ಶ್ರಮಿಸಲಾಯಿತು. 30ರಂದು ಸಾರ್ವಜನಿಕ ಸಭೆಗೆ ಅನುಮತಿ ನೀಡದ ಕಾರಣ ಕಛೇರಿಯಲ್ಲಿ ಸಭೆ ನಡೆಸಲಾಯಿತು. ಕಾ॥ ಹರೀಶ ನಾಯಕ್ ದಾರೇಶ್ವರ, ಸತೀಶ ನಾಯಕ ಜೀಪ್ ಜಾಥ ನೇತೃತ್ವ ವಹಿಸಿದ್ದರು.

ಬೆಳಗಾವಿ

ಜಿಲ್ಲೆಯಾದ್ಯಂತ 1200 ಜನರನ್ನು ಬಂಧಿಸಲಾಗಿದೆ. ಕೈಗಾರಿಕೆಗಳು ಮುಚ್ಚಿದ್ದವು. ಬೆಳಗಾವಿಯಲ್ಲಿ 172, ಚಿಕ್ಕೋಡಿಯಲ್ಲಿ 260, ಸಂಕೇಶ್ವರದಲ್ಲಿ 600 ಜನರನ್ನು ಬಂಧಿಸಲಾಯಿತು.

ಶಿವಮೊಗ್ಗ

ಜಿಲ್ಲೆಯಲ್ಲಿ ಅತ್ಯಂತ ಭಾರಿ ಯಶಸ್ವಿ ಬಂದ್ ಆಚರಿಸಲಾಗಿದೆ. ಅಂಗಡಿ ಮುಗ್ಗಟ್ಟು, ಹೋಟೆಲ್‌ಗಳು, ಸಿನಿಮಾ, ಶಾಲೆಗಳು ಬಂದ್ ಪರಿಣಾಮವಾಗಿ ಮುಚ್ಚಿದ್ದವು. ಹಲವೆಡೆ ಕಾಂಗೈ ಜೊತೆ ಘರ್ಷಣೆ ನಡೆದಿವೆ. ಭದ್ರಾವತಿ, ಸೊರಬ, ಶಿಕಾರಿಪುರ, ಚನ್ನಗಿರಿ, ಹೊಸನಗರ, ತೀರ್ಥಹಳ್ಳಿ, ಸಾಗರಗಳಲ್ಲಿ ವಾಣಿಜ್ಯ ಕೇಂದ್ರಗಳು ಅಂಗಡಿಗಳು ಮುಚ್ಚಿದ್ದವು. ಶಿರಾಳ ಕೊಪ್ಪದಲ್ಲಿಯೂ ಬಂದ್ ಆಚರಿಸಲಾಯಿತು.

ಮೈಸೂರು

ಮೈಸೂರಿನ ಕೈಗಾರಿಕೆಗಳಲ್ಲಿ ಮುಷ್ಕರ ಯಶಸ್ವಿಯಾಯಿತು. ಅಂಗಡಿ, ಹೋಟೆಲ್‌ಗಳು ಮುಚ್ಚಿದ್ದವು. ಬಸ್ ಸಿಬ್ಬಂದಿ ಮುಷ್ಕರದಿಂದ ಬಸ್ ಸಂಚಾರ ಸ್ಥಗಿತಗೊಂಡಿತು. ರಾಜ್ಯ-ಕೇಂದ್ರ ಕಛೇರಿಗಳು ಕೆಲಸ ಮಾಡಲಿಲ್ಲ. ಶಾಲೆಯಲ್ಲಿ ಹಾಜರಾತಿ ಇರಲಿಲ್ಲ. ಜನತಾದಳದ ಸಂಸತ್ ಸದಸ್ಯ ಎಂ.ಎಸ್. ಗುರುಪಾದಸ್ವಾಮಿ, ಮಾಜಿ ಮಂತ್ರಿ ಸಿದ್ದರಾಮಯ್ಯ ಶಾಸಕ ರಾಮಣ್ಣ, ಶಾಂತಮೂರ್ತಿ, ಸಿ.ಪಿ.ಐ.(ಎಂ)ನ 60 ಮಂದಿ ಕಾರ್ಯಕರ್ತರನ್ನು ಬಂಧಿಸಲಾಯಿತು.

ಚಾಮರಾಜನಗರದಲ್ಲಿ ಯಶಸ್ವಿಗೊಂಡ ಬಂದ್ ಹುಣಸೂರು, ಕೊಳ್ಳೇಗಾಲ ನಂಜನಗೂಡಿನಲ್ಲಿ ಶಾಂತಿಯುತ ಬಂದ್ ಆಚರಿಸಲಾಯಿತು.

ಮಂಡ್ಯ ಜಿಲ್ಲೆಯಲ್ಲಿ ಹೋಟೆಲ್‌ಗಳು ಮುಚ್ಚಿದ್ದವು. ನಾಗಮಂಗಲ ಮದ್ದೂರು ಬೆಸಗರಹಳ್ಳಿಯಲ್ಲಿ ಶಾಂತಿಯುತ ಬಂದ್ ಆಚರಿಸಲಾಯಿತು.

ತುಮಕೂರು

ಬಹುತೇಕ ಅಂಗಡಿ, ಕಛೇರಿ, ಚಲನ ಚಿತ್ರ ಮುಚ್ಚಿದ್ದವು. ತುಮಕೂರು 32, ಗುಬ್ಬಿ 60 ಜನರನ್ನು ಬಂಧಿಸಲಾಯಿತು. ತಿಪಟೂರಿನಲ್ಲಿ ಭಾಗಶಃ ಬಂದ್ ಆಚರಿಸಲಾಗಿದೆ. ಬಂದ್ ಮುನ್ನ ಪೊಲೀಸ್ ಅಧಿಕಾರಿಗಳು ವಿರೋಧ ಪಕ್ಷಗಳ ನಾಯಕರನ್ನು ಕರೆಸಿ ಬಂದ್ ಆಚರಿಸದಂತೆ ಎಚ್ಚರಿಕೆ ನೀಡಿರುವ ಹಾಗೂ 29ರ ರಾತ್ರಿ ಸೈರನ್ ಕೂಗಿಸಿ ಪೊಲೀಸ್ ಪರೇಡ್ ಮಾಡುವ ಮೂಲಕ ಜನರಲ್ಲಿ ಬಂದ್ ಉಂಟು ಮಾಡಿ ಬಂದ್ ವಿಫಲಗೊಳಿಸಲು ನಡೆಸಿದ ಕಾರ್ಯವನ್ನು ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ॥ ಮಹಮ್ಮದ್ ದಸ್ತಗೀರ್ ಖಂಡಿಸಿದ್ದಾರೆ. ಇದು ತುರ್ತು ಪರಿಸ್ಥಿತಿಯನ್ನು ನೆನಪಿಸುವುದಾಗಿದೆ ಎಂದು ಎಚ್ಚರಿಸಿದ್ದಾರೆ. ಸಮನ್ವಯ ಸಮಿತಿ ತೊರೆದು ಜನತಾದಳ ಬಿ.ಜೆ.ಪಿ. ಜೊತೆ ಮೆರವಣಿಗೆ ನಡೆಸುವುದನ್ನು ಸಿ.ಪಿ.ಐ.(ಎಂ) ಸಿ.ಪಿ.ಐ ಬಹಿಷ್ಕರಿಸಿ ಪ್ರತ್ಯೇಕ ಮೆರವಣಿಗೆ ತೆಗೆದು ಟೌನ್‌ಹಾಲ್ ಮುಂಭಾಗದಲ್ಲಿ ಬಹಿರಂಗ ಸಭೆ ನಡೆಸಲಾಯಿತು.

ಬಂಟ್ವಾಳ

ಬಂಟ್ವಾಳ ಬಿ.ಸಿ. ರಸ್ತೆ ಪಾಣಿ ಮಂಗಳೂರು, ವಿಟ್ಲಗಳಲ್ಲಿ ಅಂಗಡಿ ಹೋಟೆಲ್, ಕೈಗಾರಿಕೆಗಳು ಬ್ಯಾಂಕ್, ಟೂರಿಸ್ಟ್ ವ್ಯಾನ್, ರಿಕ್ಷಾ, ಖಾಸಗಿ, ಸರ್ಕಾರಿ ಬಸ್ ಸಂಚಾರವಿರಲಿಲ್ಲ. ಬಂದ್ ಪೂರ್ಣಗೊಂಡು ಜನಜೀವನ ಅಸ್ತವ್ಯಸ್ತಗೊಂಡಿತ್ತೆಂದು ತಾಲೋಕು ಪಕ್ಷದ ಕಾರ್ಯದರ್ಶಿ ಕಾ॥ಬಿ.ವಾಸುಗಟ್ಟಿ ತಿಳಿಸಿದ್ದಾರೆ.

ದೊಡ್ಡಬಳ್ಳಾಪುರ: 144ನೇ ಸೆಕ್ಷನ್ ಜಾರಿಗೊಳಿಸಲಾಗಿತ್ತು. ನಿಷೇದಾಜ್ಞೆಯನ್ನು ಉಲ್ಲಂಘಿಸಿ ಮೆರವಣಿಗೆ ಹೊರಟ 20 ಮಂದಿ ಸಿ.ಪಿ.ಐ(ಎಂ) ಕಾರ್ಯಕರ್ತರನ್ನು ಬಂಧಿಸಲಾಗಿದೆ.

ಜನತೆಗೆ ಪಾಲಿಟ್‌ಬ್ಯೂರೋ ಅಭಿನಂದನೆ

ರಾಜೀವ್‌ಗಾಂಧಿ ಸರ್ಕಾರದ ರಾಜಿನಾಮೆಗೆ ಎಲ್ಲಾ ಜನ ವಿಭಾಗಗಳ ದೃಢ ಬೆಂಬಲದ ದನಿಯೆತ್ತಿ ಭಾರತ್‌ಬಂದ್‌ನ್ನು ಅಪಾರವಾಗಿ ಯಶಸ್ವಿಗೊಳಿಸಿದ ದೇಶದ ಜನತೆಗೆ ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಹಾರ್ದಿಕ ಅಭಿನಂದನೆ ಸಲ್ಲಿಸಿದೆ.

ಬಂದ್ ಕರೆಯಿಂದ ಹಿಂದೆಂದೂ ಕಾಣದಷ್ಟು ಭಯ ಭೀತಗೊಂಡ ಸರ್ಕಾರ ಹಿಟ್ಲರ್‌ನನ್ನು ನೆನಪಿಸುವ ಅಪಪ್ರಚಾರ ಹರಿಯಬಿಟ್ಟಿತು. ದೂರದರ್ಶನ, ಆಕಾಶವಾಣಿಯ ಮೂಲಕ ನಡೆದ ಅಪಪ್ರಚಾರ ವಾಂತಿ ಬರಿಸುವಂತಿತ್ತು. ಜನತೆ ಸರಕಾರಿ ಮತ್ತು ಗೂಂಡಾ ದಬ್ಬಾಳಿಕೆ. ಇವನ್ನೆಲ್ಲಾ ಎದುರಿಸಿ ಜನ ಕಾರ್ಯಾಚರಣೆಗಿಳಿದರು ಎಂದಿರುವ ಪಾಲಿಟ್‌ಬ್ಯೂರೊ ಇದು ಜನತೆಯ ಬಂದ್, ಸರಕಾರದ ವಿರುದ್ಧ ಒಂದು ಅಭೂತಪೂರ್ವ ಸಾಮೂಹಿಕ ಕಾರ್ಯಾಚರಣೆ ಎಂದು ವರ್ಣಿಸಿದೆ. ಇದನ್ನು ಕಂಡೂ ರಾಜೀವ್ ಸರಕಾರ ಎಚ್ಚರಗೊಳ್ಳದೆ ಅಧಿಕಾರದಿಂದ ಇಳಿಯದಿದ್ದರೆ ಇನ್ನೂ ವ್ಯಾಪಕ ಕಾರ್ಯಾಚರಣೆಗಳನ್ನು ಎದುರಿಸಬೇಕಾಗುತ್ತದೆಂದು ಎಚ್ಚರಿಸಿದೆ. ಈ ಸಾಮೂಹಿಕ ಅಸಂತೃಪ್ತಿಯನ್ನು ಕ್ರೋಢೀಕರಿಸುವಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಬಂದು ಇದನ್ನು ಮತ್ತಷ್ಟು ಮುಂದುವರಿಸಿದರೆ ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್(ಐ)ನ ಸೋಲು ಸಾಧ್ಯ ಎಂದು ಪಾಲಿಟ್‌ಬ್ಯೂರೋ ಹೇಳಿದೆ.

ಕಾಂಗ್ರೆಸ್(ಐ) ಗೂಂಡಾಪಡೆಗಳ ಹಲ್ಲೆಗಳಿಗೆ ತುತ್ತಾಗಿ ಭಾರತಬಂದ್ ಯಶಸ್ವಿಗೊಳಿಸುವಲ್ಲಿ, ಪ್ರಜಾಪ್ರಭುತ್ವವನ್ನು ರಕ್ಷಿಸುವಲ್ಲಿ ತಮ್ಮ ಪ್ರಾಣಾರ್ಪಣೆಗೈದ ಹುತಾತ್ಮರ ಕುಟುಂಬಗಳಿಗೆ ಪಾಲಿಟ್‌ಬ್ಯೂರೋ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ತ್ರಿಪುರಾದಲ್ಲಿ
ದೇಶವ್ಯಾಪಿ ಪ್ರತಿ

ಆಗಸ್ಟ್ 30ರ ಭಾರತ್ ಬಂದ್
ಕಾಂಗ್ರೆಸ್(ಐ) ತ್ರಿಪುರಾದಲ್ಲಿ ಸಿ.ಪಿ.
ಅಮಾನುಷ ಭಯೋತ್ಪಾದನೆ ಹ
ಕಾರ್ಯಕರ್ತರನ್ನು ಬಲಿ ತೆಗೆದುಕೊಂಡಿದೆ
ಮೇಲಾಘರ್‌ನಲ್ಲಿ ಕಾಂಗೈ
ಬಾಂಬುಗಳಿಂದ ಹಲ್ಲೆ ಮಾಡಿದರು.
ಡ್ರೈವರ್‌ನ ಹತೋಟಿ ತಪ್ಪಿಹೋಯಿತು.
ಸಿ.ಪಿ.ಐ.(ಎಂ) ಕಾರ್ಯಕರ್ತರ ಮೇಲೆ
ನಾಲ್ಕು ಕಾರ್ಯಕರ್ತರು ಮೃತರಾದರು.
ವಿಕೃತಗೊಳಿಸಿ ಸಿ.ಪಿ.ಐ.(ಎಂ) ಕಾರ್ಯಕರ್ತ
ಅಲ್ಲದೆ ಹಲವೆಡೆ ಪಕ್ಷದ ಕಚೇರಿಗಳ
ನರಮೇಧ ಸಾಲದೇನೋ ಎಂಬಂತೆ
ಹಿರಿಯ ಎಂ.ಎಲ್.ಎ ಬಾದಲ್ ಚೌ
ಎಂ.ಎಲ್.ಎ.ಗಳು ಹಲ್ಲೆ ಮಾಡಿ ಅವರ
ಫೆಬ್ರುವರಿ 1988ರಿಂದ ತ್ರಿಪು
ಪಕ್ಷದ ಮಂದಿ ಉನ್ನತರಂತೆ ವ
ಭಯೋತ್ಪಾದನೆ ಸಂಸದೀಯ ಪ್ರಜ
ಹಲ್ಲೆಗಳನ್ನು ಉಪೇಕ್ಷಿಸುವುದೆಂದರೆ
ಆಮಂತ್ರಿಸಿದಂತೆ. ಆದ್ದರಿಂದ ಪ್ರಜಾಪ್ರ
ಭಯೋತ್ಪಾದನೆಯನ್ನು ವಿರೋಧಿಸಬೇಕೆ
ನೀಡಿದೆ. ಈ ಕೊಲೆಗಳ ವಿರುದ್ಧ
ಘಟಕಗಳಿಗೆ ಸಿ.ಪಿ.ಐ.(ಎಂ) ಕರೆ ನೀಡಿದೆ.
ಇಂತಹ ಭಯೋತ್ಪಾದನೆಗಳ
ಅದರ ಸರಕಾರಕ್ಕೆ ಸಿ.ಪಿ.ಐ.(ಎಂ) ಪಾಲಿ

...ಪೂರ್ಣ ...ಬಂದ್

ನಗರದಾದ್ಯಂತ ಬಂದ್‌ನ ಮೊದಲೇ 5 00 ಜನರನ್ನು ಬಂಧಿಸಿದ್ದರೆ 1000 ಮಂದಿಯನ್ನು ಆಗಸ್ಟ್ 30ರಂದು ಬಂಧಿಸಲಾಯಿತು. ರಸ್ತೆ ಸಾರಿಗೆಯನ್ನು ತಡೆದು ಪೊಲೀಸ್ ದಮನ ಎದುರಿಸಿದ ಜನವಾದಿ ಮಹಿಳಾ ಸಮಿತಿಯ ಸದಸ್ಯರು, ಸಿ.ಐ.ಟಿ.ಯು. ಎಸ್.ಎಫ್.ಐ.

> ಬಂದ್ ಸಮಯದಲ್ಲಿ ಜನತೆಯ ದಮನ, ಸಮಾಜ-ವಿರೋಧಿ ಶಕ್ತಿಗಳ ಬಳಕೆಯೇ ಕಾಂಗ್ರೆಸ್(ಐ)ನ ನಿಜವಾದ ಚುನಾವಣಾ ಘೋಷಣೆ. ಜನ ಇದನ್ನೆಂದೂ ಮರೆಯರು.

ಡಿ.ವೈ.ಎಫ್.ಐ ಸದಸ್ಯರು, ಮುಖಂಡರು ಹಾಗೂ ಸಿ.ಪಿ.ಐ.(ಎಂ) ಕಾರ್ಯಕರ್ತರು, ಮುಖಂಡರನ್ನು ಬಂಧಿಸಲಾಯಿತು.

ಕೇರಳ, ಪಶ್ಚಿಮ ಬಂಗಾಳದ ಬಗೆಗಂತೂ ಸಾಳೆ, ತಿವಾರಿ, ಭಗತ್‌ಗಳೆಲ್ಲರೂ ಮೌನವಾಗಿರಲೇಬೇಕಾಯಿತು.

ತ್ರಿಪುರಾದಲ್ಲಿ 83 ವರ್ಷದ ಸಿ.ಪಿ.ಐ.(ಎಂ) ಮುಖಂಡ ನೃಪೇನ್ ಚಕ್ರವರ್ತಿಯವರನ್ನು ಕೂಡ ಕಾಂಗ್ರೆ ಗೂಂಡಾಗಳು ಥಳಿಸಿ ಪ್ರಜ್ಞಾಹೀನರನ್ನಾಗಿ ಮಾಡಿದರು. 12 ಸಿ.ಪಿ.ಐ.(ಎಂ) ಕಾರ್ಯಕರ್ತರ ಕೊಲೆ ಮಾಡಿ, ಸಾವಿರಾರು ಬಂಧನ ನಡೆಸಿದರೂ ಬಂದ್ ಯಶಸ್ವಿಯಾಗುವುದನ್ನು ಅವರಿಗೆ ತಡೆಯಲಾಗಲಿಲ್ಲ.

★ ★ ★

...ೋತ್ಪಾದನೆಗೆ ...ನೆಗೆ ಪಿ.ಬಿ. ಕರೆ

...ಜನತೆಯ ಅಗಾಧ ಸ್ಪಂದನ ಕಂಡ ...ಕಾರ್ಯಕರ್ತರ ಮೇಲೆ ಮತ್ತೆ ...ಿ. ಒಂಭತ್ತು ಸಿ.ಪಿ.ಐ.(ಎಂ)

...ಗಳು ಒಂದು ಬಸ್ಸಿನ ಮೇಲೆ ...ಬ್ಬ ಪ್ರಯಾಣಿಕ ಮೃತನಾದ. ಬಸ್ ...ಅಂಗಡಿಯಲ್ಲಿ ನಿಂತಿದ್ದ ನಾಲ್ಕು ... ಈ ಭಯಾನಕ ಘಟನೆಯಲ್ಲಿ ...ಸಾಲದೆಂಬಂತೆ ಈ ಘಟನೆಯನ್ನು ...ಲಿಯೇ ದಾಳಿ ನಡೆಸಲಾಗುತ್ತಿದೆ. ...ಲ್ಲೆ ನಡೆದಿದೆ. ಬಂದ್ ದಿನದ ಈ ...ವಿಧಾನಸಭೆಯಲ್ಲಿ ಸಿ.ಪಿ.ಐ.(ಎಂ)ನ ...ರ ಮೇಲೆ ಕಾಂಗ್ರೆ ಮಂತ್ರಿಗಳು, ...ಾಗಿ ಗಾಯಗೊಳಿಸಿದರು. ...ವುದು ಕಾಡು ನಿಯಮ. ಆಳುವ ...ೆ. ಮುಂದುವರೆಯುತ್ತಿರುವ ಈ ...ಕ್ಕೊಂದು ದುಷ್ಟ ಲಕ್ಷಣ. ಈ ...ೀಯ ಪ್ರಜಾಸತ್ತೆಗೆ ವಿನಾಶ ...ಬಗ್ಗೆ ಆಸಕ್ತಿಯಿರುವವರೆಲ್ಲಾ ಈ ...ಿ.ಐ.(ಎಂ) ಪಾಲಿಟ್‌ಬ್ಯೂರೋ ಕರೆ ...ಭಟನೆ ಸಂಘಟಿಸಬೇಕೆಂದು ಪಕ್ಷದ

...ಾಂಗ್ರೆ ಕೇಂದ್ರ ಮುಖಂಡತ್ವ ಮತ್ತು ...ಎಚ್ಚರಿಕೆ ನೀಡಿದೆ.

ಮೊದಲ ಸುತ್ತಿನಲ್ಲಿ ಸುಲಭ ಗೆಲುವು

ಪುಟ 1 ರಿಂದ

ಪಟ್ಟಣಗಳಲ್ಲಿ, ನಗರಗಳಲ್ಲಿ ಬಂದ್‌ನ ಪ್ರಭಾವ ಸ್ಪಷ್ಟವಾಗಿ ಕಾಣುತ್ತಿತ್ತು. ರಾಜೀವಗಾಂಧಿ ಸರ್ಕಾರ ರಾಜೀನಾಮೆ ಕೊಡಬೇಕೆಂಬ ಒತ್ತಾಯ ಅನುರಣಿಸಿತು. ಲೋಕಸಭೆಯಲ್ಲಿ ಕಾಂಗ್ರೆಸ್(ಐ) ಬಹುಮತ ಜನತೆಯ ಇಚ್ಛೆಯನ್ನು ಪ್ರತಿನಿಧಿಸುತ್ತಿಲ್ಲ; ಭ್ರಷ್ಟಾಚಾರದ ಹಗರಣಗಳು, ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಆಘಾತ, ಪ್ರತಿಗಾಮಿ ಆರ್ಥಿಕ ಧೋರಣೆಗಳ ಕಳೆದ ನಾಲ್ಕೂವರೆ ವರ್ಷಗಳಲ್ಲಿ ಅದು ಜನತೆಯಿಂದ ದೂರವಾಗಿದೆ ಎಂಬುದನ್ನು ಆಗಸ್ಟ್ 30ರಂದು ಜನ ತೋರಿಸಿ ಕೊಟ್ಟಿದ್ದಾರೆ. ರಾಜೀವ್ ಸರ್ಕಾರ ರಾಷ್ಟ್ರೀಯ ವಿಭಜನೆಯ ಸರ್ಕಾರ, ಅದನ್ನು ಅಧಿಕಾರದಲ್ಲಿ ಮುಂದುವರೆಯಗೊಡುವುದು ಅಪಾಯಕಾರಿ ಎಂದು ಈ ಬಂದ್ ಘೋಷಿಸಿದೆ.

ಎಲ್ಲಾ ಜನವಿಭಾಗಗಳನ್ನು, ಎಲ್ಲಾ ರಾಜ್ಯಗಳನ್ನು ಆವರಿಸಿದ ಈ ಬಂದ್ ಒಂದು ರಾಷ್ಟ್ರೀಯ ಸ್ವರೂಪವಿತ್ತು. ಕಾಂಗ್ರೆಸ್(ಐ)ನ್ನು ಅಧಿಕಾರದಿಂದ ಇಳಿಸಲು ಒಂದು ಅಭೂತಪೂರ್ವ ಐಕ್ಯತಾ ಭಾವನೆಯನ್ನು ಅದು ಅಭಿವ್ಯಕ್ತಗೊಳಿಸಿತು. ತ್ರಿಪುರಾದಿಂದ ಕೇರಳದವರೆಗೆ, ಮಹಾರಾಷ್ಟ್ರದಿಂದ ಪಂಜಾಬಿನವರೆಗೆ ಮತ್ತು ಸಮಸ್ತ ಹಿಂದೀ ಭಾಷಿಕ ಪ್ರದೇಶಗಳಲ್ಲಿ, ಎಲ್ಲೆಲ್ಲೂ ಜನ ಬಂದ್ ಕರೆಗೆ ಓಗೊಟ್ಟರು. ಮುಂಬೈ, ಕಲ್ಕತ್ತಾ, ಮದ್ರಾಸ್, ದಿಲ್ಲಿಗಳಲ್ಲಿ ಕೈಗಾರಿಕಾ ಕಾರ್ಮಿಕರು, ನೌಕರರು, ವಿದ್ಯಾರ್ಥಿಗಳು, ಅಧ್ಯಾಪಕರು ಏಕೈಕ ಐಕ್ಯ ವಿಚಾರದಿಂದ, ರಾಜೀವಗಾಂಧಿ ಮತ್ತು ಆತನ ಅಪಖ್ಯಾತ ಕೂಟದ ರಾಜೀನಾಮೆ ಒತ್ತಾಯಿಸಿ ಎಲ್ಲಾ ಚಟುವಟಿಕೆಗಳನ್ನು ಸ್ತಬ್ಧಗೊಳಿಸಿದರು. ಕಲ್ಲಿದ್ದಲು ಕಾರ್ಮಿಕರು, ಉಕ್ಕು ಕಾರ್ಮಿಕರು, ಸಾರ್ವಜನಿಕ ವಲಯದ ಕಾರ್ಮಿಕರು ಮತ್ತು ಬೇರೆ ಕಾರ್ಮಿಕರು, ಬಂದ್‌ಗೆ ಸಕ್ರಿಯ ಬೆಂಬಲ ನೀಡಿದರು. ಪ್ರತಿಭಟನೆಯ ಅಲೆ ಗ್ರಾಮೀಣ ಪ್ರದೇಶಗಳನ್ನು ಕೂಡ ತಲುಪಿತು.

ಈ ಬಂದ್ ಏಕಪಕ್ಷೀಯ ಸಂಗತಿ ಕೂಡಾ ಆಗಿರಲಿಲ್ಲ. ಕಾಂಗ್ರೆಸ್(ಐ) ಪಕ್ಷ ಮತ್ತು ಸರಕಾರ ತನ್ನೆಲ್ಲಾ ಪ್ರತಿಷ್ಠೆ ಖ್ಯಾತಿಯನ್ನು ಪಣಕ್ಕೊಡ್ಡಿದ್ದವು. ಇದಕ್ಕಾಗಿ ಅಧಿಕೃತ ಮಾಧ್ಯಮಗಳನ್ನು ಮತ್ತು ಅನಧಿಕೃತ ಭುಜಬಲವನ್ನು ಪಣವೊಡ್ಡಲು ನಿರ್ಧರಿಸಿದವು. ಕುಪ್ರಸಿದ್ಧ ದೂರದರ್ಶನ ಮತ್ತು ಸುಳ್ಳುಕೋರ ಆಕಾಶವಾಣಿಯ ಮೂಲಕ ದಿನಗಟ್ಟಲೆ ಬಂದ್ ವಿರೋಧಿ ಅಪಪ್ರಚಾರ ನಡೆಯಿತು. ಜನಸಾಮಾನ್ಯರು ಬಂದ್‌ಗೆ ವಿರುದ್ಧವಾಗಿದ್ದಾರೆಂಬ ಭಾವನೆ ಸೃಷ್ಟಿಸಲು ಪ್ರಯತ್ನಿಸಿದರು.' ಮಂತ್ರಿಗಳು, ಕಾಂಗ್ರೆಸ್(ಐ) ಮುಖಂಡರು ಎಲ್ಲರಿಂದಲೂ ಸಮತೋಲ ತಪ್ಪಿದ ಖಂಡನೆಗಳು. ಬಂದ್ ವಿರುದ್ಧ ಹೋರಾಡಲು ಕಾಂಗ್ರೆಸ್(ಐ) ಯುವ ಸಂಘಟನೆಗಳನ್ನು ಬೀದಿಗೆ ಕಳುಹಿಸಲಾಯಿತು. ಕೇಂದ್ರ ಸರ್ಕಾರ ಬಂದ್‌ನಲ್ಲಿ ಭಾಗವಹಿಸಿದ ನೌಕರರ ವಿರುದ್ಧ ತೀವ್ರ ಕ್ರಮದ ಬೆದರಿಕೆ ಹಾಕುವ ಪರಿಪತ್ರಗಳನ್ನು ಹೊರಡಿಸಿತು. ಈ ಹಿನ್ನೆಲೆಯಲ್ಲಿ ಬಂದ್‌ನ ಗೆಲುವು ಇನ್ನೂ ದೊಡ್ಡದು.

> ಬಂದ್ ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವಿನ ಘರ್ಷಣೆಯಾಗಲಿಲ್ಲ. ಆಳುವ ಪಕ್ಷ ಮತ್ತು ಜನತೆಯ ನಡುವಿನ ಘರ್ಷಣೆಯಾಯಿತು.

ರಾಜೀವ್ ಗಾಂಧಿ ಸರ್ಕಾರ ಹಾಗೂ ಕಾಂಗ್ರೆಸ್(ಐ) ಗೆ ಇಷ್ಟು ಕೂಡಾ ಸಾಲದೆನಿಸಿತು. ತನ್ನ ಪ್ರಚಾರದ ಶಕ್ತಿಯ ಮೇಲೆ ಅದಕ್ಕೇ ಪೂರ್ಣ ನಂಬಿಕೆ ಬರಲಿಲ್ಲ. ಆದ್ದರಿಂದ ದಮನ ಕ್ರಮಗಳ ಬಳಕೆಗೆ ವ್ಯಾಪಕ ಬಂದೋಬಸ್ತುಗಳನ್ನು ಮಾಡಿತು. ಜತೆಗೆ ಜನತೆಯ ವಿರುದ್ಧ ದಮನ ಕ್ರಮಗಳಿದ್ದಾಗ್ಯೂ ಅನಧಿಕೃತ ಭುಜಬಲದ ಪ್ರಯೋಗವಿದ್ದಾಗ್ಯೂ, ಸುಳ್ಳು ಅಪಪ್ರಚಾರದ ಅಸ್ತ್ರ ಬಳಸಿದರೂ ಜನತೆಯ ಪ್ರತಿಭಟನೆಯನ್ನು ತಡೆಯುವುದು ಕಾಂಗ್ರೆಸ್(ಐ)ಗೆ ಸಾಧ್ಯವಾಗಲಿಲ್ಲ. ಇದು ರಾಜೀವಗಾಂಧಿ ಸರ್ಕಾರದ ವಿರುದ್ಧ ಜನತೆಯ ಸಿಟ್ಟಿನ ಸರಿಯಾದ ಮಾನದಂಡ.

ಸರಕಾರದ ನೀತಿಗಳ ವಿರುದ್ಧ ಈ ಕಾನೂನು ಬದ್ಧ ಪ್ರತಿಭಟನೆಯನ್ನು ಅಡಗಿಸಲು ಬಳಸಿದ ದಮನ, ಕ್ರೌರ್ಯ ನೇರ ಅನಧಿಕೃತ ಹಿಂಸಾಚಾರ. ಕಾಂಗ್ರೆಸ್(ಐ) ಆಳ್ವಿಕೆಯ ರಾಜ್ಯಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮಂದಿಯ ಬಂಧನ ನಡೆಯಿತು. ಬಿಹಾರವೊಂದರಲ್ಲೇ ಸಿ.ಪಿ.ಐ(ಎಂ)ನ ಕೇಂದ್ರ ಸಮಿತಿ ಸದಸ್ಯರುಗಳೂ ಸೇರಿದಂತೆ 40 ಸಾವಿರ ಮಂದಿಯನ್ನು ಬಂಧಿಸಲಾಯಿತು. ಒರಿಸ್ಸಾ ಮತ್ತಿತರ ರಾಜ್ಯಗಳಲ್ಲೂ ಸಿ.ಪಿ.ಐ.(ಎಂ) ಮತ್ತಿತರ ಪಕ್ಷಗಳ ಮುಖಂಡರನ್ನು ಬಂಧಿಸಲಾಯಿತು. ದೆಹಲಿಯಲ್ಲಿ ನೂರಾರು ಸ್ವಯಂ ಸೇವಕರನ್ನು ಬಂಧಿಸಲಾಯಿತು. ಇದರಲ್ಲಿ ಸಿ.ಪಿ.ಐ.(ಎಂ)ನ ಮಹಿಳಾ ಸದಸ್ಯರೂ ಸೇರಿದ್ದರು. ತ್ರಿಪುರಾದಲ್ಲಿ ಅಗರ್ತಲಾವೊಂದರಲ್ಲೇ 21 ಎಂ.ಎಲ್.ಎ.ಗಳೂ ಸೇರಿದಂತೆ 1500 ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಯಿತು. ಬಂದ್ ನಡೆಸಿದವರ ವಿರುದ್ಧ ಕಾಂಗ್ರೆಸ್(ಐ) ಹಿಂಸಾಚಾರದಲ್ಲಿ ಕಾಮ್ರೇಡ್ ನೃಪೇನ್ ಚಕ್ರವರ್ತಿ ಗಾಯಗೊಂಡು, ಬಹಳ ಹೊತ್ತು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು. ನಂತರ ಅವರನ್ನು ಬಂಧಿಸಲಾಯಿತು. ಮರಣಾಂತಿಕ ಹಲ್ಲೆ, ಪೊಲೀಸ್ ಗೋಲೀಬಾರಿನಲ್ಲಿ ತ್ರಿಪುರಾದಲ್ಲಿ 10-11 ಮಂದಿ ಸತ್ತರು.

> ಇದು ಏಕಪಕ್ಷೀಯ ವ್ಯವಹಾರವಾಗಿರಲಿಲ್ಲ. ಕಾಂಗ್ರೆಸ್(ಐ) ತನ್ನೆಲ್ಲಾ ಪ್ರತಿಷ್ಠೆ, ಖ್ಯಾತಿಯನ್ನು, ಅಧಿಕೃತ ಮಾಧ್ಯಮಗಳನ್ನು ಅನಧಿಕೃತ ಭುಜಬಲವನ್ನೂ ಪಣಕ್ಕೊಡ್ಡಿತು. ಆದರಿಂದಲ್ಲೂ ಆತ್ಮವಿಶ್ವಾಸ ಪಡೆಯಲಾರದೆ ವ್ಯಾಪಕ ದಮನ ಕ್ರಮ ಬಳಸಿತು. ಒಂದು ಲಕ್ಷಕ್ಕೂ ಹೆಚ್ಚು ಬಂಧನ ನಡೆಯಿತು. ಜತೆಗೆ ಜನತೆಯ ವಿರುದ್ಧ ಯೋಜಿತ ಹಿಂಸಾಚಾರ.

ಕೇರಳದಲ್ಲಿ ಕಾಂಗ್ರೆಸ್(ಐ) ಮುಸ್ಲಿಂ ಲೀಗ್‌ನೊಂದಿಗೆ ಸೇರಿ ಹಿಂಸಾಚಾರದ ಯೋಜನೆ ಹಾಕಿತ್ತು. ಬಂದ್ ಮೆರವಣಿಗೆಗಳ ಮೇಲೆ ಅವರು ಹಲ್ಲೆ ನಡೆಸಿದರು. ಒಬ್ಬ ಡಿ.ವೈ.ಎಫ್.ಐ. ಪದಾಧಿಕಾರಿಯನ್ನು ಕೊಚ್ಚಿಹಾಕಿದರು. ಮೈನಾಡಿನಲ್ಲಿ ಮತ್ತಿತರ ಕಡೆ ನಾಲ್ಕು ಸಿ.ಪಿ.ಐ.(ಎಂ) ಮುಖಂಡರು ಕೊಲ್ಲಲ್ಪಟ್ಟರು. ಇನ್ನೊಬ್ಬ ಸಿ.ಪಿ.ಐ.(ಎಂ) ಸದಸ್ಯರು ಗಾಯಗೊಂಡರು. ಪಕ್ಷದ ಕಛೇರಿಯ ಮೇಲೆ ಹಲ್ಲೆ ನಡೆಯಿತು.

ಕಾಂಗ್ರೆಸ್(ಐ)ನ ಸಂದರ್ಭ ಸಾಧಕತನ, ನೀತಿಬಾಹಿರತೆ ಬಂದ್ ಸಮಯದಲ್ಲಿ ಮತ್ತೊಮ್ಮೆ ಬಯಲಾಯಿತು. ಕೇರಳದಲ್ಲಿ ಬಂದ್ ಮುರಿಯಲು ಅದು ಮುಸ್ಲಿಂ ಲೀಗ್‌ನೊಡನೆ ಕೈಮಿಲಾಯಿಸಿದರೆ ಮುಂಬೈನಲ್ಲಿ ಬಿ.ಜೆ.ಪಿ. ಮತ್ತು ಶಿವಸೇನೆ ಬಂದ್ ವಿರೋಧಿಸಿದ್ದವು. ...ವನ್ನು ಜನ ಎಂದೂ ಮರೆಯುವುದಿಲ್ಲ.. ಕಾಂಗ್ರೆಸ್(ಐ) ಜನತೆಯ ಮೂಲಭೂತ ಹಕ್ಕುಗಳ ಮೇಲೆ ಹಲ್ಲೆ ನಡೆಸಿತು. ಸಂವಿಧಾನದಲ್ಲಿ ಪ್ರತಿಷ್ಠಾಪಿಸಿದ್ದ ಜನತೆಯ ಹಕ್ಕುಗಳನ್ನು ತುಳಿದು ಹಾಕಿತು. ಬಂದ್ ಸಮಯದಲ್ಲಿ ಜನತೆಯ ದಮನ, ಸಮಾಜ ವಿರೋಧಿ ಶಕ್ತಿಗಳನ್ನು ಹರಿಯಬಿಟ್ಟದ್ದು ಕಾಂಗ್ರೆಸ್(ಐ)ನ ನಿಜವಾದ ಚುನಾವಣಾ ಘೋಷಣೆ. ಜನ ಇದನ್ನೆಂದೂ ಮರೆಯರು.

ಮುಂಬರುವ ಚುನಾವಣೆಗಳ ಮೇಲೆ ರಾಜೀವ್ ಸರಕಾರದೊಂದಿಗೆ ಮೊದಲ ತಿಕ್ಕಾಟದಲ್ಲಿ ಜನತೆ ಸುಲಭ ಜಯಗಳಿಸಿದ್ದಾರೆ. ಬಂದ್ ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವಿನ ಘರ್ಷಣೆಯಾಗಲಿಲ್ಲ. ಆಳುವ ಪಕ್ಷ ಮತ್ತು ಜನತೆಯ ನಡುವಿನ ಘರ್ಷಣೆಯಾಯಿತು.

ಸಿ.ಪಿ.ಐ(ಎಂ) ಮತ್ತು ಎಡ ಪಕ್ಷಗಳು ಬಂದ್‌ನಲ್ಲಿ ಪ್ರಧಾನ ಪಾತ್ರ ವಹಿಸಿದವು. ಅವರು ಎಲ್ಲಾ ರಾಜ್ಯಗಳಲ್ಲಿ ಇದಕ್ಕಾಗಿ ಸತತವಾಗಿ ದುಡಿದರು. ವಿಶೇಷವಾಗಿ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ತಮಿಳುನಾಡಿನಲ್ಲಿ ಜ್ಯೋತಿಬಸು ಮತ್ತು ಇತರ ಜಾತ್ಯಾತೀತ ವಿರೋಧ ಪಕ್ಷಗಳ ಮುಖಂಡರು, ಕರ್ನಾಟಕದಲ್ಲಿ ಇ.ಕೆ. ನಾಯನಾರ್ ಜಂಟಿ ರ್‍ಯಾಲಿಗಳನ್ನುದ್ದೇಶಿಸಿ ಮಾತನಾಡಿದರು. ಪ್ರಜಾಪ್ರಭುತ್ವವಾದಿ ಜನತೆಯ ನಡುವೆ ಆಗಾಧ ಸ್ಪಂದನ ಪಡೆದರು; ಬಂದ್ ಕಾರ್ಯಾಚರಣೆಗೆ ಜನಸಮೂಹಗಳು ಉತ್ಸಾಹಪೂರ್ಣ ಬೆಂಬಲ ನೀಡುವಂತೆ ಸ್ಫೂರ್ತಿ ತುಂಬಿದರು.

ತ್ರಿಪುರಾದಲ್ಲಿ ಗುಂಡುಗಳನ್ನೂ ಮರಣಾಂತಿಕ ಹಲ್ಲೆಗಳನ್ನೂ ಎದುರಿಸಿದ, ಇತರೆಡೆ ಲಾಠೀ ಪ್ರಹಾರ, ಬಂಧನಗಳನ್ನೆದುರಿಸಿದ ಸಿ.ಪಿ.ಐ.(ಎಂ) ಕಾರ್ಯಕರ್ತರು ಹಲವು ಕಡೆ ಕಾಂಗ್ರೆಸ್(ಐ) ಆಕ್ರಮಣಗಳ ವೈರಿಯಾಗಿದ್ದರು. ರಾಜೀವ್‌ಗಾಂಧಿಯನ್ನು ಅಧಿಕಾರದಿಂದ ಇಳಿಸುವ ಸಮರದಲ್ಲಿ ತಮ್ಮ ಜೀವವನ್ನೇ ತ್ಯಾಗ ಮಾಡಿದ ಸಂಗಾತಿಗಳಿಗೆ ಪಕ್ಷದ ಶ್ರದ್ಧಾಂಜಲಿ.

ಬಂದ್ ಕರೆಯಲ್ಲಿ ಎಡಪಕ್ಷಗಳು ಪಟ್ಟಿ ಮಾಡಿದ ತುರ್ತು ಬೇಡಿಕೆಗಳ ಜಂಟಿ ಹೇಳಿಕೆ ಮುಂದಿನ ಕಾರ್ಯಾಚರಣೆಗೆ ಮಾರ್ಗ ನಿರ್ದೇಶನ ನೀಡಬಲ್ಲ, ಎಡ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆಯನ್ನು ಕ್ರೋಢೀಕರಿಸಬಲ್ಲ ಒಂದು ಮಹತ್ವಪೂರ್ಣ ದಸ್ತಾವೇಜು. ಪ್ರಜಾಪ್ರಭುತ್ವ ಜನಸಮೂಹಗಳನ್ನು ಒಂದಾಗಿಸಬಲ್ಲ, ಸಂಪೂರ್ಣ ಮಾರ್ಗದರ್ಶನ ಒದಗಿಸಬಲ್ಲ ದಸ್ತಾವೇಜು. ಮುಂಬೈಯಲ್ಲಿ ಬಿ.ಜೆ.ಪಿ ಶಿವಸೇನೆಯೊಂದಿಗೆ ಸೇರಿಕೊಂಡು ಬಂದ್ ವಿರೋಧಿಸಿ ಮಾಡಿದ ವಿಶ್ವಾಸಘಾತದಿಂದ, ಶಿವಸೇನೆ ಬಂದ್ ಮುರಿಯುವಲ್ಲಿ ಬಹಿರಂಗ ನೆರವು ನೀಡಿದ ಘಟನೆಯಿಂದ ಜನತಾದಳ ಪಾಠ ಕಲಿಯಬೇಕು.

ಮುಂದಿನದು ಸತತ ಸಾಮೂಹಿಕ ಚಟುವಟಿಕೆಗಳ ಅವಧಿ

> ಎಲ್ಲಾ ಜನ ವಿಭಾಗಗಳನ್ನು, ಎಲ್ಲಾ ರಾಜ್ಯಗಳನ್ನೂ ಆವರಿಸಿದ ಈ ಬಂದ್‌ಗೆ ಒಂದು ರಾಷ್ಟ್ರೀಯ ಸ್ವರೂಪವಿತ್ತು

ಹೋರಾಟದ ಮೊದಲ ಸುತ್ತಿನಲ್ಲಿ ಗೆದ್ದ ಸಮಸ್ತ ಜಾತ್ಯತೀತ ಮತ್ತು ಎಡ ವಿರೋಧ ಪಕ್ಷಗಳು ಕಾಂಗ್ರೆಸ್(ಐ) ಧೋರಣೆಗಳ ವಿರುದ್ಧ ಹೋರಾಡುತ್ತಾ, ಎಲ್ಲಾ ಪ್ರತಿಗಾಮಿ ಶಕ್ತಿಗಳನ್ನು ದೂರ ಸರಿಸುತ್ತಾ ಜನಸಮೂಹಗಳ ನಡುವೆ ಕೆಲಸ ಮುಂದುವರಿಸಬೇಕು. ಚುನಾವಣೆ ನಡೆಯುವವರೆಗಿನ ಈ ಮಧ್ಯದ ಕಾಲಾವಧಿ ಜನಸಮೂಹಗಳ ಬೇಡಿಕೆಗಳಿಗೆ, ಆಕಾಂಕ್ಷೆಗಳಿಗೆ ಪೂರ್ಣ ಅಭಿವ್ಯಕ್ತಿ ನೀಡುವ, ಕಾಂಗ್ರೆಸ್(ಐ)ನ ಪ್ರತಿಯೊಂದು ಧೋರಣೆಯನ್ನು, ಕ್ರಮವನ್ನು ಬಯಲಿಗೆಳೆಯುವ ಸತತ ಸಾಮೂಹಿಕ ಚಟುವಟಿಕೆಗಳ ಅವಧಿಯಾಗಬೇಕು.

> ಕೇರಳದಲ್ಲಿ ಬಂದ್ ಮುರಿಯಲು ಮುಸ್ಲಿಂ ಲೀಗ್‌ನೊಡನೆ ಶಾಮೀಲು, ಮುಂಬೈಯಲ್ಲಿ ಬಸ್ ನಡೆಸಲು ಶಿವಸೇನೆಯ ನೆರವು ಪಡೆದು ಕಾಂಗ್ರೆಸ್(ಐ) ಮತ್ತೊಮ್ಮೆ ತನ್ನ ಸಮಯ ಸಾಧಕತನ, ನೀತಿಬಾಹಿರತೆ ಪ್ರದರ್ಶಿಸಿದೆ.

ಎಡ ಮತ್ತು ಜಾತ್ಯಾತೀತ ಪಕ್ಷಗಳು ಪ್ರಜಾಪ್ರಭುತ್ವ ಹಕ್ಕುಗಳ ಏಕೈಕ ಪ್ರತಿವಾದಿಗಳಾಗಿ, ರಾಷ್ಟ್ರೀಯ ಏಕತೆ ರಕ್ಷಕರಾಗಿ ಜನತೆಗೆ ಸ್ಪಷ್ಟವಾಗಿ ಕಂಡು ಬರಬೇಕು. ಎಡ ಮತ್ತು ಜಾತ್ಯತೀತ ವಿರೋಧ ಪಕ್ಷಗಳ ನಡುವೆ ಸಮಾನ ತಿಳುವಳಿಕೆ ಹೆಚ್ಚಿದಷ್ಟೂ, ರಾಜೀವ್ ವಿರುದ್ಧ ಹೋರಾಟ ಮತ್ತು ಕೋಮುವಾದಿ ಶಕ್ತಿಗಳನ್ನು ದೂರ ತಳ್ಳುವ ಚಟುವಟಿಕೆಗಳು ಜನತೆಯ ನಡುವೆ ಹೆಚ್ಚಿದಷ್ಟು, ಮುಂಬರುವ ಚುನಾವಣೆಗಳಲ್ಲಿ ಭಾರೀ ಯಶಸ್ಸಿನ ಭರವಸೆ ಹೆಚ್ಚುತ್ತಾ ಹೋಗುತ್ತದೆ.

> ತ್ರಿಪುರಾದಲ್ಲಿ ಗುಂಡುಗಳನ್ನು ಮರಣಾಂತಿಕ ಹಲ್ಲೆಗಳನ್ನು ಎದುರಿಸಿ, ಇತರೆಡೆ ಲಾಠಿ ಪ್ರಹಾರ, ಬಂಧನಗಳನ್ನೆದುರಿಸಿ ಸಿ.ಪಿ.ಐ.(ಎಂ) ಕಾರ್ಯಕರ್ತರು ಈ ಹೋರಾಟದಲ್ಲಿ ಪ್ರಧಾನ ಪಾತ್ರ ವಹಿಸಿದರು. ರಾಜೀವಗಾಂಧಿಯವರನ್ನು ಅಧಿಕಾರದಿಂದ ಇಳಿಸುವ ಸಮರದಲ್ಲಿ ಪ್ರಾಣಾರ್ಪಣೆ ಮಾಡಿದ ಸಂಗಾತಿಗಳಿಗೆ ನಮ್ಮ ಶ್ರದ್ಧಾಂಜಲಿ.

ಕೆ.ಜಿ.ಎಫ್. ಉಳಿಸಲು ಸರ್ವಪಕ್ಷಗಳ ಜನಾಂದೋಲನ

ರಾಜೀವ್‌ಗಾಂಧಿಯವರ ನೂತನ ಕೈಗಾರಿಕಾ ನೀತಿಯ ಪರಿಣಾಮವಾಗಿ ಇಂದು ದೇಶದಲ್ಲಿ ಒಂದು ಲಕ್ಷದ ಐವತ್ತು ಸಾವಿರ ಕೈಗಾರಿಕೆಗಳು ಮುಚ್ಚಿ ಕೋಟ್ಯಾಂತರ ಕಾರ್ಮಿಕರು ಬೀದಿ ಪಾಲಾಗಿದ್ದರೆ ಕೇಂದ್ರೋದ್ಯಮ ಕೈಗಾರಿಕೆಗಳನ್ನು ಒಂದಲ್ಲ ಒಂದು ನೆಪವೊಡ್ಡಿ ಖಾಸಗೀಯವರ ಸ್ವತ್ತಾಗಿಸುವುದು ಬಹು ರಾಷ್ಟ್ರೀಯ ಕಂಪನಿಗಳನ್ನು ಆಹ್ವಾನಿಸಿ ದೇಶದ ಸಂಪತ್ತನ್ನು ಕೊಳ್ಳೆಹೊಡೆಯುವಂತೆ ಮಾಡುವಲ್ಲಿ ರಾಜೀವ್ ಆಡಳಿತ ಎಲ್ಲಾ ನೀತಿ ನಿಯಮಗಳನ್ನು ಗಾಳಿಗೆ ತೂರಿ ದೇಶದ ಕೈಗಾರಿಕೆಯನ್ನು ವಿನಾಶದೆಡೆಗೆ ಕೊಂಡೊಯ್ಯುತ್ತಿದ್ದಾರೆ.

ಕೆ.ಜಿ.ಎಫ್.ನಲ್ಲಿರುವ ಭಾರತ ಗೋಲ್ಡ್‌ಮೈನ್ಸ್‌ನ್ನು 7 ವರ್ಷಗಳಲ್ಲಿ ಹಂತ ಹಂತವಾಗಿ ಮುಚ್ಚುವ ಯೋಜನೆಯೊಂದನ್ನು ರೂಪಿಸಿ ಇದರ ಪೂರ್ವಭಾವಿಯಾಗಿ 1989ರ ಜನವರಿಯಿಂದ ಮೈಸೂರು ಮೈನ್ಸ್‌ನ್ನು ಸಂಪೂರ್ಣವಾಗಿ ಮುಚ್ಚಲಾಗಿದೆ. ಇಲ್ಲಿ ಕೆಲಸ ಮಾಡುತ್ತಿದ್ದ 1500 ಕಾರ್ಮಿಕರನ್ನು ರಾಜಸ್ಥಾನ್, ಬಿಹಾರ, ಒರಿಸ್ಸಾ, ಪ.ಬಂಗಾಳಗಳಿಗೆ ವರ್ಗಾಯಿಸಲಾಗಿದೆ. ಈ ಕಾರ್ಯ ಪ್ರಾರಂಭವಾದಾಗಿನಿಂದ ಕೆ.ಜಿ.ಎಫ್.ನ ಕಾರ್ಮಿಕರಲ್ಲಿ ಭಯದ ವಾತಾವರಣ ಉಂಟಾಗಿದೆ.

ಸಿ.ಐ.ಟಿ.ಯು. ನೇತೃತ್ವದ ಭಾರತ ಗೋಲ್ಡ್ ಮೈನ್ಸ್ ಎಂಪ್ಲಾಯಿಸ್ ಯೂನಿಯನ್ ಈ ಕುರಿತು ಕಾರ್ಮಿಕರನ್ನು ಹಾಗೂ ಸಾರ್ವಜನಿಕರನ್ನು ಸಂಘಟಿಸಿ ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ಹಾಗೂ ದಿವಾಳಿ ನೀತಿಯನ್ನು ಪ್ರತಿಭಟಿಸಲು ವಿವಿಧ ರಾಜಕೀಯ ಪಕ್ಷಗಳು ಹಾಗೂ ಸಂಘ ಸಂಸ್ಥೆಗಳನ್ನೊಳಗೊಂಡ 'ಕೆ.ಜಿ.ಎಫ್ ಉಳಿಸಿ' ಸಮಿತಿ ನೇತೃತ್ವದಲ್ಲಿ ಜನಾಂದೋಲನ ರೂಪಿಸಲು ಸಂಘದ ಕಾರ್ಯಕಾರಿ ಸಮಿತಿ ಕರೆ ನೀಡಿತು.

ರಾಬರ್ಟ್‌ಸನ್ ಪೇಟೆ ಪ್ರವಾಸಿ ಮಂದಿರದಲ್ಲಿ ಜರುಗಿದ ವಿವಿಧ ರಾಜಕೀಯ ಪಕ್ಷಗಳ ಜಂಟಿ ಸಭೆ ಕೆ.ಜಿ.ಎಫ್. ಸಿ.ಪಿ.ಐ.(ಎಂ) ಶಾಸಕ ಕಾಂ: ಟಿ.ಎಸ್. ಮಣಿಯವರನ್ನು ಕೆ.ಜಿ.ಎಫ್. ಉಳಿಸಿ' ಸಮನ್ವಯ ಸಮಿತಿಯ ಸಂಚಾಲಕರನ್ನಾಗಿ ಆಯ್ಕೆಮಾಡಿತು. ಈ ಸಭೆಯಲ್ಲಿ ಸಿ.ಪಿ.ಐ.(ಎಂ), ಸಿ.ಪಿ.ಐ., ಜನತಾದಳ, ಜನತಾಪಕ್ಷ, ಆರ್.ಪಿ.ಐ., ಡಿ.ಎಂ.ಕೆ., ತೆಲುಗು ದೇಶಂ, ಬಿ.ಜೆ.ಪಿ. ಸಿ.ಐ.ಟಿ.ಯು. ಐ.ಎನ್.ಟಿ.ಯು.ಸಿ., ಜನತಾ ಟ್ರೇಡ್ ಯೂನಿಯನ್, ಆರ್.ಪಿ.ಐ. ಟ್ರೇಡ್ ಯೂನಿಯನ್, ಮುಂತಾದ ಪಕ್ಷ ಹಾಗೂ ಕಾರ್ಮಿಕ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು.

ಮೈಸೂರು ಮೈನ್ಸ್ ಮುಚ್ಚಿದ್ದನ್ನು ಪ್ರತಿಭಟಿಸಲು ಸಮನ್ವಯ ಸಮಿತಿ ನೀಡಿದ್ದ ಕರೆಯಂತೆ ನಡೆದ ಬೃಹತ್ ರ‍್ಯಾಲಿಯಲ್ಲಿ ಸರ್ವಪಕ್ಷ ಹಾಗೂ ಸಂಘಟನೆಗಳ 2,000 ಜನರು ಪಾಲ್ಗೊಂಡರು.

ಅರ್ಜೆಂಟ್ ಆಫೀಸಿನ ಮುಂಭಾಗದಲ್ಲಿ ಈಚೀಚೆಗೆ ನಡೆದ ಧರಣಿ ಸತ್ಯಾಗ್ರಹದಲ್ಲಿ ಸರ್ವಪಕ್ಷಗಳ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.

ಸರ್ವಪಕ್ಷಗಳ ಮುಖಂಡರ ನಿಯೋಗ ದೆಹಲಿಗೆ ತೆರಳಿ ಪ್ರಧಾನಿಯವರಿಗೂ ಹಾಗೂ ರಾಷ್ಟ್ರಪತಿಗಳಿಗೂ ಮನವಿಯೊಂದನ್ನು ಅರ್ಪಿಸಿ ಕೆ.ಜಿ.ಎಫ್. ಮೈನ್ಸ್ ಉಳಿಸುವ ಮೂಲಕ ಲಕ್ಷಾಂತರ ಕಾರ್ಮಿಕರ ಕುಟುಂಬಗಳನ್ನು ರಕ್ಷಿಸಬೇಕೆಂದು ಒತ್ತಾಯಿಸಲು ನಿರ್ಧರಿಸಲಾಗಿದೆ. ಸಿ.ಪಿ.ಐ.(ಎಂ) ಎಂ.ಪಿ.ಗಳ ಸಹಾಯ ಪಡೆದು ಪ್ರಧಾನಿಗಳ ಮೇಲೆ ಒತ್ತಾಯ ತರಲು ಪ್ರಯತ್ನಿಸಲಾಗುತ್ತಿದೆ.

★ ★ ★

ದ.ಕ. ಜಿಲ್ಲೆಯಾದ್ಯಂತ ರೈತರ ಚಳುವಳಿ

ದ.ಕ.ಜಿಲ್ಲೆಯಾದ್ಯಂತ ಸೆಪ್ಟೆಂಬರ್ 1ರಿಂದ 15 ರವರೆವಿಗೂ ಜಿಲ್ಲೆಯ ರೈತರ 7 ಪ್ರಮುಖ ಬೇಡಿಕೆ ಮುಂದಿರಿಸಿ ನಾಡ ಕಛೇರಿ ಮಂಡಲ ಪಂಚಾಯ್ತಿ ಜಿಲ್ಲಾ ಪರಿಷತ್, ತಾಲೋಕು ಕಛೇರಿ, ಜಿಲ್ಲಾ ಕಛೇರಿಗಳ ಎದುರು ಹಂತಹಂತದ ಹೋರಾಟಕ್ಕೆ ನೀಡಿದ ಕರೆಯಂತೆ ಜಿಲ್ಲೆಯ ವಿವಿಧೆಡೆ ಹೋರಾಟಗಳು ಅತ್ಯಂತ ಯಶಸ್ವಿಯಾಗಿ ಜರುಗುತ್ತಿರುವ ಬಗ್ಗೆ ವರದಿಗಳು ತಲುಪುತ್ತಿವೆ.

ಕುಂದಾಪುರ

ಸೆಪ್ಟೆಂಬರ್ 1ರಂದು ತಾಲೋಕಿನ 12 ಮಂಡಲಗಳ ಪೈಕಿ 11 ಮಂಡಲ ಪಂಚಾಯ್ತಿ ಕಛೇರಿ ಎದುರು ರೈತ-ಕೃಷಿ ಕೂಲಿಗಾರರು ನಡೆಸಿದ ಧರಣಿ ಸತ್ಯಾಗ್ರಹದಲ್ಲಿ 1,100 ಮಂದಿ ಭಾಗವಹಿಸಿದ್ದಾರೆ ಎಂದು ಕಾರ್ಯದರ್ಶಿ ಕಾ॥ಯು ರಾಸಭಂಡಾರಿ ತಿಳಿಸಿದ್ದಾರೆ. ಸೆಪ್ಟೆಂಬರ್ 2,5,6,7 ರಂದು ಧರಣಿ ಮುಂದುವರೆಸಿ ಮಂಡಲ ಪ್ರಧಾನರಿಗೆ ಮನವಿ ಅರ್ಪಿಸಲಾಯಿತೆಂದು ಅವರು ಹೇಳಿ 11 ಮಂಡಲಗಳಲ್ಲಿ ನಾಯಕತ್ವ ವಹಿಸಿದ ಸಂಗಾತಿಗಳು ಹಾಗೂ ರೈತ- ಕೃಷಿ ಕೂಲಿಗಾರರಿಗೆ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ಸಾಗುವಳಿ ಭೂಮಿ ಸಕ್ರಮಗೊಳಿಸಬೇಕು, ಹಸಿರು ಕಾರ್ಡ್ ಗೊಬ್ಬರ ಬೀಜಗಳ ವ್ಯವಸ್ಥಿತ ವಿತರಣೆ, ಕೃಷಿ ಕೂಲಿಗಾರರಿಗೆ ಕನಿಷ್ಟ ವೇತನ, ಬ್ಯಾಂಕ್ ಸಾಲಮನ್ನಾ, ನಿವೇಶನ ರಹಿತರಿಗೆ ನಿವೇಶನ, ಮನವಿ ಮುಂತಾದ ಬೇಡಿಕೆಗಳನ್ನು ಒಳಗೊಂಡಿತು.

ಪುತ್ತೂರು

ತಾಲೋಕಿನ ಕುಂಬ್ರಮಂಡಲ ಪಂಚಾಯತ್ ಕಛೇರಿ ಎದುರು ಸೆಪ್ಟೆಂಬರ್ 1ರಂದು ಚಳುವಳಿ ಆರಂಭಗೊಂಡಿದೆ, ಕೌಡಿಚಾರ್‌ನಿಂದ 2 ಕಿ.ಮೀ. ಕಾಲ್ನಡಿಗೆ ಜಾಥ ನಡೆಸಿ ಸತ್ಯಾಗ್ರಹ ಪ್ರಾರಂಭಿಸಲಾಯಿತು. ರೈತ ನಾಯಕ ವಿಲ್‌ಫ್ರೆಡ್ ಡಿ'ಸೋಜಾರವರು ಮಾತನಾಡಿ ಪ್ರಗತಿಪರ ಭೂ ಸುಧಾರಣೆ ಜಾರಿಗಾಗಿ ಸರ್ಕಾರದ ರೈತ ವಿರೋಧಿ ನಿರ್ಲಕ್ಷತನ ವಿರುದ್ಧ ಹೋರಾಡಲು ಕರೆ ನೀಡಿದರು. ಮಂಡಲ ಪ್ರಧಾನರಿಗೆ ಮನವಿ ಅರ್ಪಿಸಲಾಯಿತು. ಕಾ॥ ಅಣ್ಣು, ಪದ್ಮನಾಭ ನಾಯಕ್, ಪಾಲ್, ಈಶ್ವರನಾಯಕ್, ಚೋಮ ಮುಖಂಡತ್ವ ವಹಿಸಿದ್ದರು.

ಯಶಸ್ವಿ ಬಂದ್

ಬಿಜಾಪುರ:

ನಗರದಲ್ಲಿ ಸೆಕ್ಷನ್ 144ನ್ನು ಜಾರಿಗೊಳಿಸಲಾಗಿತ್ತು. ರೈತಸಂಘದ ಕಾರ್ಯಕರ್ತರು ಸೆಕ್ಷನ್ ಹಾಕಿರುವ ಪರಿಮಿತಿಯಿಂದ ಹೊರಗೆ ಹೋಗಿ ನಗರಕ್ಕೆ ಬರುವ 4 ಪ್ರಮುಖ ಹೆದ್ದಾರಿಗಳಲ್ಲಿ ರಸ್ತೆತಡೆ ಚಳುವಳಿ ಕೈಗೊಂಡರು. ಆಗಸ್ಟ್ 29ರ ರಾತ್ರಿಯಿಂದಲೇ ಈ ಬಸ್ ತಡೆ ಚಳುವಳಿ ಆರಂಭಗೊಂಡಿತ್ತು. ಬೆಳಿಗ್ಗೆ 9 ರಿಂದ ಸಂಜೆ 4ರವರೆವಿಗೂ ಈ ಚಳುವಳಿ ಮುಂದುವರೆಯಿತು. ಮುಸ್ಲಿಂ ಜನಾಂಗ ವಾಸಿಸುವ ಪ್ರದೇಶ ಕೂಡ ಬಂದ್‌ನಲ್ಲಿ ಪೂರ್ಣ ಪಾಲ್ಗೊಂಡಿತು. ಇಬ್ಬರು ಮಾಜಿ ಮಂತ್ರಿಗಳು ಒಬ್ಬರು ಜನತಾ ಎಂ.ಪಿ. ಸಿ.ಪಿ.ಐ.(ಎಂ) ಧುರೀಣ ಕಾ॥ ಎನ್.ಕೆ. ಉಪಾಧ್ಯಾಯ ಹಾಗೂ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಕಾ॥ ಭೀಮಸಿ ಕಲಾದಗಿಯವರನ್ನೊಳಗೊಂಡ ನೂರಾರು ಜನರ ಮೆರವಣಿಗೆ ನಡೆಯಿತು. ಸಿ.ಪಿ.ಐ.(ಎಂ), ಜನತಾದಳ, ಪಕ್ಷಗಳು ಪಾಲ್ಗೊಂಡಿದ್ದವು. ಗಾಂಧಿ ಚೌಕದಲ್ಲಿ ಬಹಿರಂಗ ಸಭೆ ನಡೆಸಲಾಯಿತು. 400 ಜನರನ್ನು ಪೋಲೀಸರು ಬಂಧಿಸಿದರು. ಜಿಲ್ಲೆಯಾದ್ಯಂತ ಯಶಸ್ವಿ ಶಾಂತಿಯುತ ಬಂದ್ ಆಚರಿಸಲಾಗಿದೆ.

ಗುಲ್ಬರ್ಗಾ

ಜಿಲ್ಲೆಯಾದ್ಯಂತ ಅತ್ಯಂತ ಯಶಸ್ವಿ ಬಂದ್ ಆಚರಿಸಲಾಯಿತು. ಹೋಟೆಲ್, ಅಂಗಡಿಗಳು ಸಂಪೂರ್ಣ ಮುಚ್ಚಿದ್ದವು. ಕಾಂಗ್ರೆ ಹಾಗೂ ಎಡ ಪಕ್ಷಗಳ ನಡುವೆ ಘರ್ಷಣೆ ನಡೆಯಿತು. ಜನತಾದಳ, ಸಿ.ಪಿ.ಐ.(ಎಂ) ಸಿ.ಪಿ.ಐ. ನ ಭಾರಿ ಮೆರವಣಿಗೆ ಬಹಿರಂಗ ಸಭೆ ನಡೆಯಿತು. ಎಸ್.ಕೆ.ಕಾಂತ, ಅಡಿವೆಪ್ಪ ಸಿ.ಎ.ಪಾಟೀಲ್ ಮುಂತಾದವರು ಮಾತನಾಡಿದರು. ವಾಡಿಯಲ್ಲಿ 50 ಶಹಾಪುರ 50 ಜೇವರ್ಗಿ ಚಿಂಚೋಳಿಗಳಲ್ಲಿ 57 ಜನರನ್ನು ಬಂಧಿಸಲಾಯಿತು. ಆಳಂದದಲ್ಲಿ ಬಿ.ಆರ್. ಪಾಟೀಲ್, ಸಿ.ಪಿ.ಐ.(ಎಂ) ಮುಖಂಡ ಮಾರುತಿ ಮಾನ್ಪಡೆ ಬಂಧಿತರಾದರು. ಕಡಗಂಚಿಯಲ್ಲಿ ವಿದ್ಯಾರ್ಥಿಗಳನ್ನು ಬಂಧಿಸಲಾಯಿತು.

ಶಹಾಪುರದಲ್ಲಿ 500 ಜನರ ಮೆರವಣಿಗೆ ನಡೆದು ಜನತಾದಳ, ಸಿ.ಪಿ.ಐ (ಎಂ) ಎಸ್.ಎಫ್.ಐ ನಾಯಕರು ಸಭೆಯಲ್ಲಿ ಮಾತನಾಡಿದರು. ತಾಲೋಕು ಪಕ್ಷದ ಕಾರ್ಯದರ್ಶಿ ಕಾ॥ ಚನ್ನಪ್ಪ ಆನೆಗುಂದಿ ಜನರನ್ನು ಅಭಿನಂದಿಸಿದ್ದಾರೆ.

ಕೋಲಾರ

ಜಿಲ್ಲೆಯ ಬಾಗೇಪಲ್ಲಿ ಹಾಗೂ ಚಿಂತಾಮಣಿಗಳಲ್ಲಿ ಸಿ.ಪಿ.ಐ.(ಎಂ) ಹಾಗೂ ಕಾಂಗ್ರೆ ಕಾರ್ಯಕರ್ತರ ನಡುವೆ ಘರ್ಷಣೆ ನಡೆದು ಹಲವರಿಗೆ ಗಾಯಗಳಾಗಿವೆ. ಮುಳಬಾಗಿಲಿನಲ್ಲಿ ಪಕ್ಷದ ಶಾಸಕ ಕಾ॥ ಆರ್. ವೆಂಕಟರಾಮಯ್ಯನವರ ನೇತೃತ್ವದಲ್ಲಿ ಮೆರವಣಿಗೆ ಹೊರಟ ಕಾರ್ಯಕರ್ತರ ಮೇಲೆ ಕಾಂಗ್ರೆನ ಕೆಲವರು ಹಲ್ಲೆ ನಡೆಸಿದಾಗ ಲಾಠಿ ಪ್ರಹಾರ ನಡೆದು 40 ಮಂದಿಯನ್ನು ಬಂಧಿಸಲಾಯಿತು. ಕೆ.ಜಿ.ಎಫ್‌ನಲ್ಲಿ ಸಿ.ಪಿ.ಐ.(ಎಂ) ನಾಯಕರಾದ ಕಾ॥ಸವರಿದಾಸ್, ಜಯರಾಂರವರನ್ನು ಹಾಗೂ ಜನತಾದಳ, ಡಿ.ಎಂ.ಕೆ. ನಾಯಕರನ್ನು ಬಂಧಿಸಲಾಯಿತು. ಹೋಟೆಲ್ ಅಂಗಡಿ ಮುಚ್ಚಿದ್ದವು.

ಬಾಗೇಪಲ್ಲಿ

ಆಗಸ್ಟ್ 23 ರಿಂದ ಎಲ್ಲಾ ಮಂಡಲ್‌ಗಳಲ್ಲಿ ಸಭೆ ನಡೆಸಲಾಯಿತು. ಗುಡಿಬಂಡೆಯಲ್ಲಿ 3 ಸಭೆ. ಪ್ರತಿ ಸಭೆಯಲ್ಲೂ ಐನೂರರಿಂದ ಸಾವಿರ ಜನರು ಪಾಲ್ಗೊಳ್ಳುತ್ತಿದ್ದರು. ಕಾ॥ ಶ್ರೀ ರಾಮರೆಡ್ಡಿ, ಗಂಗೂಲಪ್ಪ ರಾಮಕೃಷ್ಣಪ್ಪ, ಮಂಜೂರ್ ಅಹ್ಮದ್, ಕೃಷ್ಣರೆಡ್ಡಿ, ಲಕ್ಷ್ಮಿನಾರಾಯಣ ಸಭೆಗಳಲ್ಲಿ ಮಾತನಾಡಿದರು. ಬಂದ್ ದಿನದಂದು ಒಂದು ಅಂಗಡಿಯೂ ತೆರೆಯದೆ ಅಭೂತಪೂರ್ವ ಬಂದ್ ಆಚರಿಸಿತು. ಕಾಂಗ್ರೆನವರು ಬಲವಂತದಿಂದ ಅಂಗಡಿ ತೆರೆಸಲು ಹೋದಾಗ ಘರ್ಷಣೆ ಸಂಭವಿಸಿತು. 22 ಸಿ.ಪಿ.ಐ.(ಎಂ) ಕಾರ್ಯಕರ್ತರನ್ನು ಬಂಧಿಸಿದ ವೃತ್ತ ನಿರೀಕ್ಷಕರನ್ನು ಘೇರಾವೋ ಮಾಡಲಾಯಿತು. ಸಬ್ ಇನ್ಸ್‌ಪೆಕ್ಟರ್ ಹಾಗೂ ತಹಸೀಲ್ದಾರ್‌ರವರು ಧ್ವನಿ ವರ್ಧಕ ಮೂಲಕ ಅಂಗಡಿ ತೆರೆಯಲು ಮಾಡಿದ ಮನವಿಯನ್ನು ಜನತೆ ತಿರಸ್ಕರಿಸಿತುತು.

ಚಿಂತಾಮಣಿ

ಸಿ.ಪಿ.ಐ.(ಎಂ) ಮುಖಂಡ ಕಾ॥ ಅಶ್ವಥನಾರಾಯಣರೆಡ್ಡಿ, ಮಾಜಿ ಗೃಹ ಸಚಿವ ಕೃಷ್ಣಾರೆಡ್ಡಿ.ಯವರನ್ನೊಳಗೊಂಡ 80 ಜನರನ್ನು ಪೋಲೀಸರು ಬಂಧಿಸಿದರು. ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ ಒಬ್ಬ ಎ.ಎಸ್.ಐ. ಯನ್ನು ಸಸ್ಪೆಂಡ್ ಮಾಡಲಾಯಿತು. ಕಾಂಗ್ರೆ ಜೊತೆ ಘರ್ಷಣೆ ನಡೆದ ಬಗ್ಗೆ ವರದಿ[illegible] 10 ಸಾವಿರ ಕರಪತ್ರ ಮುದ್ರಿಸ[illegible] ಶಿಡ್ಲಘಟ್ಟದಲ್ಲಿ ಎಲ್ಲಾ ಮಂಡಲ್‌ಗಳು ಬಂದಾಗಿದ್ದವು. ಬಂಗಾರಪೇಟೆಯಲ್ಲಿ ಜನತಾದಳ ಮತ್ತು ಡಿ.ವೈ.ಎಫ್.ಐ. ಜೊತೆ ಸೇರಿ ಬಂದ್ ಯಶಸ್ವಿಗೊಳಿಸಿದರು. ಕಾಂಗ್ರೆ ಜೊತೆ ಇಲ್ಲಿಯೂ ಘರ್ಷಣೆ ನಡೆದವು. ಕೋಲಾರದಲ್ಲಿ ಬಂದ್ ಯಶಸ್ವಿಗೊಂಡು ಮೆರವಣಿಗೆಯೊಂದನ್ನು ತೆಗೆದು ಸಭೆ ನಡೆಸಲಾಯಿತು. ಗೌರಿಬಿದನೂರಿನಲ್ಲಿ ಭಾಗಶಃ ಬಂದಾಗಿದೆ ಇಲ್ಲಿ 2 ಸಭೆಗಳನ್ನು ನಡೆಸಲಾಯಿತು.

ಕೆ.ಜಿ.ಎಫ್.: 56 ಮಂದಿಬಂದಿತರಲ್ಲಿ 46 ಸಿ.ಪಿ.ಐ.(ಎಂ) ಕಾರ್ಯಕರ್ತರು ಹಾಗೂ ಜನತಾದಳ, ಡಿ.ಎಂ.ಕೆ. ಪಕ್ಷದವರವನ್ನು ಬಂಧಿಸಲಾಗಿದೆ.

ಚಿತ್ರದುರ್ಗ

ಜಿಲ್ಲೆಯಾದ್ಯಂತ 351 ಮಂದಿಯನ್ನು ಬಂಧಿಸಲಾಗಿದೆ. ಕೈಗಾರಿಕಾ ಮುಷ್ಕರ, ಅಂಗಡಿ ಮುಗ್ಗಟ್ಟು ಬಂದಾಗಿತ್ತು.

ಹರಿಹರ: ಸಿ.ಐ.ಟಿ.ಯು ನೀಡಿದ ಕರೆಯಂತೆ ಎಲ್ಲಾ ಕಾರ್ಖಾನೆಗಳಲ್ಲಿ ಮುಷ್ಕರ ನಡೆಯಿತು. ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ಬಿ.ಎಂ.ಎಸ್. ಬಂದ್ ವಿರೋಧಿಸಿತು. ನಗರದಲ್ಲಿದ್ದ ಪ್ರತಿಬಂಧ ಕಾಜ್ಞೆ ವಿರೋಧಿಸಿ ಮೆರವಣಿಗೆ ತೆಗೆದು ಬಂದ್ ಅತ್ಯಂತ ಯಶಸ್ವಿಗೊಳಿಸಲಾಯಿತು. ಶಾಲೆ, ಕಾಲೇಜುಗಳು ಅಂಗಡಿಗಳು ನೂರಕ್ಕೆ ನೂರರಷ್ಟು ಮುಚ್ಚಿದ್ದವು. ಬ್ಯಾಂಕ್, ಸರ್ಕಾರಿ ನೌಕರರಿಗೆ ಬಂದ್‌ನಲ್ಲಿ ಪಾಲ್ಗೊಳ್ಳುವಂತೆ ಮಾಡಿದ ಮನವಿಯಂತೆ ಅವರು ಬಂದ್‌ನಲ್ಲಿ ಭಾಗವಹಿಸಿದ್ದರು. ಸಿ.ಐ.ಟಿ.ಯು. ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ॥ವಿ.ಜೆ.ಕೆ. ನಾಯರ್‌ರವರು ಹರಿಹರದಲ್ಲಿ ಉಪಸ್ಥಿತರಿದ್ದು ನೇತೃತ್ವ ವಹಿಸಿದ್ದರು.

ರಾಣಿಬೆನ್ನೂರು: ನೇಕಾರರು, ಬೀಡಿ ಕಾರ್ಮಿಕರು ಮೆರವಣಿಗೆ ನಡೆಸಿ 200 ಮಂದಿ ಬಂಧನಕ್ಕೊಳಗಾದರು. ವ್ಯಾಪಾರ ವಹಿವಾಟು ಸ್ಥಗಿತಗೊಂಡಿತು. ಕ್ಯಾದಗಿ ಮತ್ತು ಗಂಗಾಧರ ನೇತೃತ್ವ ವಹಿಸಿದ್ದರು. ಬಂದ್ ಪೂರ್ಣ ಯಶಸ್ವಿಯಾಯಿತು.

ಉ.ಕ. ಜಿಲ್ಲೆ

ಜಿಲ್ಲೆಯಾದ್ಯಂತ ಬಂದ್ ಅಭೂತಪೂರ್ವ ಯಶಸ್ವಿಗೊಂಡಿದೆ. ಹೋಟೆಲ್ ಅಂಗಡಿ ಸಿನಿಮಾಗಳು ಬಂದಾಗಿದ್ದವು. ರಾಜ್ಯಸಭೆ ಸದಸ್ಯ ಆರ್.ಎಸ್. ನಾಯಕ್ ವಿಧಾನ ಪರಿಷತ್‌ನ ಯಶವಂತರಟ್ಟಿ ಸೇರಿದಂತೆ ಹಲವಾರು ಕಾರ್ಯಕರ್ತರನ್ನು ಬಂಧಿಸಲಾಯಿತು. ಕಾರವಾರದ ವ್ಯಾಪಾರ ಬಂದ್ ಆಗಿತ್ತು. ಕಾಂಗ್ರೆನ ಮನವಿ ತಿರಸ್ಕರಿಸಿ ಬಂದ್ ಯಶಸ್ವಿಗೊಂಡಿದೆ. ಜೊಯ್ಡಾ, ಸಿದ್ದಾಪುರಗಳಲ್ಲಿ ಭಾರಿ ಯಶಸ್ವಿಯಾಗಿದೆ. ದಾಂಡೇಲಿಯಲ್ಲಿ ಸಿ.ಪಿ.ಐ.(ಎಂ) ನಾಯಕ ಕಾ॥ ಆರ್.ಎಸ್. ನಾಯಕ ಸೇರಿ 49 ಜನರನ್ನು ಬಂಧಿಸಲಾಯಿತು. ದಾಂಡೇಲಿಯಲ್ಲಿ ಸಿ.ಐ.ಟಿ.ಯು.ಗೆ ಸೇರಿದ ಎಲ್ಲಾ ಕಾರ್ಖಾನೆಗಳು ಮುಷ್ಕರ ನಡೆಸಿದವು.

ಸಿರಸಿ

ವ್ಯಾಪಾರ ಸ್ಥಗಿತಗೊಂಡು ಶಾಲೆ

4 ನೇಪುಟಕ್ಕೆ

ಭಾವೈಕ್ಯತಾ ದಿನ-ಸ್ವಾತಂತ್ರ್ಯ ಯೋಧರಿಗೆ ಸನ್ಮಾನ

ರಾಷ್ಟ್ರೀಯ ಭಾವೈಕ್ಯತಾ ದಿನಾಚರಣೆ ಅಂಗವಾಗಿ ಬಿಜಾಪುರದ ಡಿ.ವೈ.ಎಫ್.ಐ. ಜಿಲ್ಲಾ ಸಮಿತಿಯು ಆಗಸ್ಟ್ 15 ರಂದು ಸೈಕಲ್ ರ‍್ಯಾಲಿ ಏರ್ಪಡಿಸಿತು. ರೈತ ಮುಖಂಡ ಆರ್.ಎಚ್. ಕಲಾದಗಿ ರ‍್ಯಾಲಿ ಉದ್ಘಾಟಿಸಿದರು. ಸ್ವಾತಂತ್ರ್ಯ ಯೋಧ ಕಾಕಾ ಕಾರ ಖಗೀಸರನ್ನು ಅವರ ಜನ್ಮ ಶತಾಬ್ದಿ 'ಸಂದರ್ಭದಲ್ಲಿ ಮನೆಯಲ್ಲಿ ಸನ್ಮಾನಿಸಲಾಯಿತು. ಎನ್.ಜಿ.ಒ. ಭವನದಲ್ಲಿ ಸ್ವಾತಂತ್ರ್ಯಯೋಧರಿಗೆ ಸನ್ಮಾನ ಸಮಾರಂಭ ಏರ್ಪಡಿಸಲಾಯಿತು. ಎಲ್.ಬಿ.ಲಾಯದಗುಂದಿ, ಬಾಗೇವಾಡಿ, ನೂರುದ್ದೀನ ಹಾಗೂ ಇಬ್ಬರು ಹಿರಿಯ ಸ್ವಾತಂತ್ರ್ಯ ಯೋಧ ಮಹಿಳೆಯರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಗಾಗಿ ನಿಮ್ಮ ತ್ಯಾಗ ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಲು ಹೋರಾಡುತ್ತೇವೆಂದು ಸ್ವಾತಂತ್ರ್ಯ ಯೋಧರ ಮುಂದೆ ಪ್ರತಿಜ್ಞೆಯನ್ನು ಸ್ವೀಕರಿಸಿದರು

ಹೈಸ್ಕೂಲ್ ವಿದ್ಯಾರ್ಥಿ ಬೇಡಿಕೆ ಒತ್ತಾಯಿಸಿ 'ಜಿಲ್ಲಾ ಪರಿಷತ್ ಚಲೋ'

ಬಳ್ಳಾರಿ ಜಿಲ್ಲೆಯ ವಿವಿಧ ತಾಲೋಕುಗಳ ನೂರಾರು ಹೈಸ್ಕೂಲ್‌ಗಳ ವಿದ್ಯಾರ್ಥಿಗಳು ಬಳ್ಳಾರಿ ನಗರದಲ್ಲಿ ಬೃಹತ್ ಮೆರವಣಿಗೆ ನಡೆಸಿ ಜಿಲ್ಲಾ ಪರಿಷತ್ ಕಛೇರಿಯೆದುರು ಮತ ಪ್ರದರ್ಶನ, ಧರಣಿ ನಡೆಸಿ ಬೇಡಿಕೆಗಳ ಮನವಿ ಅರ್ಪಿಸಲಾಯಿತು.

ಕುಡಿಯುವ ನೀರು, ಶಾಲೆ ಕಟ್ಟಡ, ಗ್ರಂಥಾಲಯ, ಪ್ರವೇಶಶುಲ್ಕ ರಿಯಾಯಿತಿ, ಪಠ್ಯಪುಸ್ತಕ, ಹಾಸ್ಟಲ್ ಸೌಲಭ್ಯ ಮುಂತಾದ 11 ಬೇಡಿಕೆಗಳನ್ನು ಒಳಗೊಂಡ ಮನವಿಯನ್ನು ಸ್ವೀಕರಿಸಿದ ಜಿಲ್ಲಾ ಪರಿಷತ್ ಅಧ್ಯಕ್ಷ ಬಾವಿ ಬೆಟ್ಟಪ್ಪ ಮಾತನಾಡಿದರು. ಭ್ರಷ್ಟ ಮತ್ತು ವಿದ್ಯಾರ್ಥಿಗಳಿಗೆ ಕಿರುಕುಳ ಕೊಡುವ ಹಾಸ್ಟಲ್ ಅಧೀಕ್ಷಕರಾದ ಇಬ್ರಾಹಿಂ ಅನಂತಕುಮಾರ್ ಮೇಲೆ ಕ್ರಮ ಕೈಗೊಳ್ಳುವುದಾಗಿ ತಕ್ಷಣದಿಂದ ಹಾಸ್ಟೆಲ್‌ಗಳಿಗೆ ಡಬಲ್ ಲಾಕ್ ವಿಧಾನ ಜಾರಿಗೊಳಿಸುವುದಾಗಿ, ಶಾಲೆ ಕಟ್ಟಡ ಮಂಜೂರಿಗೆ ಸರ್ಕಾರಕ್ಕೆ ಪರವಾನಗೆ ಕೋರಲಾಗಿದೆ ಎಂದು ಅವರು ಆಶ್ವಾಸನೆ ನೀಡಿದರು.

ಎಸ್.ಎಫ್.ಐ. ಸಹಕಾರ್ಯದರ್ಶಿ ಕಾ॥ ಹೆಚ್. ಪ್ರಕಾಶ್, ಬೇಡಿಕೆಗಳ ಕುರಿತು ಮಾತನಾಡಿದರು. ಬೇಡಿಕೆಗಳ ಬಗ್ಗೆ ನಿರ್ಲಕ್ಷ್ಯ ತೋರಿದರೆ ಜಿಲ್ಲೆಯಾದ್ಯಂತ ವಿಸ್ತರಿಸಿ ತಾಲೋಕು ಕಛೇರಿ ಎದುರು ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಸಿದರು. ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಪರಿಷತ್ ಕಛೇರಿ ಎದುರು ನಡೆದ ಚಳುವಳಿ ಯಶಸ್ವಿಗೊಂಡಿದೆ ಎಂದು ಹೇಳಿದ ರಾಜ್ಯ ಕಾರ್ಯದರ್ಶಿ ಕಾ॥ ಎಸ್.ವೈ. ಗುರುಶಾಂತ್ ರವರು ಹಲವು ಬೇಡಿಕೆಗಳನ್ನು ಪಡೆಯಲು ಸಾಧ್ಯವಾಗಿದೆ ಎಂದರು. ಸರ್ಕಾರದ ಪಂಚಾಯತ್ ಬಿಲ್ ವಿರೋಧಿಸಿದ ಅವರು ರಾಜೀವ್ ಗಾಂಧಿ ರಾಜೀನಾಮೆಗೆ ಒತ್ತಾಯಿಸಿದರು. ಸಹ ಕಾರ್ಯದರ್ಶಿ ಕಾ॥ ಕಾಶಿಂಅಲಿ ಮುಂದಿನ ಹೋರಾಟದ ಸ್ವರೂಪ ವಿವರಿಸಿದರು. ಉಪಾಧ್ಯಕ್ಷ ಶ್ರೀಕಾಂತ್ ಹವಲ್ದಾರ್ ವಂದನಾರ್ಪಣೆ ಮಾಡಿದರು.

ಧಾರವಾಡ

ಆಗಸ್ಟ್ 11ರಂದು ಜಿಲ್ಲೆಯ ವಿವಿದ ತಾಲೋಕುಗಳಿಂದ ಬಂದ 2 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಸ್ಸು, ರೈಲುಗಳ ಮೂಲಕ ಧಾರವಾಡ ನಗರದೆಡೆಗೆ ಧಾವಿಸಿ ಬೃಹತ್ ಮೆರವಣಿಗೆಯೊಂದನ್ನು ನಡೆಸಿದರು. ಜಿಲ್ಲಾ ಪರಿಷತ್ ಕಛೇರಿಗೆ ಮುತ್ತಿಗೆ ಹಾಕಿದ ವಿದ್ಯಾರ್ಥಿಗಳು ತಮ್ಮ 14 ಪ್ರಮುಖ ಬೇಡಿಕೆ ಈಡೇರಿಸಬೇಕೆಂದು ಆಗ್ರಹಿಸಿ ಜಿಲ್ಲಾ ಪರಿಷತ್ ಕಾರ್ಯದರ್ಶಿಯವರಿಗೆ ಮನವಿ ಅರ್ಪಿಸಿದರು.

ಸಾಮ್ರಾಜ್ಯಶಾಹಿಗಳ ಕನಸನ್ನು ಪುಡಿಗುಟ್ಟುತ್ತೇವೆ

"ಸದ್ಯದ ಚಾರಿತ್ರಿಕ ಗಳಿಗೆಯಲ್ಲಿ ನಾವು ಹಿಂದೆಂದಿಗಿಂತಲೂ ಹೆಚ್ಚು ವಾಸ್ತವವಾದಿಗಳಾಗಿರಬೇಕು. ಆದರೆ ನಮ್ಮ ಮನಸ್ಸಿನಲ್ಲಿರುವುದನ್ನು ಹೇಳಬೇಕು. ನಮ್ಮ ಕ್ರಾಂತಿಯ ವಿರುದ್ಧ ಅಷ್ಟೊಂದು ಭ್ರಮೆಗಳನ್ನು ಇಟ್ಟುಕೊಳ್ಳಬೇಡಿ ಎಂದು ಸಾಮ್ರಾಜ್ಯಶಾಹಿಗೆ ಎಚ್ಚರಿಸಬೇಕು. ಆಕಸ್ಮಾತ್ ಸಮಾಜವಾದೀ ಸಮುದಾಯ ಕುಸಿದುಬಿದ್ದರೆ ನಮ್ಮ ಪ್ರತಿರೋಧದ ಶಕ್ತಿಯೂ ಉಳಿಯುವುದಿಲ್ಲ ಎಂಬ ಭ್ರಮೆ ಬೇಡ ಎಂದು ಎಚ್ಚರಿಸಬೇಕು" ಕ್ಯೂಬಾದ ಸುಪ್ರಸಿದ್ಧ ಮುಂದಾಳು ಫಿಡೆಲ್ ಕಾಸ್ಟ್ರೋ ಸಮಾಜವಾದಿ ಬಣದಲ್ಲಿನ ಬೆಳವಣಿಗೆಗಳಿಂದ, ವಿಶೇಷವಾಗಿ ಪೋಲಂಡ್, ಹಂಗೇರಿಯ "ವಿಜಯಯಾತ್ರೆ"ಯ ನಂತರ ರೇಗನ್‌ರನ್ನೂ ಮೀರಿಸುವ ಬುಶ್ ಸರ್ಕಾರದ ಉದ್ಧಟತನದ ಮಾತುಗಳ ಹಿನ್ನೆಲೆಯಲ್ಲಿ ಈ ಎಚ್ಚರಿಕೆ ನೀಡಿದರು. ಅವರು ಕ್ಯೂಬಾ ಕ್ರಾಂತಿಯ ಒಂದು ನಿರ್ಣಾಯಕ ಘಟ್ಟವಾಗಿದ್ದ 1953ರ ಜುಲೈ 26ರಂದು ಮೊಂಕಾಡಾ ಗ್ಯಾರಿಸನ್ ಮೇಲೆ ಕ್ರಾಂತಿಕಾರರ ದಾಳಿಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಮಾತನಾಡುತ್ತಿದ್ದರು.

"ವಿಶ್ವ ಕ್ರಾಂತಿಕಾರಿ ಆಂದೋಲನದಲ್ಲಿ, ಸಮಾಜವಾದಿ ಆಂದೋಲನದಲ್ಲಿ ತೊಂದರೆಗಳಿವೆ. ಇದನ್ನು ನಾವು ಒಪ್ಪಿಕೊಳ್ಳಲೇಬೇಕು. ಇದರಿಂದಾಗಿ ಕಳೆದ 30 ವರ್ಷಗಳಿಂದ ಚಾಚೂ ತಪ್ಪದೆ, ಸಮಯಕ್ಕೆ ಸರಿಯಾಗಿ ಸಮಾಜವಾದಿ ಬಣದಿಂದ ಬರುತ್ತಿದ್ದ ಪೂರೈಕೆ ಮುಂದೆ ಅಷ್ಟೇ ಭದ್ರತೆ ಮತ್ತು ಕ್ಷಿಪ್ರತೆಯಿಂದ ಬರಲಿಕ್ಕಿಲ್ಲ. ಆದರೆ ಇದಕ್ಕಿಂತಲೂ ದೊಡ್ಡ ಸಮಸ್ಯೆಯೆಂದರೆ ಸಾಮ್ರಾಜ್ಯಶಾಹಿಗಳು ಆನಂದ ತುಂದಿಲರಾಗಿರುವುದು. ಸಾಮ್ರಾಜ್ಯಶಾಹಿ ಸರಕಾರ ಅತ್ಯಂತ ಆತ್ಮವಿಶ್ವಾಸದಿಂದ ಕುಣಿದಾಡುತ್ತಿದೆ. ಸಮಾಜವಾದೀ ಸಮಾಜವಾದ ಅವನತಿ ಹೊಂದುತ್ತಿದೆ ಎಂದು ಬುಶ್ ಆಡಳಿತದ ಭಾಷಣಗಳು ಸಾರುತ್ತಿವೆ. ಸಮಾಜವಾದಿ ಆಂದೋಲನದ ಸೃಷ್ಟಿಕರ್ತರು ಬಂಡವಾಳಶಾಹಿಗೆ ಯಾವ ಸ್ಥಾನವನ್ನು ಕಾದಿರಿಸಿದ್ದರೋ ಆ ಇತಿಹಾಸದ ಕಸದ ಬುಟ್ಟಿಗೆ ಸಮಾಜವಾದ ಎಸೆಯಲ್ಪಡುತ್ತದೆ ಎಂದು ಬುಶ್ ಆಡಳಿತ ಭಾವಿಸುತ್ತಿದೆ. ಬುಶ್ ಪೋಲಂಡ್, ಹಂಗೇರಿಗೆ ಸುಮ್ಮನೆ ಹೋಗಲಿಲ್ಲ. ಅಲ್ಲಿ ಬೆಳೆಯುತ್ತಿರುವ ಬಂಡವಾಳಶಾಹೀ ಪ್ರವೃತ್ತಿಗಳಿಗೆ, ಅಲ್ಲಿ ಮೂಡಿರುವ ರಾಜಕೀಯ ಸಮಸ್ಯೆಗಳಿಗೆ ಉತ್ತೇಜನೆ ನೀಡಲು ಆತ ಅಲ್ಲಿಗೆ ಹೋಗಿದ್ದರು.

ಈ ದೇಶಗಳಲ್ಲಿ ಇಂತಹ ಸಮಸ್ಯೆಗಳು ಏಕೆ ಬಂದವು? ಒಂದು ದಿನ ಇದರ ವಿಶ್ಲೇಷಣೆಯನ್ನು ಇತಿಹಾಸಕಾರರು ಮಾಡುತ್ತಾರೆ ಎಂದ ಕಾಸ್ಟ್ರೋರವರು "ನಾವೀಗ ಸಮಾಜವಾದದಿಂದ ಬಂಡವಾಳಶಾಹಿಗೆ ಶಾಂತಿಯುತ ಪರಿವರ್ತನೆ ಕಾಣುತ್ತಿದ್ದೇವೆಯೇ? ಇರಬಹುದು. ನಾವದನ್ನು ವಿರೋಧಿಸುವುದಿಲ್ಲ. ಪ್ರತಿಯೊಂದು ದೇಶದ, ಪ್ರತಿಯೊಂದು ಪಕ್ಷದ ಸ್ವಾತಂತ್ರ್ಯದ ಪವಿತ್ರ ಹಕ್ಕನ್ನು ನಾವು ರಕ್ಷಿಸುತ್ತೇವೆ. ವಿಶ್ವದ ಲ್ಯಾಟಿನ್ ಅಮೆರಿಕಾದ ಮೂರನೇ ಜಗತ್ತಿನ ಜನಗಳ ಪರವಾಗಿ ನಾವು ಈ ಹಕ್ಕನ್ನೇ ಕೇಳುತ್ತಿದ್ದೇವೆ. ಯಾವುದೇ ದೇಶ ಸಮಾಜವಾದ ರಚಿಸಬಯಸಿದರೆ ಅದಕ್ಕೆ ಆ ಹಕ್ಕು ಇರಬೇಕು. ಆದರೆ ಇದನ್ನು ಅದೇ ಅಮೆರಿಕಾ ಶಸ್ತ್ರಾಸ್ತ್ರ ಬಳಸಿ [illegible]ಸುತ್ತದೆ" ಎಂದು ಬಂಡವಾಳಶಾಹಿಗ[illegible]ೋಸುಂಬಿತನವನ್ನು ವಿವರಿಸಿದರು. "ನಮಗೆ ಈ ಹಕ್ಕನ್ನು ಯಾರೂ ಕೊಡಲಿಲ್ಲ. ನಾವೇ ಅದನ್ನು ಗೆದ್ದೆವು. ನಾವೇ ಅದನ್ನು ರಕ್ಷಿಸಿಕೊಳ್ಳುತ್ತೇವೆ. ಎಂದು ಘೋಷಿಸಿದರು.

ಕೆಲವು ಸಮಾಜವಾದಿ ದೇಶಗಳ ಸಮಸ್ಯೆಗಳ ಬಗ್ಗೆ ಚಿಂತನೆ ಮಾಡುತ್ತಾ ಅವರು "ಕೆಲವೊಮ್ಮೆ ನನಗನಿಸುತ್ತದೆ- ಸಮಾಜವಾದಿ ಪೋಲಂಡ್, ಹಂಗೇರಿಗಳಲ್ಲಿ ಹುಟ್ಟಿದ ಹೊಸ ಪೀಳಿಗೆ ಬಂಡವಾಳಶಾಹಿ ವ್ಯವಸ್ಥೆಯ ಒಂದು ಸಣ್ಣ ಪ್ರವಾಸ ಮಾಡುವುದು ಒಳ್ಳೆಯದೇನೋ. ಆಗ ಆ ವ್ಯವಸ್ಥೆಯ ಸ್ವಾರ್ಥಪರತೆ, ಅಮಾನುಷತೆ, ಲ್ರ್ಯಾಯ[illegible]ದ ಪರಿಚಯ ಅವರಿಗಾಗಲು ಬಹುದೇನೋ" ಎಂದರು. ಇದೊಂದು ನಾಜೂಕು ವಿಷಯವೆಂಬುದನ್ನು ಜತೆಗೇ ಅವರು ಹೇಳಿದರು.

ಬುಶ್‌ರ ಇತ್ತೀಚಿನ ಪೋಲಂಡ್ ಭೇಟಿಯ ಕಾಲದಲ್ಲಿ ಕಂಡುಬಂದಿತೆಂದು ವರದಿಯಾದ ಘೋಷಣಾ ಫಲಕಗಳ ಬಗ್ಗೆ ಮಾತನಾಡುತ್ತಾ ಒಂದು ನಿರ್ದಿಷ್ಟ ಘೋಷಣೆಯ ಬಗ್ಗೆ ತೀವ್ರ ಬೇಸರ ವ್ಯಕ್ತಪಡಿಸಿದರು. "ಲೆನಿನ್, ಯಾರುಝೆಲ್ಸ್ಕಿ ಕೊಲೆಗಾರರು" ಎಂಬ ಫಲಕದ ಬಗ್ಗೆ ಮಾತನಾಡುತ್ತಾ ಯಾರುಝೆಲ್ಸ್ಕಿಯ ಸಮರ್ಥನೆ ತಾನು ಮಾಡಬೇಕಿಲ್ಲ, ಅದನ್ನು ಅವರೇ ಮಾಡಿಕೊಳ್ಳುತ್ತಾರೆ ಎಂದು ಮುಂದುವರಿದು "ಸೋವಿಯೆತ್ ಒಕ್ಕೂಟ ಆಗಾಗ ಮಾಡಿದ ತಪ್ಪುಗಳೇನೇ ಇರಲಿ. ಪೋಲಂಡನ್ನು ಫ್ಯಾಸಿಸಂನಿಂದ ವಿಮೋಚನೆಗೊಳಿಸಲು ಪೋಲಂಡ್‌ನ ಸೈನಿಕರ ಹೆಗಲಿಗೆ ಹೆಗಲು ನೀಡಿ ಹೋರಾಡುತ್ತಾ 5 ಲಕ್ಷ ಸೋವಿಯತ್ ಸೈನಿಕರು ಪ್ರಾಣತ್ಯಾಗ ಮಾಡಿದರು ಎಂಬ ಸಂಗತಿಯನ್ನಷ್ಟೆ ಹೇಳುತ್ತಿದ್ದೇನೆ. ಇಂತಹ ದೇಶದ, ಮೊದಲ ಸಮಾಜವಾದೀ ಪ್ರಭುತ್ವದ ಸ್ಥಾಪಕ ಲೆನಿನ್‌ರನ್ನು ಕೊಲೆಗಾರ ಎನ್ನುವುದು ಎಷ್ಟೊಂದು ಅಸಹ್ಯ" ಎಂದು ಅತ್ಯಂತ ಬೇಸರದಿಂದ ನುಡಿದರು.

ಅದೇನೇ ಇರಲಿ. ಇದು ಬುಶ್‌ರನ್ನು ಆನಂದ ಪರವಶರನ್ನಾಗಿಸಿದೆ ಎಂಬುದು ಸ್ಪಷ್ಟ. ಇದು ಕ್ಯೂಬಾದ ವಿರುದ್ಧ ಅವರ ವೈರತ್ವವನ್ನು ಮತ್ತಷ್ಟು ಹೆಚ್ಚಿಸಿದೆ. ಸಮಾಜವಾದಿ ಸಮುದಾಯ ವಿಘಟನೆ ಹೊಂದುತ್ತಿದೆ ಎಂಬ ಪರಿಕಲ್ಪನೆಯ ಬುಶ್ ಕ್ಯೂಬಾದ ಬಗ್ಗೆ ತಮ್ಮ ನಿಲುವು ಏಕೆ ಬದಲಿಸುತ್ತಾರೆ ಎಂದು ಪ್ರಶ್ನಿಸಿದ ಕಾಮ್ರೇಡ್ ಕಾಸ್ಟ್ರೊ ಬುಶ್‌ರದ್ದು ದೊಡ್ಡ ಶಕ್ತಿಗಳ ಬಗ್ಗೆ ಶಾಂತಿಯ ಧೋರಣೆ, ಸಣ್ಣ ಪ್ರಗತಿಪರ ದೇಶಗಳತ್ತ ಯುದ್ಧದ ಧೋರಣೆ ಎಂದರು.

> **ಬುಶ್ ಆನಂದ ಪರವಶರಾಗಿದ್ದಾರೆ. ಸಾಮ್ರಾಜ್ಯಶಾಹಿಗಳು ಸಾವಿರ ವರ್ಷಗಳ ಆಳ್ವಿಕೆಯ ಸಿಹಿ ಕನಸು ಕಾಣುತ್ತಿದ್ದಾರೆ. ಹಿಟ್ಲರ್ ಕೂಡಾ ಇದೇ ಕನಸು ಕಂಡಿದ್ದ.**

ಸಮಾಜವಾದ ವಿಘಟನೆ ಹೊಂದಿದರೆ ಕ್ಯೂಬಾ ಕ್ರಾಂತಿ ಎಲ್ಲಿರುತ್ತದೆ ಎಂಬುದು ಬುಶ್ ಯೋಜನೆಯೆಂದ ಕಾಸ್ಟ್ರೋ ಆಕಸ್ಮಾತ್ ಸಮಾಜವಾದೀ ಸಮುದಾಯ ಮಾಯವಾದರೆ ವಿಶ್ವದ ಪರಿಸ್ಥಿತಿ ಹೇಗಿರಬಹುದು ಎಂದು ವರ್ಣಿಸಿದರು- ಸಾಮ್ರಾಜ್ಯಶಾಹಿ ಶಕ್ತಿಗಳು ಮೂರನೇ ಜಗತ್ತಿನ ದೇಶಗಳ ಮೇಲೆ ಕಾಡು ಬೆಕ್ಕುಗಳಂತೆ ಮುಗಿಬೀಳುತ್ತಾರೆ. ವಿಶ್ವದ ತೈಲ, ಅನಿಲ, ಸ್ವಾಭಾವಿಕ ಸಂಪನ್ಮೂಲಗಳನ್ನು, ಕೋಟಿಗಟ್ಟಲೆ ಶ್ರಮಜೀವಿಗಳನ್ನು ತಮ್ಮೊಳಗೆ ವಿಭಜಿಸಿಕೊಂಡು ವಿಶ್ವದ ಜನಗಳನ್ನು ಮತ್ತೆ ವಸಾಹತುಶಾಹಿಯ ಪಂಜುಗಳಲ್ಲಿ ಸಿಲುಕಿಸುತ್ತಾರೆ.

ಆದರೆ ವಿಶ್ವದ ಪ್ರಗತಿಪರ ಶಕ್ತಿಗಳ ಹೋರಾಟ ಎಂದೂ ಈ ರೀತಿ ಕೊನೆಗಾಣದು, ನಮ್ಮ ಜನಗಳು ಎಂದೂ ಇದನ್ನು ಒಪ್ಪರು ಎಂದು ಅತ್ಯಂತ ಭರವಸೆಯಿಂದ ನುಡಿದ ಕಾಸ್ಟ್ರೋ ಸೋವಿಯತ್ ಒಕ್ಕೂಟದ ಸಮಸ್ಯೆಗಳನ್ನು ನೋಡಿ ಸಾಮ್ರಾಜ್ಯಶಾಹಿ ತನ್ನನ್ನು ತಾನೇ ವಂಚಿಸಿಕೊಳ್ಳುತ್ತಿದೆ ಎಂದರು. "ಸೋವಿಯೆತ್ ಒಕ್ಕೂಟ ತನ್ನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತದೆ ಎಂಬ ಹಾರ್ದಿಕ ಆಕಾಂಕ್ಷೆ ನಮ್ಮದು. ಅವರ ಸಮಸ್ಯೆಗಳ ಬಗ್ಗೆ ಮೂರನೇ ಜಗತ್ತಿನ ದೇಶಗಳ, ಮಾಜಿ ವಸಾಹತುಗಳ ಜನರಿಗೆ ಬಹಳ ಆತಂಕವಿದೆ. ಯಾಕೆಂದರೆ ಸೋವಿಯೆತ್ ಒಕ್ಕೂಟ ಈ ದೇಶಗಳ ಮೂಲಭೂತ ಮತ್ತು ಅತ್ಯಂತ ದೃಢ ಗೆಳೆಯನಾಗಿತ್ತು. ಈ ದೇಶಗಳು ಮತ್ತೆ ವಸಾಹತುಗಳಾಗಲು ಬಯಸುವುದಿಲ್ಲ" ಎಂದರು.

ಸಮಾಜವಾದಿ ದೇಶಗಳ ಸಮಸ್ಯೆಗಳನ್ನು ಕಾಣುತ್ತಿರುವ ಸಾಮ್ರಾಜ್ಯಶಾಹಿಗಳು ಒಂದು ಸಾವಿರ ವರ್ಷಗಳ ಸಾಮ್ರಾಜ್ಯದ ಕನಸು ಕಾಣುತ್ತಿದ್ದಾರೆ ಎಂದು ಮುಂದುವರಿದು ಹೇಳಿದ ಕಾಸ್ಟ್ರೋ ಹಿಟ್ಲರ್ ಕೂಡಾ ಇಂತಹ ಕನಸು ಕಂಡಿದ್ದ ಎಂದು ನೆನಪಿಸಿದರು. ಆತನ ಈ ಕನಸು ಕೆಲವೇ ತಿಂಗಳುಗಳಷ್ಟೇ ಉಳಿದಂತೆ, ಸಾಮ್ರಾಜ್ಯಶಾಹಿಗಳ ಈ ಹೊಸ ಕನಸು ಕೂಡಾ ಅಷ್ಟೇ ಅಲ್ಪಕಾಲಿಕ ಎಂದು ಅತ್ಯಂತ ಭರವಸೆಯಿಂದ ನುಡಿದರು.

"ನಮ್ಮ ಜನತೆಯ ಸ್ವಾತಂತ್ರ್ಯ ಸದಾ ನಮ್ಮನ್ನೇ ಅವಲಂಬಿಸಿದೆ. ಸೋವಿಯೆತ್ ಒಕ್ಕೂಟದ ಅಥವಾ ಬೇರೆ ಯಾವುದೇ ದೇಶದ ನ್ಯೂಕ್ಲಿಯರ್ ಕ್ಷಿಪಣಿಗಳನ್ನು ಅವಲಂಬಿಸಿಲ್ಲ.... ನನ್ನ ಜನಗಳ ಮೇಲಿರುವಂತೆ ವಿಶ್ವದ ಜನಗಳ ಮೇಲೆ ನನಗೆ ನಂಬಿಕೆಯಿದೆ. ಈ ಜನಗಳು ಏನು ಮಾಡಲು ಸಮರ್ಥರು. ಎಂಬ 'ನಂಬಿಕೆ ನನಗಿದೆ".

ದೇಶ ವಿದೇಶ

ಈಗಿನ ಚಾರಿತ್ರಿಕ ಗಳಿಗೆಯಲ್ಲಿ ನೀವು ಶಾಂತಚಿತ್ತದಿಂದ ಯೋಚಿಸಬೇಕು. ನಾವು ಮುನ್ನಡೆಯನ್ನು ನಿಧಾನಗೊಳಿಸುತ್ತೇವೆಯೇ? ಎಂದೂ ಇಲ್ಲ! ನಮ್ಮ ಅಗಾಧ ಪ್ರಯತ್ನ ಬಿಡುತ್ತೇವೆಯೇ? ಎಂದೂ ಇಲ್ಲ! ವಾಸ್ತವತೆಗೆ ಕುರುಡಾಗುತ್ತೇವೆಯೇ? ಎಂದೂ ಇಲ್ಲ! ವಾಸ್ತವತೆ ಕಂಡು ಉಷ್ಟ್ರಪಕ್ಷಿಯಂತೆ ಮರಳಿನಲ್ಲಿ ತಲೆ ಹುದುಗಿಸಿಕೊಳ್ಳುತ್ತೇವೆಯೇ? ಎಂದೂ ಇಲ್ಲ! - ಮೂರನೇ ಜಗತ್ತಿನ ದುಡಿಯುವ ಜನ ಸಮೂಹಗಳ ಭಾವನೆಗಳಿಗೆ ದನಿ ನೀಡಿದ ಕಾಸ್ಟ್ರೋ ತಮ್ಮ ಭಾಷಣದ ಕೊನೆಯಲ್ಲಿ "ಕ್ಯೂಬಾ ಮತ್ತು ಕ್ಯೂಬಾ ಕ್ರಾಂತಿ ಪ್ರತಿರೋಧಿಸುತ್ತದೆ. ಅತ್ಯಂತ ಶಾಂತಚಿತ್ತದಿಂದ, ತಣ್ಣನೆಯ ಮನಸ್ಸಿನಿಂದ ಗಂಭೀರವಾಗಿ ನಾನಿದನ್ನು ಹೇಳುತ್ತಿದ್ದೇನೆ. ಇದೀಗ ಸಾಮ್ರಾಜ್ಯಶಾಹಿಗಳಿಗೆ, ಸಮಸ್ತ ಜಗತ್ತಿಗೆ ಸ್ಪಷ್ಟವಾಗಿ ಹೇಳಬೇಕಾದ ಸಮಯ. ನಾವು ತಮಾಷೆಯೇನೂ ಮಾಡುತ್ತಿಲ್ಲ" ಎಂದು ಘೋಷಿಸಿದರು.

"ಟಿಬೆಟ್ ಕುರಿತ ಸಮಾವೇಶ" ಭಾರತ-ಚೀಣಾ ಸಂಬಂಧಗಳಿಗೆ ಕುಂದು ತರುವ ಪ್ರಯತ್ನ

ಟಿಬೆಟ್‌ನಲ್ಲಿ ಮಾನವ ಹಕ್ಕುಗಳ ನೆವ ಬಳಸಿ ಚೀಣಾ ವಿರೋಧಿ ರಂಗ ಮಾಡಲು ಪ್ರಯತ್ನಿಸಿದ "ಟಿಬೆಟ್ ಕುರಿತ ಅಂತರ್ರಾಷ್ಟ್ರೀಯ ಸಮಾವೇಶ" ನಮ್ಮೆರಡು ಬೃಹತ್ ನೆರೆದೇಶಗಳ ನಡುವೆ ಬೆಳೆಯುತ್ತಿರುವ ಮಿತ್ರತ್ವವನ್ನು ಛಿದ್ರಗೊಳಿಸುವ ಪ್ರಯತ್ನ ಎಂದು ಸಿ.ಪಿ.ಐ. (ಎಂ) ಪಾಲಿಟ್ ಬ್ಯೂರೋ ಖಂಡಿಸಿದೆ. ಸಮಾವೇಶದ ಉದ್ದೇಶ, ಅದಕ್ಕಾಗಿ ನೆರೆದಿದ್ದ ಅಂತರಾಷ್ಟ್ರೀಯ ಬೆಂಬಲ ಇಂತಹ ಶಕ್ತಿಗಳು ಇವೆ ಎಂಬುದನ್ನು ಸ್ಪಷ್ಟಗೊಳಿಸುತ್ತದೆ. ಟಿಬೆಟ್‌ನ "ಸ್ವಾತಂತ್ರ್ಯ"ದ ಕರೆ ನೀಡುವ ಭಾಷಣಗಳು ವಿಶ್ವ ಪ್ರತಿಗಾಮಿಗಳು ಮತ್ತು ಸಾಮ್ರಾಜ್ಯಶಾಹಿಗಳಿಗೆ ನೆರವಾಗುವ ಪಿತೂರಿ ಹೊಂದಿವೆ ಎಂದು ಪಾಲಿಟ್‌ಬ್ಯೂರೋ ಅಭಿಪ್ರಾಯ ಪಟ್ಟಿದೆ.

ಟಿಬೆಟ್ ಚೀಣಾದ ಅವಿಭಾಜ್ಯ ಅಂಗ. ಈ ಪ್ರದೇಶದ ಯಾವುದೇ ಸಮಸ್ಯೆ ಚೀಣಾ ಮತ್ತು ಜನತಾ ಗಣತಂತ್ರದ ಚೌಕಟ್ಟಿನಲ್ಲಿ ಪರಿಹಾರಗೊಳ್ಳಬೇಕು ಎಂದು ಸದಾ ಸಿ.ಪಿ.ಐ.(ಎಂ) ನಿಲುವು. ಬಿ.ಜೆ.ಪಿ. ಬಿಟ್ಟು ಮತ್ತಿತರ "ಪ್ರಮುಖ ರಾಷ್ಟ್ರೀಯ ರಾಜಕೀಯ ಪಕ್ಷಗಳು ಈ ಚಿತಾವಣೆಯ ಪ್ರಯತ್ನದಿಂದ ತಮ್ಮನ್ನು ದೂರಗೊಳಿಸಿಕೊಂಡಿವೆ. ಜಾರ್ಜ್‌ಫರ್ನಾಂಡಿಸ್ ಮತ್ತಿತರ ಸಮಾವೇಶದ ಸಂಘಟಕರಿಂದ ತಮ್ಮ ಪಕ್ಷವನ್ನು ಜನತಾದಳದ ಅಧ್ಯಕ್ಷ ಶ್ರೀ ವಿ.ಪಿ.ಸಿಂಗ್ ಪ್ರತ್ಯೇಕಿಸಿಕೊಂಡಿರುವುದು ಸಂತಸದ ಸಂಗತಿ ಎಂದಿರುವ ಪಾಲಿಟ್‌ಬ್ಯೂರೋ ಭಾರತ-ಚೀಣಾ ಸಂಬಂಧಗಳಿಗೆ ಅಡ್ಡಿತರುವ ಎಲ್ಲಾ ಪ್ರಯತ್ನಗಳನ್ನೂ ವಿಫಲಗೊಳಿಸಬೇಕೆಂದು ಎಲ್ಲಾ ವಿಭಾಗಗಳಿಗೆ ಕರೆ ನೀಡಿದೆ. ಯಾಕೆಂದರೆ ನಮ್ಮೆರಡು ದೇಶಗಳ ಉತ್ತಮ ಸಂಬಂಧ ಏಷ್ಯಾ ಮತ್ತು ವಿಶ್ವದಲ್ಲಿ ಶಾಂತಿಯ ಧ್ಯೇಯಕ್ಕೆ ಪೂರಕವಾದದ್ದು ಎಂದು ಅದು ಹೇಳಿದೆ.

ಜಮ್ಮು ಕಾಶ್ಮೀರ ಪತ್ರಿಕಾ ಮಸೂದೆಗೆ ವಿರೋಧ

ಜಮ್ಮು ಕಾಶ್ಮೀರ ವಿಧಾನ ಸಭೆ ಪಾಸು ಮಾಡಿದ ಜಮ್ಮು-ಕಾಶ್ಮೀರ ವಿಶೇಷ ಅಧಿಕಾರಗಳ (ಪತ್ರಿಕಾ) ಮಸೂದೆ ಪತ್ರಿಕಾ ಸ್ವಾತಂತ್ರ್ಯವನ್ನು ಗಂಭೀರವಾಗಿ ಸವಕಲುಗೊಳಿಸಲು ಪೂರ್ಣ ಸೆನ್ಸಾರ್‌ಶಿಪ್ ಕ್ರಮವೆಂದು ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ವಿರೋಧಿಸಿದೆ.

ಪ್ರತ್ಯೇಕತಾವಾದಿಗಳು, ದೇಶ-ವಿರೋಧಿ ಶಕ್ತಿಗಳಿಂದ ರಾಜ್ಯ ಗಂಭೀರ ಪರಿಸ್ಥಿತಿ ಎದುರಿಸಬೇಕಾಗಿದೆ ನಿಜ. ಆದರೆ ಈ ಮಸೂದೆ ಅದಕ್ಕೆ ಸರಿಯಾದ ದಾರಿಯಲ್ಲ, ಇದು ತದ್ವಿರುದ್ಧ ಫಲ ನೀಡಬಹುದು. ಇದರ ದುರುಪಯೋಗ ಕೂಡಾ ಖಂಡಿತ ಎಂದಿರುವ ಪಾಲಿಟ್ ಬ್ಯೂರೋ ಈ ಶಕ್ತಿಗಳ ವಿರುದ್ಧ ಜನರನ್ನು ರಾಜಕೀಯವಾಗಿ ಅಣಿನೆರೆಸುವಲ್ಲಿ, ನ್ಯಾಷನಲ್ ಕಾನ್ಫರೆನ್ಸ್-ಕಾಂಗ್ರೆಸ್ (ಐ) ಸರಕಾರ ವಿಫಲತೆಗೊಂಡಿದೆ ಎಂಬ ಸಂಗತಿಯತ್ತ ಗಮನ ಸೆಳೆಯುತ್ತಾ ಜಮ್ಮು-ಕಾಶ್ಮೀರ ಸರ್ಕಾರ ತನ್ನ ನಿರ್ಣಯದ ಮರು ಪರಿಶೀಲನೆ ನಡೆಸಬೇಕು. ರಾಜ್ಯದ ಜನತೆಯನ್ನು ಅಣಿನೆರೆಸಿ ರಾಷ್ಟ್ರೀಯ ಐಕ್ಯತೆಗೆ ಗಂಭೀರ ಸವಾಲಿನ ಪ್ರಶ್ನೆ ಎದುರಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕೆಂದು ಸಲಹೆ ನೀಡಿದೆ.

ಕಾಂತಿ ಬಿಸ್ವಾಸ್ ಮೇಲೆ ಹಲ್ಲೆ

ಪಶ್ಚಿಮ ಬಂಗಾಳದಲ್ಲಿ ಹಿಂಸಾಚಾರ, ಕಾನೂನುಹೀನತೆ ಉಂಟುಮಾಡಲು ಕಳೆದೆರಡು ತಿಂಗಳಿಂದ ಕಾಂಗ್ರೆಸ್(ಐ) ತೀವ್ರವಾಗಿ ನಡೆಸುತ್ತಿರುವ ಪ್ರಯತ್ನದ ಒಂದು ಅಂಗವಾಗಿ ಆಗಸ್ಟ್ 29ರ ಸಂಜೆ 24 ಪರಗಣಾ ಜಿಲ್ಲೆಯ ಹಾಬ್ರಾದಲ್ಲಿ, ಎಡರಂಗ ಸರಕಾರದ, ಪ್ರಾಥಮಿಕ-ಮಾಧ್ಯಮಿಕ ಶಿಕ್ಷಣ ಮಂತ್ರಿ ಕಾಂತಿ ಬಿಸ್ವಾಸ್‌ರಿಗೆ ಪ್ರಾಣಾಪಾಯ ಮಾಡುವ ಉದ್ದೇಶದಿಂದ ಕಾಂಗ್ರೆ ಗೂಂಡಾಗಳು ತೀವ್ರ ಹಲ್ಲೆ ನಡೆಸಿದರು. ಅವರ ಕೈ, ಭುಜ, ತಲೆಯ ಮೇಲೆ ತೀವ್ರ ಏಟು ಬಿದ್ದಿದೆ. ಈ ಸಂಬಂಧವಾಗಿ ಹನ್ನೊಂದು ಕಾಂಗ್ರೆ ಮಂದಿಯನ್ನು ಬಂಧಿಸಲಾಗಿದೆ. ಈ ದುಷ್ಟ ಹಲ್ಲೆಯ ವಿರುದ್ಧ ಜಿಲ್ಲೆಯಲ್ಲಿ, ಪ್ರತಿಭಟನಾ ಸಭೆ, ಮೆರವಣಿಗೆಗಳು ನಡೆದವು.

ಪಂಚಾಯತ್ ಮಸೂದೆಗೆ ಸೋವಿಯೆತ್ ಉಪಾಧ್ಯಕ್ಷರ ಹೊಗಳಿಕೆ

ಅನುಚಿತ ಉತ್ಸಾಹ ಪ್ರದರ್ಶನ

ಪಂಚಾಯತ್ ರಾಜ್ಯ ಮಸೂದೆ ಬುಡಮಟ್ಟದಲ್ಲಿ ಬದಲಾವಣೆ ತರುವ ಮಸೂದೆ. ಅದನ್ನು ನಮ್ಮ ದೇಶದಲ್ಲಿ ಸರಿಯಾಗಿ ಅರ್ಥಮಾಡಿಕೊಂಡಿರುವವರು ಕಡಿಮೆ ಎಂಬ ಸೋವಿಯೆತ್ ಒಕ್ಕೂಟದ ಸುಪ್ರೀಂ ಸೋವಿಯೆತ್‌ನ ಉಪಾಧ್ಯಕ್ಷೆ ಶ್ರೀಮತಿ ವೆಲೆಂಟಿನಾ ಶೆವ್‌ಚೆಂಕೋರ ಹೇಳಿಕೆ. ಈ ಮಸೂದೆಯ ಹಿಂದೆ ಯಾವ ರಾಜಕೀಯ ದುರುದ್ದೇಶವೂ ಇಲ್ಲ, ಎಂದು ಆಕೆ ನೀಡಿರುವ ಪ್ರಮಾಣ ಪತ್ರ ಅನುಚಿತ ಉತ್ಸಾಹ ಪ್ರದರ್ಶಿಸಿದೆ ಎಂದು ಸಿ.ಪಿ.ಐ(ಎಂ) ಪ್ರತಿಕ್ರಿಯೆ ವ್ಯಕ್ತಪಡಿಸಿದೆ. ಹತ್ತು ದಿನಗಳ ಭೇಟಿ ಹಾಗೂ ರಾಜೀವ ಗಾಂಧಿಯವರೊಡನೆ ಒಂದು ಸಂದರ್ಶನದ ಆಧಾರದ ಮೇಲೆ ಆಕೆ ಈ ಆಳವಾದ ತೀರ್ಮಾನಕ್ಕೆ ಬಂದಿರುವುದು ವಿಸ್ಮಯಕಾರಿ. ದೇಶದ ಪ್ರಜಾಪ್ರಭುತ್ವ ಶಕ್ತಿಗಳು ಈ ಮಸೂದೆಯ ವಿರುದ್ಧ ತೀವ್ರ ಹೋರಾಟ ನಡೆಸುತ್ತಾ ರಾಜ್ಯಸಭೆಯಲ್ಲಿ ಅದನ್ನು ಸೋಲಿಸಿದ ಬಳಿ[illegible]ವಲ್ಲಿ, ಈಗಷ್ಟೇ ಯಶಸ್ವಿ ಯಾಗಿರುವಾಗ ಸೋವಿಯೆತ್ ಉಪಾಧ್ಯಕ್ಷೆ ಈ ತೀರ್ಮಾನಕ್ಕೆ ಬಂದಿದ್ದಾರೆ. ಸಮಾಜವಾದಿ ಸೋವಿಯೆತ್ ಒಕ್ಕೂಟದಲ್ಲಿ ನಡೆಯುತ್ತಿರುವ ಸುಧಾರಣೆಗಳನ್ನು ಪಂಚಾಯತ್ ಮಸೂದೆಯೊಂದಿಗೆ . ಹೋಲಿಸುವುದು ಭಾರತದ ಕ್ಲಿಷ್ಟ ರಾಜಕೀಯ ವಾಸ್ತವಿಕತೆಯ ಬಗ್ಗೆ ಅಜ್ಞಾನದ ಪ್ರದರ್ಶನವಷ್ಟೆ ಎಂದು ಆಗಸ್ಟ್ 25 ರಂದು ಹೊರಡಿಸಿದ ಸಿ.ಪಿ.ಐ.(ಎಂ) ಹೇಳಿಕೆ ತಿಳಿಸಿದೆ. ಇದು ದೇಶದ ಎಡಶಕ್ತಿ ಪ್ರಜಾಪ್ರಭುತ್ವ ಶಕ್ತಿಗಳ ನಿಲುವಿಗೆ ವಿರುದ್ಧವಾಗಿದೆ.

ಮತ್ತೊಮ್ಮೆ ಪ್ರಮುಖ ಸೋವಿಯೆತ್ ವ್ಯಕ್ತಿಯೊಬ್ಬರು ಕಾಂಗ್ರೆಸ್(ಐ)ನ 'ಪ್ರಗತಿಪರ' ಕ್ರಮವನ್ನು ಬೆಂಬಲಿಸಲು ಧಾವಿಸುವ ಪ್ರವೃತ್ತಿ ತೋರಿದ್ದಾರೆ. ಇದು ದುರದೃಷ್ಟಕರ ಮಾತ್ರವಲ್ಲ, ರಾಜೀವ ಸರಕಾರದ [illegible] ಶಕ್ತಿಗಳೂ, [illegible] ಹೋರಾಡುತ್ತಿರುವ ಭಾರತೀಯ ಜನತೆಯ [illegible] ಎಂದು ಭಾವಿಸುವ ಪ್ರವೃತ್ತಿಯನ್ನು ತೋರಿದೆ. ಈ ಭ್ರಮೆ ಎಷ್ಟು ಬೇಗನೆ ಬಿಟ್ಟರೆ ಅಷ್ಟು ಒಳ್ಳೆಯದು ಎಂದು ಸಿ.ಪಿ.ಐ(ಎಂ) ಹೇಳಿಕೆ ತಿಳಿಸಿದೆ.

...ಅಣು ವಿನಾಶದಿಂದ ಸಂರಕ್ಷಿಸಿ!

1ನೇ ಪುಟದಿಂದ

ತಲುಪಿದ್ದು, ಭಾರತವು ಆರನೆಯ ಸ್ಥಾನದಲ್ಲಿದೆ. ಶೇ.23 ರಷ್ಟು ವಿದೇಶಿ ವಿನಿಮಯದ ಹಣ ಸಾಲದ ಕಂತು-ಬಡ್ಡಿ ಪಾವತಿಗೆ ವಿನಿಯೋಗವಾಗುತ್ತಿದ್ದು ದೇಶವು ಸಾಲಜಾಲದೊಳಗೆ ಮುಳುಗುವ ಅಪಾಯ ಸಮೀಪಿಸುತ್ತಿದೆ. ಸಾಮಾಜಿಕ - ಆರ್ಥಿಕ ಪರಿವರ್ತನೆಯು ಶಾಂತಿ ಚಳುವಳಿಯ ಪ್ರಮುಖ ಉದ್ದೇಶವಾಗಿದೆ ಎಂದೂ ಅಸಮಾನತೆ, ಬಡತನ, ಅನಕ್ಷರತೆ, ನಿರುದ್ಯೋಗದ ಬವಣೆಗಳಲ್ಲಿ ಬಳಲುತ್ತಿರುವ ಶೋಷಿತ ಜನತೆಯ ವಿಮೋಚನೆಗಾಗಿ ಶ್ರಮಿಸಲು ರಷೀದುದ್ದೀನ್‌ರವರು ಕರೆ ನೀಡಿದರು.

ಎ.ಐ.ಪಿ.ಎಸ್.ಓ. ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಪೆರಿನ್ ರೊಮೇಶ್ ಚಂದ್ರರವರು ಜನತೆಯ ಜ್ವಲಂತ ಸಮಸ್ಯೆಗಳು ಮತ್ತು ಸ್ಥಳೀಯ ಪರಿಸ್ಥಿತಿಗೆ ಸೂಕ್ತ ರೀತಿಯಲ್ಲಿ ಸ್ಪಂದಿಸುವ ಮೂಲಕ ಶಾಂತಿ ಚಳುವಳಿಯನ್ನು ಜನ ಸಾಮಾನ್ಯರ ನಡುವೆ ಪರಿಣಾಮಕಾರಿಯಾಗಿ ಕೊಂಡೊಯ್ಯಲು ಸಾಧ್ಯವಾಗುವುದೆಂದು ತಿಳಿಸಿದರು. ತೆಲುಗುದೇಶಂನ ಸಂಸತ್ ಸದಸ್ಯ ಪ್ರೊ|| ಲಕ್ಷ್ಮಣ್, ಸಿ.ಪಿ.ಐ. ರಾಜ್ಯ ನಾಯಕ ಶ್ರೀ ಕೃಷ್ಣಪ್ಪ ಹಾಗೂ ಜನತಾದಳ ಮತ್ತು ಎ.ಐ.ಸಿ.ಸಿ.(ಐ) ನಾಯಕರೂ ಸಹ ಸಭೆಯನ್ನುದ್ದೇಶಿಸಿ ಮಾತನಾಡಿದರು.

ರಾಷ್ಟ್ರೀಯ ಮಂಡಳಿ ನಿರ್ಣಯಗಳು:- ಶ್ರೀ ರಷೀದುದ್ದೀನ್ ಖಾನ್‌ರವರು ಅಧ್ಯಕ್ಷತೆಯಲ್ಲಿ ಜರುಗಿದ ಎ.ಐ.ಎಸ್.ಓ. ರಾಷ್ಟ್ರೀಯ ಮಂಡಳಿಯ ವಿಸ್ತೃತ ಸಭೆ ಯಲ್ಲಿ ಪೆರಿನ್ ರೊಮೇಶ್ ಚಂದ್ರರವರು ಪ್ರಧಾನ ಕಾರ್ಯದರ್ಶಿಗಳ ವರದಿಯನ್ನು ಮಂಡಿಸಿದರು. ನಂತರ ರಾಜ್ಯ ಮಂಡಳಿಗಳ ಪ್ರತಿನಿಧಿಗಳು ಕಾರ್ಯಚಟುವಟಿಕೆ ವರದಿಗಳನ್ನು ನೀಡಿದರು. ಒಟ್ಟು 14 ರಾಜ್ಯಗಳಿಂದ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಕರ್ನಾಟಕದಿಂದ ಬೆಂಗಳೂರು, ಗುಲ್ಬರ್ಗಾ ಮತ್ತು ತುಮಕೂರು ಜಿಲ್ಲೆಗಳಿಂದ 11 ಮಂದಿ ಸಂಗಾತಿಗಳು ಭಾಗವಹಿಸಿದ್ದರು. ಸೀತಾರಾಮ್ ಯಾಚುರಿಯವರು ಚರ್ಚೆಯನ್ನು ಸಮಾರೋಪ ಮಾಡಿ ಮಾತನಾಡಿದರು.

ಪರಮಾಣು ನಿಶಸ್ತ್ರೀಕರಣ, ಅಫಘಾನಿಸ್ತಾನದ ಒಪ್ಪಂದದ ಜಾರಿ, ನಿಕಾರಾಗುವಾ, ನಮೀಬಿಯಾ, ಪ್ಯಾಲೆಸ್ತೈನ್, ದಕ್ಷಿಣ ಆಫ್ರಿಕಾ, ಪೊಲಿಸಾರಿಯೋ ಮತ್ತು ಸಹಾರಾವಿ ಹಾಗೂ ಕಾಂಬೋಡಿಯಾ ಸಮಸ್ಯೆಗಳಿಗೆ ಭಾರತದ ಉಪಖಂಡದ ಪರಿಸ್ಥಿತಿಯ ಕುರಿತು ಸಂಬಂಧಿಸಿದಂತೆ ನಿರ್ಣಯಗಳನ್ನು ಅಂಗೀಕರಿಸಲಾಗಿದೆ. 9ನೇ ಅಲಿಪ್ತ ಚಳುವಳಿಯ ಶೃಂಗಸಭೆಗೆ ಶುಭಾಶಯಗಳನ್ನು ತಿಳಿಸಿ ಹಾಗೂ ನೆಹರೂ ಅಂತರಾಷ್ಟ್ರೀಯ ಪ್ರಶಸ್ತಿ ವಿಜೇತ ಯಾಸರ್ ಅರಾಫತ್‌ರವರನ್ನು ಅಭಿನಂಧಿಸಿ ಸಭೆಯು ನಿರ್ಣಯಗಳನ್ನುಕೈಗೊಂಡಿದೆ.

ಮುಂದಿನ ಕಾರ್ಯಕ್ರಮಗಳು:- ಭಾರತದ ಉಪಖಂಡದಲ್ಲಿ ಶಾಂತಿ, ಅಭಿವೃದ್ಧಿ ಮತ್ತು ಸಹಕಾರ ಹಾಗೂ ಭಾರತ ದೇಶದ ಐಕ್ಯತೆ ಮತ್ತು ಸಮಗ್ರತೆಯ ರಕ್ಷಣೆಗಾಗಿ ಅಕ್ಟೋಬರ್ ಮೊದಲ ವಾರದಲ್ಲಿ ಸಪ್ತಾಹ ಆಚರಣೆ, ಅಕ್ಟೋಬರ್ 24-30ರ ವರೆಗೆ ಮೂರನೆಯ ಶಾಂತಿ ಅಲೆಯ ಎರಡನೆಯ ಹಂತದ ಕಾರ್ಯಕ್ರಮ "ವಿದೇಶಿ ಸಾಲ ಮತ್ತು ಅಭಿವೃದ್ಧಿ ಹಾಗೂ ಪರಿಸರ ಮತ್ತು ಅಭಿವೃದ್ಧಿ" ಎಂಬ ವಿಷಯದ ಕುರಿತು ರಾಷ್ಟ್ರಮಟ್ಟದ ವಿಚಾರ ಸಂಕಿರಣ, ನೆಹರೂ ಜನ್ಮ ಶತಾಬ್ಧಿ ಆಚರಣೆ, ಸೌಹಾರ್ದತಾ ಕಾರ್ಯಾಚರಣೆಗಳು, 9ನೇ ಅಲಿಪ್ತ ಶೃಂಗ ಸಭೆಯ ನಿರ್ಣಯಗಳನ್ನು ಜನಪ್ರಿಯಗೊಳಿಸುವುದು, 1988-97 ಸಾಂಸ್ಕೃತಿಕ ಅಭಿವೃದ್ಧಿಗಾಗಿ ವಿಶ್ವ ದಶಮಾನೋತ್ಸವ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 1990ರ ಆದಿ ಭಾಗದಲ್ಲಿ ಎ.ಐ.ಪಿ.ಎಸ್.ಓ ರಾಷ್ಟ್ರ ಸಮ್ಮೇಳನವನ್ನು ನಡೆಸಲು ನಿರ್ಧರಿಸಲಾಗಿದೆ.

ವಿಶ್ವಶಾಂತಿ ದಿನಾಚರಣೆ:

ವಿಶ್ವಶಾಂತಿ ಮಂಡಳಿ ಮತ್ತು ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟದ ಕರೆಯ ಮೇರೆಗೆ ಸೆಪ್ಟೆಂಬರ್ 1ರಂದು ಬೆಂಗಳೂರಿನಲ್ಲಿ ಕರ್ನಾಟಕ ಶಾಂತಿ ಮತ್ತು ಸೌಹಾರ್ದತಾ ಸಂಘಟನೆಯ ಆಶ್ರಯದಲ್ಲಿ ವಿಶ್ವಶಾಂತಿ ದಿನಾಚರಣೆಯನ್ನು ಏರ್ಪಡಿಸಲಾಗಿತ್ತು.

ಪ್ರೊ|| ಎಂ.ಎ. ಸೇತುರಾವ್‌ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜನತಾದಳದ ಮಾಜಿ ಸಂಸತ್ ಸದಸ್ಯ ವಿ.ಎಸ್.ಕೃಷ್ಣಯ್ಯರ್, ಸಿ.ಐ.ಟಿ.ಯು. ಉಪಾಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್, ಎ.ಐ.ಟಿ.ಯು.ಸಿ. ರಾಜ್ಯ ಅಧ್ಯಕ್ಷರಾದ ಎಂ.ಸಿ. ನರಸಿಂಹನ್ ಹಾಗೂ ಭಾರತ್ ಸೋವಿಯತ್ ಸಾಂಸ್ಕೃತಿಕ ಸಂಘದ ಪ್ರಧಾನ ಕಾರ್ಯದರ್ಶಿ ಕಾ||ಜಿ. ರಾಮಕೃಷ್ಣರವರು ಶಾಂತಿ ಚಳುವಳಿಯ ವಿವಿಧ ಮುಖಗಳ ಕುರಿತು ವಿಶ್ಲೇಷಿಸಿ ಉಪನ್ಯಾಸ ನೀಡಿದರು. ಕೆ.ಎಸ್.ಪಿ.ಎಸ್.ಓ. ರಾಜ್ಯಕಾರ್ಯದರ್ಶಿ ಎಸ್.ಆರ್.ಆರಾಧ್ಯ ಪ್ರಾರಂಭದಲ್ಲಿ ಸ್ವಾಗತಿಸಿದರು. ಜಯಪ್ರಕಾಶ್ ವಂದಿಸಿದರು. ಸಮುದಾಯ ತಂಡದ ಲಕ್ಷ್ಮಣ್ ಮತ್ತು ಸಂಗಡಿಗರು ಶಾಂತಿ ಗೀತೆಗಳನ್ನು ಹಾಡಿದರು.

ವರದಿ: ಎಸ್.ಆರ್.ಆರಾಧ್ಯ

ಭೂಮಿಗಾಗಿ ನೀರಿಗಾಗಿ ಬಿಜಾಪುರ ರೈತರ ಹೋರಾಟ

ಜಿಲ್ಲೆಯಲ್ಲಿ ಭೂಮಾಲೀಕರು ಕಾನೂನು ವಂಚಿಸಿ ಹೆಚ್ಚುವರಿ ಭೂಮಿಗಳನ್ನು ಇಟ್ಟುಕೊಂಡಿದ್ದು ಈ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡು ಭೂಹೀನರಿಗೆ ಹಂಚಬೇಕು. ಭೂ ಸುಧಾರಣಾ ಕಾಯ್ದೆಯನ್ನು ತಿದ್ದುಪಡಿ ಮಾಡಬೇಕು. ಮುಳವಾಡ ಯಾತ ನೀರಾವರಿ, ಕೃಷ್ಣಾ ಮೇಲ್ದಂಡೆ, ಹಿಪ್ಪರಗಿ, ಆಲಮಟ್ಟಿ ಆಣೆಕಟ್ಟು 1720 ಪುಟ್ ಎತ್ತರಿಸಬೇಕು ಮುಂತಾದ ಬೇಡಿಕೆ ಮುಂದಿರಿಸಿ ಬಿಜಾಪುರದ ವಿವಿಧ ತಾಲೋಕುಗಳಲ್ಲಿ ರೈತರ ಪ್ರದರ್ಶನ, ಧರಣಿ ಸತ್ಯಾಗ್ರಹ ಜಿಲ್ಲಾ ಕಛೇರಿ ಚಲೋ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಬಿಜಾಪುರ

ಆಗಸ್ಟ್ 10ರಂದು ಪ್ರಾಂತ ರೈತ ಸಂಘ, ಕೃಷಿ ಕೂಲಿಕಾರರ ಸಂಘಗಳು ರೈತ ಸಂಘದ ಕಛೇರಿಯಿಂದ ಮೆರವಣಿಗೆ ಹೊರಟು ವಿವಿಧ ಬೀದಿಗಳಲ್ಲಿ ಹಾಯ್ದು ತಹಸೀಲ್ದಾರ್ ಕಛೇರಿ ತಲುಪಿ ಮನವಿ ಅರ್ಪಿಸಲಾಯಿತು. ನಂತರ ಜಿಲ್ಲಾ ಪರಿಷತ್ ಕಛೇರಿ, ಜಿಲ್ಲಾಧಿಕಾರಿಗಳ ಕಛೇರಿಗೆ ಬಂದು ಮನವಿ ಅರ್ಪಿಸಲಾಯಿತು. ಸರ್ಕಾರಿ ಭೂಮಿ ಸಾಗುವಳಿ ಮಾಡಿರುವ ರೈತರಿಗೆ ಹಕ್ಕುಪತ್ರ ನೀಡಬೇಕು, ಹೆಚ್ಚುವರಿ ಭೂಮಿ ಹಂಚಿಕೆ ಮೇಲೆ ಭೂಮಾಲೀಕರು ತಂದಿರುವ ತಡೆಯಾಜ್ಞೆ ರದ್ದುಗೊಳಿಸಬೇಕು ನೀರಾವರಿ ಯೋಜನೆಗಳನ್ನು ಜಾರಿಗೊಳಿಸಬೇಕೆಂದು ರೈತಸಂಘದ ಜಿಲ್ಲಾ ಅಧ್ಯಕ್ಷ ಕಾಂ: ಭೀಮಸಿ ಕಲಾದಗಿ ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿದರು.

ನಂತರ ನಡೆದ ಸಾರ್ವಜನಿಕ ಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ ಕಾಂ: ಎನ್.ಕೆ. ಉಪಾಧ್ಯಾಯರವರು ಮಾತನಾಡಿ ಕಾಂಗ್ರೆಸ್ ಆಡಳಿತ ದೇಶವನ್ನು ವಿನಾಶದೆಡೆಗೆ ಕರೆದೊಯ್ಯುತ್ತಿದೆ ನಿರುದ್ಯೋಗ ಭೂತಾಕಾರವಾಗಿ ಬೆಳೆದು ನಿಂತಿದೆ. ಈ ಅನ್ಯಾಯಗಳ ವಿರುದ್ಧ ರೈತರು ಹೋರಾಡಬೇಕೆಂದು ಕರೆ ನೀಡಿದರು. ಮಳಸಿದ್ಧ ನಾಯಕೋಡಿ, ರಾಮಣ್ಣನೀ ದೋಣಿ ಹೊನ್ನುಟಗಿ, ಕೊಡಗಿ, ಖಲಾಸಿ, ನದಾಫ್ ಮುಂತಾದವರು ಮೆರವಣಿಗೆ ನೇತೃತ್ವ ವಹಿಸಿದ್ದರು.

ಜಿಲ್ಲಾಧಿಕಾರಿ ಹಾಗೂ ತಹಸೀಲ್ದಾರ್ ಕಛೇರಿ ಎದುರು ಧರಣಿ ಸತ್ಯಾಗ್ರಹ ಮುಂದುವರೆದಿದೆ.

★ ★

ವಿದ್ಯುತ್ ಚಾಲಿತ ಮಗ್ಗಗಳ ನೇಕಾರರ ಅಖಿಲ ಭಾರತ ಸಮಾವೇಶ

ವಿದ್ಯುತ್ ಚಾಲಿತ ಮಗ್ಗಗಳ ನೇಕಾರರ ಅಖಿಲ ಭಾರತ ಸಮ್ಮೇಳನ ಆಗಸ್ಟ್ 11 ಮತ್ತು 12ರಂದು ಮಹಾರಾಷ್ಟ್ರದ ಸೊಲ್ಲಾಪುರದಲ್ಲಿ ಯಶಸ್ವಿಯಾಗಿ ನಡೆಯಿತು. ಭಾರತದ ಕಾರ್ಮಿಕ ಆಂದೋಲನದ ಚರಿತ್ರೆಯಲ್ಲಿ ವಿದ್ಯುತ್ ಚಾಲಿತ ಮಗ್ಗಗಳ ನೇಕಾರರ ಅಖಿಲ ಭಾರತ ಸಮ್ಮೇಳನ ನಡೆಯುತ್ತಿರುವುದು ಇದೇ ಪ್ರಪ್ರಥಮವಾಗಿದೆ.

ಕಾಮ್ರೆಡ್ ಸಪ್ದರ್ ಹಷ್ಮಿ ಸ್ಮಾರಕ ನಗರದಲ್ಲಿ ನಡೆದ ಈ ಸಮ್ಮೇಳನವನ್ನು ಪಶ್ಚಿಮ ಬಂಗಾಲದ ಕಾರ್ಮಿಕ ಮಂತ್ರಿ ಕಾಮ್ರೆಡ್ ಶಾಂತಿ ಘಟಕ್ ಉದ್ಘಾಟಿಸಿದರು. ಅಧ್ಯಕ್ಷೀಯ ಮಂಡಳಿಯ ಕಾ|| ಕೆ.ಎಲ್.ಮಲಬಾದೆ, ಕಾ|| ಎನ್.ಕೆ. ಉಪಾಧ್ಯಾಯ, ಕಾ|| ಗೋಪಾಲ ಬಿಸ್ವಾಸ್, ಕಾ|| ರಾಮದಾಸ್ ಚಡ್ಡಾ, ಕಾ||ಬಾಲು ಪಂಡಾ ಮತ್ತು ಕಾ|| ಬಿ.ವೈ. ವರದನ್ ಸಮ್ಮೇಳನ ಕಾರ್ಯ ಕಲಾಪಗಳನ್ನು ನಡೆಸಿಕೊಟ್ಟರು. ಸಿ.ಐ.ಟಿ.ಯು ಪರವಾಗಿ ಕಾರ್ಯದರ್ಶಿ, ಕಾಮ್ರೆಡ್ ಎಂ.ಕೆ. ಪಂಧೆ ಅವರು ಒಂದು ವರದಿಯನ್ನು ಮಂಡಿಸಿದರು. ವಿದ್ಯುತ್ ಚಾಲಿತ ಮಗ್ಗಗಳ ಕ್ಷೇತ್ರದ ಇಂದಿನ ದುಸ್ಥಿತಿಗೆ ರಾಜೀವಗಾಂಧಿಯವರ ನೂತನ ಜವಳಿ ನೀತಿಯೇ ಕಾರಣ ಎಂಬುದನ್ನು ಅವರು ತಮ್ಮ ತಮ್ಮ ಸ್ಥಳೀಯ ಅನುಭವಗಳನ್ನು ವರದಿ ಮಾಡುತ್ತಾ ಪುಷ್ಟೀಕರಿಸಿದರು. ಚರ್ಚೆಯಲ್ಲಿ ಮೂಡಿಬಂದ ಎರಡು ಮುಖ್ಯ ಅಂಶಗಳೆಂದರೆ, 1) ಎಲ್ಲಾ ಕಾನೂನು ಸೌಲಭ್ಯಗಳಿಂದ ವಂಚಿತರಾಗಿ ಅತೀ ಕಡಿಮೆ ಸಂಬಳಕೊಟ್ಟು ನೇಕಾರ ಕಾರ್ಮಿಕರನ್ನು ಸುಲಿಗೆ ಮಾಡುತ್ತಿರುವುದು ನಿಲ್ಲಬೇಕು. 2) ಕಚ್ಚಾ ನೂಲಿನ ಮತ್ತು ಸಿದ್ಧ ಬಟ್ಟೆಯ ಮಾರುಕಟ್ಟೆಯನ್ನು ನಿಯಂತ್ರಿಸುತ್ತಿರುವ ಮಿಲ್ಸ್ ಮಾಲೀಕರ ಮತ್ತು ವ್ಯಾಪಾರಿಗಳ ಆಟವನ್ನು ನಿಲ್ಲಿಸಿ ವಿದ್ಯುತ್ ಮಗ್ಗಗಳ ಸಣ್ಣ ಮತ್ತು ಮಧ್ಯಮ ಮಾಲೀಕರ ಹಿತರಕ್ಷಣೆ ಮಾಡಬೇಕು.

ಕನಿಷ್ಠ ವೇತನ 1050 ರೂ. ತುಟ್ಟಿಭತ್ಯೆ ಇ.ಎಸ್.ಐ. ಮಹಿಳಾ ಕಾರ್ಮಿಕರಿಗೆ ಸೌಲಭ್ಯ, ಮಿಲ್ ಮಾಲೀಕರನ್ನು ಕಾನೂನುಬದ್ಧ ನಿಯಂತ್ರಣ ಮುಂತಾದ ಠರಾವು ಅಂಗೀಕರಿಸಲಾಗಿದೆ.

ಭ್ರಷ್ಟ ರಾಜೀವ್‌ಗಾಂಧಿ ರಾಜೀನಾಮೆಗೆ ಒತ್ತಾಯ ಮಹಾರಾಷ್ಟ್ರದಲ್ಲಿ ಮಳೆಯಿಂದ ನೊಂದ ಜನರಿಗೆ ಪರಿಹಾರ ಒದಗಿಸಲು ಕರೆ ನೀಡಲಾಯಿತು.

ಸೆಪ್ಟೆಂಬರ್ 14ರಂದು ದೆಹಲಿಯಲ್ಲಿ ನಡೆಯಲಿರುವ ಜವಳಿ ಕಾರ್ಮಿಕರ ಮಹಾ ಮತಪ್ರದರ್ಶನವನ್ನು ಯಶಸ್ವಿಗೊಳಿಸಲು ಪ್ರತಿಯೊಂದು ರಾಜ್ಯದಿಂದ

ಕಾ||ಇ.ಕೆ.ನಾಯ್ನಾರ್‌ರವರು ಮಾತನಾಡಿ ಕೇರಳದಲ್ಲಿ ಕಾರ್ಮಿಕರಿಗೆ ಒದಗಿಸಿರುವ ಸೌಲಭ್ಯ ಕುರಿತು ವಿವರಿಸಿದರು. ಕೇರಳ ಸರ್ಕಾರ ಉರುಳಿಸಲು ಕಾಂಗ್ರೆ ಮಾಡುತ್ತಿರುವ ಪಿತೂರಿ ಕುರಿತು ಎಚ್ಚರಿಸಿದರು.

ವಿದ್ಯುತ್ ಮಗ್ಗಗಳ ನೇಕಾರರನ್ನು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಹೊರಡಿಸಬೇಕೆಂದು ಸಮ್ಮೇಳನವು ಕರೆ ನೀಡಿತ್ತಲ್ಲದೆ ವಿದ್ಯುತ್ ಮಗ್ಗಗಳ ನೇಕಾರರ ಮುಂದಿನ ಹೋರಾಟವನ್ನು ಸಂಘಟಿಸಿ ಅಖಿಲಭಾರತ ಮಟ್ಟದಲ್ಲಿ ನೇತೃತ್ವ ನೀಡಲು ವಿದ್ಯುತ್ ಮಗ್ಗಗಳ ನೇಕಾರರ ಅಖಿಲ ಭಾರತ ಸಮನ್ವಯ ಸಮಿತಿಯನ್ನು ರಚಿಸಿತು. ಇಚಲ್‌ಕರಂಜಿಯ ಕಾಂಮ್ರೆಡ್ ಕೆ.ಎಲ್. ಮಲಬಾದೆಯವರು ಈ ಸಮಿತಿಯ ಸಂಚಾಲಕರಾಗಿದ್ದು ಈ ಸಮಿತಿಯಲ್ಲಿ ಕಾಂಮ್ರೆಡ್ ನಿತ್ಯಾನಂದಸ್ವಾಮಿ ಕರ್ನಾಟಕದ ಪ್ರತಿನಿಧಿಯಾಗಿರುತ್ತಾರೆ. ಸೊಲ್ಲಾಪುರದಲ್ಲಿ ನಡೆದ ಈ ಸಮ್ಮೇಳನದಲ್ಲಿ ಕರ್ನಾಟಕದಿಂದ 14 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ಅಸಂಘಟಿತ ಕಾರ್ಮಿಕರ ಯಶಸ್ವಿ ಮುಷ್ಕರ

ಅಸಂಘಟಿತ ಕಾರ್ಮಿಕರಿಗೆ 1050 ರೂ. ಕನಿಷ್ಟ ವೇತನ ಜಾರಿಗೆ ಕೇಂದ್ರ ಸರ್ಕಾರ ಶಾಸನವೊಂದನ್ನು ಜಾರಿಗೊಳಿಸಿ ಸೇವಾ ಸೌಲಭ್ಯಗಳನ್ನು ನೀಡಬೇಕೆಂದು ಒತ್ತಾಯಿಸಿ ದೇಶವ್ಯಾಪಿ ಆಗಸ್ಟ್ 28, 29 ಮತ್ತು 30ರಂದು ಸಾರ್ವತ್ರಿಕ ಮುಷ್ಕರ ನಡೆಸಲು ಸಿ.ಐ.ಟಿ.ಯು. ನೀಡಿದ ಕರೆಯಂತೆ ರಾಜ್ಯದ ಎಲ್ಲೆಡ ಕಾರ್ಮಿಕರ ಮುಷ್ಕರ ಯಶಸ್ವಿ ಗೊಳಿಸಿರುವ ವರದಿಗಳು ಬರುತ್ತಿವೆ.

ಬೆಂಗಳೂರು

ರಾಜ್ಯದ ಕೈಗಾರಿಕಾ ಕೇಂದ್ರವಾದ ಬೆಂಗಳೂರು ನಗರದಲ್ಲಿನ ಕೃಷ್ಣರಾಜಪುರ, ವೈಟ್‌ಫೀಲ್ಡ್‌ನಲ್ಲಿರುವ ಹ್ಯಾಕ್ಸಿಲರಿ ಮತ್ತು ಇಂಜಿನಿಯರಿಂಗ್ ಎನ್.ಜಿ. ಇ.ಎಫ್. ಹ್ಯಾಕ್ಸಿಲರಿಯ ವಿವಿಧ ಕೈಗಾರಿಕೆಗಳ ಸುಮಾರು 100 ಸಣ್ಣಪುಟ್ಟ ಕೈಗಾರಿಕೆಗಳಲ್ಲಿ ಹಾಗೂ ಕೋ ಆಪರೇಟಿವ್ ಇಂಡಸ್ಟ್ರಿಯಲ್ ಎಸ್ಟೇಟ್‌ನ 6 ಘಟಕ ಗಳು ಯಶಸ್ವಿ ಮುಷ್ಕರ ನಡೆಸಲಾಯಿತು. ಇಲ್ಲಿನ ಹಲವು ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘವಿಲ್ಲದಿದ್ದರೂ ಸಿ.ಐ.ಟಿ.ಯು.ನ ಕರೆಗೆ ಬೆಂಬಲಿಸಿ ಕಾರ್ಮಿಕರು ಮುಷ್ಕರ ಯಶಸ್ವಿ ಗೊಳಿಸಿದರು. ಪೀಣ್ಯ ಕೈಗಾರಿಕಾ ಕೇಂದ್ರ ಸಂಪೂರ್ಣ ಸ್ಥಗಿತವಾಗಿ ಅಭೂತಪೂರ್ವ ಮುಷ್ಕರ ಯಶಸ್ವಿಗೊಂಡಿತು. ಆನೇಕಲ್ ರಸ್ತೆಯ ಜಿಗಣಿ ಇಂಡಸ್ಟ್ರಿಯಲ್ ಪ್ರದೇಶವು ಅಂದು ಪೂರ್ಣ ಮುಷ್ಕರದಿಂದ ಬಂದಾಗಿತ್ತು. ರಾಜಾಜಿನಗರದ ಹಲವು ಕೈಗಾರಿಕಾ ಘಟಕಗಳು ಮುಷ್ಕರದಲ್ಲಿ ಪಾಲ್ಗೊಂಡವು.

ತಂಡೋಪತಂಡವಾಗಿ ವಿವಿಧ ಪ್ರದೇಶಗಳಲ್ಲಿ ಸಿ.ಐ.ಟಿ.ಯು. ಕಾರ್ಯಕರ್ತರು ಕಾರ್ಖಾನೆ ಕಾರ್ಖಾನೆಗಳಿಗೆ ತೆರಳಿ ಮುಷ್ಕರ ಯಶಸ್ವಿಗೊಳಿಸಲು ಕರಪತ್ರದ ಮೂಲಕ ಪ್ರಚಾರ ಕೈಗೊಂಡರು. ಆಗಸ್ಟ್ 29ರಂದು ನಗರದ ನೂರಾರು ಕಾರ್ಖಾನೆಗಳ ಹೋಟೆಲ್, ಆಗರಬತ್ತಿ ಬೀಡಿ ಮುಂತಾದ ವಿಭಾಗಗಳ 2 ಸಾವಿರಕ್ಕೂ ಅಧಿಕ ಜನರು ಪಾಲ್ಗೊಂಡ ಬೃಹತ್ ಮೆರವಣಿಗೆ ಮೈಸೂರು ಬ್ಯಾಂಕ್ ವೃತ್ತದಿಂದ ಹೊರಟು 'ವಿಧಾನಸೌಧ ಚಲೋ' ನಡೆಸಿ ರಾಜಭವನ ತಲುಪಿ ರಾಜ್ಯಪಾಲರಿಗೆ ಬೇಡಿಕೆಗಳಮನವಿ ಅರ್ಪಿಸಿತು.

ಹರಿಹರ

ಇಲ್ಲಿನ ಬೀಡಿ ಕಾರ್ಮಿಕರು, ಕಿರ್ಲೋಸ್ಕರ್ ಕಂಟ್ರಾಕ್ಟ್ ಕೆಲಸಗಾರರು, ರಾಣಿಬೆನ್ನೂರಿನ ನೇಕಾರರು ಮುಷ್ಕರಗಳನ್ನು ಹಾಗೂ ಧರಣಿಯನ್ನು ಯಶಸ್ವಿಗೊಳಿಸಿದಾರೆ.

ಸಿಂಧನೂರು

ಕಿರಾಣಿ ಗುಮಾಸ್ತರು ಬೇಡಿಕೆ ಒತ್ತಾಯಿಸಿ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಮಾಡಿ ತಹಸೀಲ್ದಾರ್‌ರವರಿಗೆ ಮನವಿ ಅರ್ಪಿಸಿ ಬಹಿರಂಗ ಸಭೆ ನಡೆಸಿದರು. ಸಿ.ಐ.ಟಿ.ಯು ಮುಖಂಡರು ಸಭೆಯಲ್ಲಿ ಮಾತನಾಡಿದರು.

ಬಂಟ್ವಾಳ

ತಾಲ್ಲೋಕಿನ ವಿಟ್ಲ ಫರ್ಕಾದ ನಾಡ ಕಛೇರಿ ಎದುರು 29ರಂದು ನೂರು ಮಂದಿ ಕಾರ್ಮಿಕರು ಪ್ರದರ್ಶನ ನಡೆಸಿ ಮನವಿ ಅರ್ಪಿಸಿದರು. ಜನರಲ್ ವರ್ಕರ್ಸ್ ಯೂನಿಯನ್ ಅಧ್ಯಕ್ಷ ಬಿ. ವಾಸುಗಟ್ಟಿ, ಕಾರ್ಯದರ್ಶಿ ಎ.ರಾಮಣ್ಣ ನೇತೃತ್ವ ವಹಿಸಿದ್ದರು.

ಅಕ್ರಮ ದಂಡದ ವಿರುದ್ಧ ಬೀಡಿ ಕಾರ್ಮಿಕರ ಧರಣಿ ಸತ್ಯಾಗ್ರಹ

ತುಮಕೂರು ಜಿಲ್ಲಾ ಬೀಡಿ ವರ್ಕರ್ಸ್ ಯೂನಿಯನ್ (ಸಿ.ಐ.ಟಿ.ಯು.) ನೀಡಿದ ಕರೆಯಂತೆ ಆಗಸ್ಟ್ 29ರಂದು ತುಮಕೂರಿನ ಜ್ಯೋತಿ ಹೋ ಇಂಡಸ್ಟ್ರೀಸ್ ಬೀಡಿ ಕಾರ್ಖಾನೆ ಮುಂಭಾಗದಿಂದ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಬೀಡಿ ಕಾರ್ಮಿಕರು ತಮ್ಮ ಬೇಡಿಕೆಗಳ ಮನವಿ ಅರ್ಪಿಸಿದರು. ಕನಿಷ್ಠವೇತನ, ಕಂಟ್ರಾಕ್ಟ್ ಪದ್ಧತಿ ರದ್ದು, ಹೆರಿಗೆ ಭತ್ಯೆ ವಸತಿ ಸೌಲಭ್ಯ, ಅಕ್ರಮ ದಂಡ ವಸೂಲಿ ರದ್ದು ತುಟ್ಟಿಭತ್ಯೆ ಮುಂತಾದ ಬೇಡಿಕೆಗಳನ್ನು ಮನವಿ ಒಳಗೊಂಡಿತು.

ರಾಜ್ಯ ಬೀಡಿ ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಕಾ||ಮಹಮ್ಮದ್ ದಸ್ತಗೀರ್, ಹೆಚ್.ಸಿ. ಚನ್ನಪ್ಪ, ಗೋವಿಂದರಾಜ್, ಉಮೇಶ್, ರಫೀಕ್ ಅಹಮ್ಮದ್, ಆಯೂಬ್, ಮಕಬುಲ್, ಶ್ರೀಮತಿ ಮಮತಾಜ್ ಉನ್ನಿಸಾ, ಜಾನಿಬಾಷಾ ಮುಂತಾದವರು ನೇತೃತ್ವ ವಹಿಸಿದ್ದರು.

Printed and published by P.Ramachandra Rao on behalf of Communist party of India (Marxist), Karnataka State Committee, 1-50, K.V.Temple Street, Sultanpet, Bangalore - 560 053. Phone No. 75331. Editor: P.RAMA...